ಶನಿವಾರ, ನವೆಂಬರ್ 16, 2024 | ₹ 7.00


www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಂಭ್ರಮ
ನವದೆಹಲಿಯ ಗುರುದ್ವಾರದಲ್ಲಿ ನಡೆದ ಗುರುನಾನಕ್ ಜಯಂತಿ ಕಾರ್ಯಕ್ರಮದಲ್ಲಿ ಬಾಲಕಿಯೊಬ್ಬಳು ಕಾಣಿಸಿಕೊಂಡಿದ್ದು ಹೀಗೆ



ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

ANJANAPURA 10TH Block 30x40 S/F Very Good Location, Immediate Construction 2km From Bannerghatta Road:9964627255

BDA SITE for Sale, Residential and Commercial Anjanapura BDA Layout Narayananagara BCMC Layout, Judicial Layout, Vakil Garden, Kanakapura Road 30x40, 40x60, 50x80 BDA E-Auction and corner sites available. 80% Bank Loan, 9916592400

SALE BDA Anjanapura 5th G Block 30x40 South Facing 1.15Cr also 30x40 South Facing 5th Block 95 lakh Contact 9620041313, 9945373839

ANJANAPURA SITE for sale 4th Block 30x40 Facing south good location immediate construction near last Busstop. 9845132011, 9663554448

ANJANAPURA 6TH Block 30x40 West Facing Site For Sale Good Location Immediate Construction. Contact: 9880812364.

BDA SITE For Sale at Anjanapura Commercial Property 80 Feet Road Genuine Buyer Contact: 9845032419

Banashankari

BANASHANKARI 6TH STAGE- BDA-AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES-9980863245/ 9945333993

MANTRALAYA ENTERPRISES: BUYING And SELLING BDA/`A` Khatha SITES. BANASHANKARI 6th Stage, Anjanapura, Vishweshwaraiah Layout. 9945724472.

BSK 6TH Stage 11th Block BDA 20X30 North facing allottee site, excellent vastu for sale: 7483902455

SALE BSK 6th stage 4th B Block 40x60 west Facing 2Cr also 40x60, South Facing 6th Block 2.10Cr Negotiable all owners site 9945373839, 9620041313

BDA SITE for Sale, Residential and Prime Banashankari 6th Stage, Banashankari 5th Stage, Uttarahalli, Rajarajeshwarinagara, 30x40, 40x60, 50x80, 80% Bank Loan. 9916592400

SITE FOR Sale -Direct Owner 20x30 BDA NF. No. 1561, BSK, 6th stage, 4th 'H' Block (Further extn). Rs. 85 lakhs negotiable. Brokers excuse. 9686622834

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kanakapura Road

SALE BDA approved Balaji layout Kanakapura Road 30x40 East Facing Near metro station Rate 1.25Cr Owner meeting contact 9945373839, 9620041313

Kempegowda Layout

NADAPRABHU KEMPEGOWDA Layout 7th block F Sector 50x80 W/F, 8th Block D sector 164x100 W/F(BDA NOC) and Vishveshwaraiah Layout-3rd-block 40x60 E/F. Contact:9686469799

Nagarabhavi

NAGARABAVI, MALLATHAHALLI village, ITI employees Co-operative Society 2Nos. 30x40`Sites 15,000/- Final,`both South facing for`sale Krishna 9845059328

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

BDA SITE For SALE Nagarbhavi, 2nd Stage, 8th Block, 30x40, North Facing, Top Residential Location 9900069136

Vishweshwariah Layout

"VISHVESHWARAIAH LAYOUT Wanted BDA Sites 20x30,30x40, 40x60, 50x80 for Immediate Settlement, "Anugraha Construction"- 9886294610"

GREVILLEA

HOUSSO
Where smiles become wider



PREMIUM RESIDENTIAL Villa Plots COMMUNITY

DEVANAHALLI - H CROSS

RERA APPROVED — DTCP APPROVED



VILLA PLOT DIMENSIONS

30 X 40 = 1200 SQ. FT
30 X 50= 1500 SQ. FT

PROJECT OVERVIEW

- 20 Mins from Devanahalli Town
- Residential Township
- Clear Legal Titles
- 20 Mins from Whitefield, Hoskote
- VillaPlots
- Well Developed Layout and Eco Friendly

15+ World Class Amenities

PRM/KA/RERA/1254/465/PR/210804/004233
PRM/KA/RERA/1254/465/PR/201215/003753

CORPORATE OFFICE

No. 4C-162, 2nd Floor, 2nd Main, Above SBI Bank, Kasturinagar, Bangalore 560043 | 80 4851 8743

Anantapur | Kurnool | Bellary

For Enquiry
95357 13859
98455 40222
www.housso.co.in

VISHVESHWARIAH LAYOUT 8th Block 40x60 East-facing BDA site for sale, near Muddinapalya Circle. Call: 7829404659

"VISVESHWARAIAH LAYOUT 2nd Block attached Kanakashree Layout 30x50 West`facing BDA Katha 40`feet Road, Opp.Park. 9164089633/ 9663226688"

"30X40, 40X60 RESIDENTIAL BDA SITES 1ST BLOCK, 50X80 COMMERCIAL SITES SALE VISHVESHWARAIAH LAYOUT. CONTACT: 9845143579"

AVAILABLE 40X60 BDA Site Vishveshwaraiah Layout 60ft Road, 3rd Block Ullal Main Road Amma Asharam: 9844603127

Electronic City

SITE FOR Sale. 30x50 size Bettadasanapura village, Bangalore. Contact:- B.P. Chethan :- 9845017611.

Jayanagar

BDA SITE for Sale, Residential and Prime Commercial Jayanagara, JP Nagara, BTM Layout, HSR Layout, Koramangala 30x40, 40x60, 50x80, 80% Bank Loan. 9916592400

J P Nagar

SALE 30X40, 40X60 BDA Prime Corner Property J.P.Nagar 2nd Phase Near Innisfree House School Only Genuine Buyers Call:9986490019

J.P.NAGAR 2ND Phase 30x40 good Residential West facing old House ONLY Site Value 3,15,00,000/- 9845144365

SALE 40X60 JP Nagar 9th Phase 5th B Block East Facing Rate 9500/- Contact 9620041313, 9945373839

Commercial Building

Mysore Road

FIVE FLOORS Commercial Complex, Chamarajpet, Site 5296 Sft. Flat`Roofing Construction 19,000+ Sft. Contact: 9341260793.

Out-Station

From the date of Purchase
Guarantee Rental Income
@ Prestigious Mall Koppikar Road, HUBBALLI
Ground Floor Shop
Min. Rent Rs. 20,500/-
Max. Rent Rs. 45,000/-
(Incl. GST)
First Floor Shop
Min. Rent Rs. 12,320/-
Max. Rent Rs. 27,500/-
(Incl. GST)
Second Floor Shop
Min. Rent Rs. 5,000/-
Max. Rent Rs. 18,000/-
(Incl. GST)
From the date of Purchase, Get Rent
80889 84128
99722 18934

Farm House/ Land/ Resorts

Devanahalli

SALE NANDI hills road 18.8 gunta gated converted eKhata land with 15 furnished AC rooms ready 9Cr non-negotiable Ph:9677002197

Commercial Land

Kengeri

SALE 4500 sqft. S/West Corner, Nagadevanahalli Ring Road. Ideal for Shopping Mall, Hospital, etc. 9845780996

Nagarabhavi

"COMMERCIAL SITE 50x80 East facing Site for sale Nagarabhavi BDA Complex 100`feet Road. Contact: 7892224597"

SALE COMMERCIAL Land with clear titles in Davanagere, Heart of the city adjacent to Highway Prime location suitable for showrooms like Jewellery, Sarees, Garments and Hotels Lodges, measuring 50X150 total area measuring 7500Sq.ft., with good FSI/FAR, South facing Rs.26,000/Sq.ft. Call Verna Developers, MG Road, Bangalore, Mob: 9916310226/ 9620253180.

Commerical

Nagarabhavi

COMMERCIAL 50X80 East Facing Site for Sale, NAGARABHAVI BDA Complex 100 Feet Road. Call: 8105688602.

Seshadripuram

SALE OFFICE Premises Fully Furnished 640 Sqft. No.33, 2 Floor, Swiss Complex, Race Course Road: 9845081411

Real Estate Agents

Mysore

2 ACRE, 20 gunta land Mysore 40 feet Road sale. Price 2500 psft. Contact. 9380586105

Flat

Nagarabhavi

RAJU HIREMATH & CREW
NAGARBHAVI MARVEL
... a laxurious apartment
RED BRICKS Used for Walls
ಗೋಡೆಗಳಿಗೆ ಕೆಂಪು ಇಟ್ಟಿಗೆ ಉಪಯೋಗಿಸಲಾಗಿದೆ
NAGARBHAVI
Near Ullal R.T.O Office
2 BHK & 3 BHK FLATS FOR SALE
Ready to Occupy
Contact
98443 45334

House

Nagarabhavi

30X50 EAST 3 FLOOR 45X50 E/S 5 FLOOR P.G HEJJALA 40X42 4 FLOOR NAGARBHAVI: 9448081380

Vijayanagar

HOUSE FOR SALE, 65x28 EAST FACING 1820 sqft. Vijayanagar 3rd Main Hosahalli, Rental Income Rs. 70,000/- Clear Titles, Genuine Buyers Contact: 9845064657, 9845143415

Residential/ Commercial

Multiple Locations

TENANTED PROPERTIES FOR SALE (ROI Opportunity)
A-grade Independent Buildings with A-grade Tenants :
Koramangala : Rs. 55 Crore, Negotiable.
HRBR Layout : Rs. 65 Crore, Negotiable.
URGENTLY WANTED SITES
Commercial / Residential Plots : 40x60, 50x80, 60x90, 80x120, 150x100, 200x200 And above.
Locations : Sadashiv Nagar, RMV, Dollars Colony, Kumarapark, High Grounds, Cunningham Road, Jayamahal, MG Road, Lavelle Road, Richmond Town, HSR, Koramangala, Indiranagar, Jayanagar & nearby areas. Spot Settlement.
Contact : Mr. SEVENRAJ
98450 20007 / 98457 17777
sevenraj@gmail.com

REAL ESTATE BUYING

Joint Development

Joint Venture

"URGENTLY REQUIRED-PROPERTY any dimensions in &`around Bangalore for Builders (Joint Venture or Individual). Genuine Parties-Call: 9019533999/ 9731379933"

Sites

Anjanapura

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement, genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

WANTED BDA SITES Anjanapura, Banashankari 6th Stage, NPKL Layout, Vishveshwaraiah Layout, Contact: 9845298419

HBR Layout

HRBR/ HBR/ OMBR/ Kasthurinagar Required 50x80, 40x60, 3000 Sq.ft Above Site. Immediate Purchase. Call 9731614500

North

WANTED SITE/ BUILDING ON 60x90 or 50x80 AT BANGALORE NORTH LOCATION FOR IMMEDIATE PURCHASE. OWNERS CALL: 8884433342/ 8884433324.

Multiple Locations

WANTED BDA SITES Anjanapura- Arkavathi Banashankari 6th Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

WANTED/ AVAILABLE Visveswaraiah/ Kempegowda Layout Nagarabhavi BSK 6th Stage 20x30, 30x40, 40x60, 50x80 Immediate Registration: 9845488488

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

WANTED/ AVAILABLE 50x80, 40x60, 30x40, 20x30, BDA Sites Vishveswaraiah Layout, Kempegowda Layout. Contact: 9886634578/ 9742681666

General

General

WANTED 5000 to 20000Sqft and above Residential, Commercial and Industrial Land in Bangalore, Also wanted 5 to 20 Acres Agricultural land in Dabaspet, Devanahalli, Perasandra and Bagepalli Surrounding Villages, Verna Developers, MG-Road, Bangalore, Mob: 9916310226/ 9620253180

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

RENTAL PROPERTIES

Accommodation Wanted

Commercial

COMMERCIAL SPACE wanted 800-1000 sq ft in Gandhinagar, Bangalore 560009. Contact: +91 9900001740.

Accommodation Available

Commercial

NANDIDURGA Road, Jayamahal Extension TO-LET Ground floor 2000,1625, 3625sft fully furnished office premises. 9844168567/ 9900092042

OFFICE SPACE FOR Rent 2000 SqFt Jayanagar 5th Block Next To RV Metro Station 9008030008/ 9844133389

RENT OFFICE Space 1800sft 1st and 2nd Malleshwarm and Sale 10000sqft Land Near Ganga School, Andrahalli Main Road. 9731115176/ 9845513822

SHOP/OFFICE FOR RENT KR PURAM 10K 200SFT NEAR SJES COLLEGE. Contact -9845683671

Industrial And Factory

AVAILABLE OF Industrial Shed of 95000`sqft at Soukya Road, Whitefield. Available Built-to-Suit Warehouse 160000 sqft.`Vijipura Hoskote Contact: 9341234288/ 9663224353/ 9845417487.

Godown

HALEHALLI, KITHAGANUR Road, Warehouse for Rent about 5450 sqft close to Garden City College in K.R. Puram. Contact: 9845036011

BUSINESS

Business to Business

Services

SEEKING EQUITY funds for`25 years old NGO. Entering into Profitable Social Venture. Contact: 7619278091, utkarshequity22@gmail.com

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats,Converted& Agriculture Lands Call:7204995189

JOB OPPORTUNITIES

General

SUPERVISORS WITH 5 + Years experience & Computer Knowledge required for a Manufacturing firm in Chamarajpet. Contact: 080- 26603729. E-mail : admin@mahendraperfumery.com

Multiple Vacancy

WANTED
Job Opening for the FEMALE candidates for various profile like Accountants, CRM, HR, Data Entry Operator, Office Assistance, Graphic Designers, Housekeeping.
MARUDHAR ARTS
85 M. G. Road, Bengaluru-1
Jobs@MarudharArts.com
Mobile No: 734 898 2732

PERSONAL

Change of Name

CHANGE OF NAME
I, VISHAL S/o Channabasappa, residing at Flat No. 110, 2nd Floor, Suvrith Sadan, Doddabele Road, Kengeri,Bengaluru-560060, have changed my name to VISHAL SHIDRAMSHETTAR vide affidavit dated 15-11-2024, before notary Ravi, Bengaluru. Henceforth I shall be called as VISHAL SHIDRAMSHETTAR only

CHANGE OF NAME
We, Madhavi K.V & Sambasiva Rao L, R/at No. B206, Charitha Blossom, 15th Cross, BEML Layout, Bangalore, have changed our minor Son's name from Tohan L S to AADITYA L.S. vide affidavit dated 09.11.2024, before notary Yankoba. Bangalore.

I, T R LAKSHMI NARAYAN have changed my name to T R LAKSHMI NARAYANA vide affidavit dated: 15/11/2024 Before Notary Shreeshail B.Gobbani Bangalore.

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಶ್ರೀ ಪ್ರಸನ್ನ ಗಣಪತಿ ಸನ್ನಿಧಿ

(ಸದಾಶಿವನಗರ ಯುವಕ ಸಂಘದ ಸಂಚಾಲಿತವಾಗಿದೆ)
15ನೇ ಅಡ್ಡರಸ್ತೆ ಸದಾಶಿವನಗರ ಬೆಂಗಳೂರು- 560080

ಭಗವದ್ ಭಕ್ತರಲ್ಲಿ ಸವಿನಯ ಮನವಿ,

ಶ್ರೀ ಕ್ರೋಧಿನಾಮ ಸಂವತ್ಸರ, ಕಾರ್ತಿಕ ಮಾಸ ಕೃಷ್ಣ ಪಕ್ಷದ ಚತುರ್ಥಿ ದಿನಾಂಕ: 19.11.2024ನೇ ಮಂಗಳವಾರ **"ಅಂಗಾರಕ ಸಂಕಷ್ಟಹರ ಚತುರ್ಥಿ"**ಯ ಅಂಗವಾಗಿ ವಿಶೇಷ ಸೇವೆಗಳು ಹಾಗೂ ಪೂಜಾ ಕೈಂಕರ್ಯಗಳನ್ನು ಆಯೋಜಿಸಲಾಗಿದೆ. ಎಲ್ಲಾ ಭಗವದ್ಭಕ್ತರು ಸೇವೆಯಲ್ಲಿ ತೊಡಗಿಸಿಕೊಂಡು ಪೂಜಾ ಕಾರ್ಯಗಳಲ್ಲಿ ಭಾಗವಹಿಸಿ ಭಗವದ್ ಅನುಗ್ರಹಕ್ಕೆ ಪಾತ್ರರಾಗಬೇಕೆಂದು ಸದಾಶಿವನಗರ ಯುವಕ ಸಂಘದ ಆಡಳಿತ ಮಂಡಳಿ ಪರವಾಗಿ ವಿನಂತಿ

ಸೇವಾ ವಿವರ

ಬೆಳಗ್ಗೆ 6.00 ರಿಂದ 7.00 ರವರೆಗೆ	**ಗಣ ಹೋಮ**
ಬೆಳಗ್ಗೆ 7.00 ರಿಂದ 8.00 ರವರೆಗೆ	**ಮಹಾಭಿಷೇಕ**
ಸಂಜೆ 5.30 ರಿಂದ 6.30 ರವರೆಗೆ	**ವಿಶೇಷ ಅಭಿಷೇಕ**

ವಿಶೇಷ ಕಾರ್ಯಕ್ರಮ ಸಂಜೆ 7.00 ರಿಂದ 8.30 ರವರೆಗೆ
ಸಂಗೀತ ಸಂಭ್ರಮ, ಭಕ್ತಿಗೀತ ಗಾಯನ
ವಿದುಷಿ- ಕುಮಾರಿ ಮೇಧಾ ವಿದ್ಯಾಭೂಷಣ್
ಮತ್ತು ತಂಡದವರಿಂದ

8:30ಕ್ಕೆ ಸರಿಯಾಗಿ ಮಹಾಮಂಗಳಾರತಿ
ನಂತರ ಪ್ರಸಾದ ವಿನಿಯೋಗ

ಭಕ್ತಾದಿಗಳು ಕಾಣಿಕೆಯನ್ನು ನಗದು ಹಾಗೂ ವಸ್ತು ರೂಪದಲ್ಲಿ ನೀಡುವುದನ್ನು ಗೌರವಪೂರ್ವಕ ಸ್ವೀಕರಿಸಿ ರಸೀದಿ ನೀಡಲಾಗುವುದು ಅಥವಾ ನೇರವಾಗಿ ಸಂಸ್ಥೆಯ ಖಾತೆಗೆ ನಗದು ಜಮಾ ಮಾಡಬಹುದು.

ಖಾತೆ ಸಂಖ್ಯೆ- 520101199721390
ಐ.ಎಫ್. ಎಸ್. ಸಿ - UBIN0906417
ಬ್ಯಾಂಕ್ ಮತ್ತು ಶಾಖೆ : ಯೂನಿಯನ್ ಬ್ಯಾಂಕ್, ಸದಾಶಿವನಗರ.

ಆಡಳಿತ ಮಂಡಳಿ
ಸದಾಶಿವನಗರ ಯುವಕ ಸಂಘ
ಸರ್ವರಿಗೂ ಆದರದ ಸುಸ್ವಾಗತ

18ರಂದು ಆರೋಗ್ಯ ಉಚಿತ ತಪಾಸಣೆ

ಬೆಂಗಳೂರು: ತ್ಯಾಗರಾಜ ಕೋ ಆಪರೇಟಿವ್ ಬ್ಯಾಂಕಿನ ಸದಸ್ಯರು, ಗ್ರಾಹಕರು ಮತ್ತು ಸಾರ್ವಜನಿಕರಿಗೆ ನ.18ರಂದು ಉಚಿತವಾಗಿ ಆರೋಗ್ಯ ತಪಾಸಣೆ ಶಿಬಿರವನ್ನು ಬನಶಂಕರಿ 3ನೇ ಹಂತದಲ್ಲಿ ಇರುವ ಬ್ಯಾಂಕ್‌ನ ಶಾಖೆ ಎದುರು ಹಮ್ಮಿಕೊಳ್ಳಲಾಗಿದೆ.

ಬನಶಂಕರಿ ರೋಟರಿ ಕ್ಲಬ್, ಸಂಪ್ರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಸಹಯೋಗದಲ್ಲಿ ನಡೆಯುವ ಈ ಶಿಬಿರದಲ್ಲಿ ತಜ್ಞ ವೈದ್ಯರ ತಂಡ ಭಾಗವಹಿಸಲಿದೆ. ಕಣ್ಣಿನ ತಪಾಸಣೆ, ಅಗತ್ಯ ಇರುವವರಿಗೆ ಉಚಿತವಾಗಿ ಕನ್ನಡಕ ವಿತರಣೆ, ಕ್ಯಾನ್ಸರ್ ತಪಾಸಣೆ, ಕಣ್ಣು-ಕಿವಿ-ಮೂಗು ಸಂಬಂಧಿತ ಆರೋಗ್ಯ ತಪಾಸಣೆ ನಡೆಯಲಿದೆ.

ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಶಿಬಿರ ಉದ್ಘಾಟಿಸಲಿದ್ದಾರೆ ಎಂದು ಬ್ಯಾಂಕ್ ಅಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.



ಡೊನಾಲ್ಡ್ ಟ್ರಂಪ್‌ರವರ ಹೊಸ ಸರ್ಕಾರದ ಇಲಾಖೆಯ ಸಾಮರ್ಥ್ಯ!

‘ರತ್ನಪಕ್ಸಿ’, ಟಗರಜೋಗಿ ತಲ್ಲಣಗಳು’ ಕೃತಿಗಳ ಬಿಡುಗಡೆ

‘ಕುರುಬ್ಕಿ’: ಉಣ್ಣೆಯಲ್ಲಿ ಅರಳಿದ ಕಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಖ್ಖನಿ ಡೈರೀಸ್’ ಹಮ್ಮಿಕೊಂಡಿರುವ ‘ಕುರುಬ್ಕಿ’ ಕುರುಬರ ಜೊತೆಗೊಂದು ಪ್ರಯಾಣ ಕಾರ್ಯಾಗಾರದಲ್ಲಿ ಉಣ್ಣೆಯಲ್ಲಿ ಅರಳಿದ ಕಲೆ ಅನಾವರಣಗೊಂಡಿತು. ಜೊತೆಗೆ ಜನಪದ ಕಥೆ ‘ರತ್ನಪಕ್ಸಿ’ ಮತ್ತು ಕುರಿಗಳಿಗೆ ಔಷಧ ನೀಡುವ ಸಮುದಾಯಕ್ಕೆ ಸಂಬಂಧಿಸಿದ ‘ಟಗರಜೋಗಿಗಳ ತಲ್ಲಣ’ ಕೃತಿಗಳ ಬಿಡುಗಡೆಯು ಕಾರ್ಯಕ್ರಮಕ್ಕೆ ಮೆರುಗು ನೀಡಿತು.

ಬೆಂಗಳೂರಿನಲ್ಲಿ ‘ಡಿಸೈನ್’ ತರಬೇತಿ ಕಾಲೇಜುಗಳಿವೆ. ಇಲ್ಲಿ ಕಲಿಯುವವರೆಲ್ಲ ಡಿಜಿಟಲ್ ಮೂಲಕ ವಿನ್ಯಾಸಗಳನ್ನು ಮಾಡುತ್ತಾರೆ. ಆದರೆ, ಕೈಕುಸುರಿ ಬರುವುದಿಲ್ಲ. ಬೆಳಗಾವಿ ಜಿಲ್ಲೆಯ ಕಡೋಲಿಯಲ್ಲಿ ಉಣ್ಣೆ ಉತ್ಪಾದಕರ ಸಹಕಾರ ಸಂಘ ಇದೆ. ಅಲ್ಲಿನ ಮಹಿಳೆಯರು ಉಣ್ಣೆಯಲ್ಲಿ ಹೇಗೆ ಕುಸುರಿ ಕೆಲಸ ಮಾಡುತ್ತಾರೆ ಎಂದು ಇಲ್ಲಿನ ವಿದ್ಯಾರ್ಥಿಗಳು ಕಾರ್ಯಾಗಾರದಲ್ಲಿ ಉತ್ಸಾಹದಿಂದ ವೀಕ್ಷಿಸಿದರು.


ನಗರದಲ್ಲಿ ಶುಕ್ರವಾರ ‘ದಖ್ಖನಿ ಡೈರೀಸ್’ ಹಮ್ಮಿಕೊಂಡಿರುವ ‘ಕುರುಬ್ಕಿ’ ಕುರುಬರ ಜೊತೆಗೊಂದು ಪ್ರಯಾಣ ಕಾರ್ಯಾಗಾರದಲ್ಲಿ ಬೆಳಗಾವಿ ಜಿಲ್ಲೆಯ ಕಡೋಲಿಯ ಕುರುಬ ಸಮುದಾಯದವರು ಉಣ್ಣೆ ನೇಯ್ಗೆಯಲ್ಲಿ ತೊಡಗಿದ್ದರು
ಪ್ರಜಾವಾಣಿ ಚಿತ್ರ: ರಂಜು ಪಿ.

ಸಮುದಾಯದ ನೀಲಕಂಠ ಮಾಮಾ, ವಝೀರ್, ಬಾಬು ಸಾಮ್ಲೇಕರ್ ಅವರು ಕುರಿಗಾಹಿಗಳ ಹಾಡು ಹಾಡಿದರು. ಜನಪದೀಯ ಕಥೆಗಳನ್ನು ಪ್ರಸ್ತುತಪಡಿಸಿದರು. ಕಡೋಲಿಯ ಮಹಿಳೆಯರು ಜನಪದ ಸ್ವಾಗತ ಗೀತೆ ಹಾಡಿದರು. ಉಣ್ಣೆಯ ವಿನ್ಯಾಸಗಳ ಕಲಾಕೃತಿಗಳ ಜೊತೆಗೆ ಫೋಟೊ ಪ್ರದರ್ಶನಗಳೂ ಗಮನಸೆಳೆದವು.

‘ರತ್ನಪಕ್ಸಿ’ ಸಂಪಾದಕ ಕೋಟಿಗಾನಹಳ್ಳಿ ರಾಮಯ್ಯ ಮಾತನಾಡಿ, ‘ನಗರ ಪ್ರದೇಶದ ನಿಮಗೆ ಕುರಿ, ಉಣ್ಣೆ, ಪಶುಪಾಲನೆ, ಮಣ್ಣಿನ ಸಂಸ್ಕೃತಿ, ಜನಪದರ ವಿವೇಕ ಎಲ್ಲ ಸ್ವಲ್ಪ ಅಪರಿಚಿತವಾಗಿದ್ದಂತೆ ಕಾಣುತ್ತಿದೆ. ಈ ಕಾರ್ಯಾಗಾರವು ಅವೆಲ್ಲವನ್ನು ನೀವು ತಿಳಿಯುವಂತೆ ಮಾಡಲಿದೆ. ನಿಮ್ಮ ಸೌಂದರ್ಯ ಪ್ರಜ್ಞೆಯೊಂದಿಗೆ ಒಂದು ಸಮುದಾಯದ ಪ್ರಜ್ಞೆಯನ್ನು ಬೆಸೆಯುವ ಕೆಲಸ ಇದು. ಹೊರಗಿನಿಂದ ಒಳಗೊಳ್ಳುವುದು ಸುಲಭ. ಒಳಗಿನಿಂದ ಒಳಗೊಳ್ಳುವ ಪ್ರಕ್ರಿಯೆಗಳಾಗಬೇಕು’ ಎಂದು ವಿದ್ಯಾರ್ಥಿಗಳಿಗೆ ತಿಳಿಸಿದರು.

‘ಟಗರಜೋಗಿಗಳ ತಲ್ಲಣಗಳು’ ಲೇಖಕ ಚಂದ್ರಪ್ಪ ಸೊಬಟಿ ಮಾತನಾಡಿ. ‘ತಮ್ಮ ಆರೋಗ್ಯದ ಬಗ್ಗೆ ಚಿಂತಿಸದೇ ಕುರಿಗಳ ಆರೋಗ್ಯವನ್ನು ಉಳಿಸಲು ದೇಶದ ಮೂಲೆಯಿಂದ ಮೂಲೆಗೆ ಅಲೆದಾಡುವವರೇ ಟಗರು ಜೋಗಿಗಳು. ಇಡೀ ದೇಶದಲ್ಲಿ ಸಾವಿರದ ಆಸುಪಾಸಿನಲ್ಲಿ ಇರುವ ಅತಿ ಸಣ್ಣ ಸಮುದಾಯ ಇದು’ ಎಂದು ಮಾಹಿತಿ ನೀಡಿದರು.

ಕೃತಿ ಬಿಡುಗಡೆ ಮಾಡಿದ ಕೇಂದ್ರ ವಲಯ ಐಜಿಪಿ ಬಿ.ಆರ್.ರವಿಕಾಂತೇಗೌಡ ಮಾತನಾಡಿ, ‘ನಾವು ಈ ನೆಲವನ್ನು ಬರಡು ಮಾಡುತ್ತಾ ಹೋಗುತ್ತಿದ್ದರೆ ಕುರುಬರು ಅಲೆಮಾರಿಗಳಾಗಿ ಬಂದು ಮಣ್ಣಿನ ಫಲವತ್ತನ್ನು ಹೆಚ್ಚಿಸುವ ಕೆಲಸ ಮಾಡುತ್ತಿದ್ದಾರೆ. ಅವರು ಆರ್ಥಿಕವಾಗಿ ಬಡವರಾಗಿರಬಹುದು. ಸಾಂಸ್ಕೃತಿಕವಾಗಿ ಶ್ರೀಮಂತರು’ ಎಂದು ಬಣ್ಣಿಸಿದರು.

ನ.17ರವರೆಗೆ ಕಾರ್ಯಾಗಾರ ನಡೆಯಲಿದೆ. ಇದು ಜ.31ರಿಂದ ಎರಡು ವಾರ ದೊಡ್ಡಮಟ್ಟದಲ್ಲಿ ದಖ್ಖನಿನ ಕುರುಬರ ಸಂಸ್ಕೃತಿ ಅನಾವರಣಗೊಳ್ಳಲಿದೆ’ ಎಂದು ದಖ್ಖನಿ ಡೈರೀಸ್‌ನ ಸ್ವಾತಿ, ವಿನ್ಯಾಸಕಾರ ಗೋಪಿಕೃಷ್ಣ ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಕಲಾಕೃತಿಗಳ ಪ್ರದರ್ಶನ ನಾಳೆಯಿಂದ

ಬೆಂಗಳೂರು: 3ರಿಂದ 30 ವರ್ಷದ ವರೆಗಿನ ವಿಭಿನ್ನ ಸಾಮರ್ಥ್ಯದ (ಆಟಿಸಂ) ಕಲಾವಿದರು ಬಿಡಿಸಿದ ಕಲಾಕೃತಿಗಳ ಪ್ರದರ್ಶನವನ್ನು ನವೆಂಬರ್ 17ರಿಂದ ನ.19ರವರೆಗೆ ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) ‘ಕ್ಯಾಡ್ರೆ’ ಆಟಿಸಂ ಕೇಂದ್ರ ಹಮ್ಮಿಕೊಂಡಿದೆ.

ಆಟಿಸಂ ಬಗ್ಗೆ ಅರಿವು ಮೂಡಿಸಲು, ಆಟಿಸಂ ಕಲಾವಿದರಿಗೆ ಪ್ರೋತ್ಸಾಹ ನೀಡಲು ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ನ.17ರಂದು ಸಂಜೆ 5.45ರಿಂದ ರಾತ್ರಿ 8ರವರೆಗೆ ಹಾಗೂ ನ.18 ಮತ್ತು 19ರಂದು ಬೆಳಿಗ್ಗೆ 11ರಿಂದ ಸಂಜೆ 5ರವರೆಗೆ ಕಲಾ ಪ್ರದರ್ಶನ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಉದ್ಯೋಗ ಮೇಳ ಇಂದು

ಬೆಂಗಳೂರು: ಕನಕನಗರದಲ್ಲಿರುವ ಟಾಟಾ ಸ್ಟ್ರೈವ್ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್‌ನಲ್ಲಿ ‘ಜಾಬ್ ಡ್ರೈವ್’ ಹೆಸರಿನಲ್ಲಿ ಉದ್ಯೋಗ ಮೇಳ ನ.16ರಂದು ಬೆಳಿಗ್ಗೆ 9.30ರಿಂದ ಮಧ್ಯಾಹ್ನ 3.30ರವರೆಗೆ ನಡೆಯಲಿದೆ.

10ಕ್ಕೂ ಅಧಿಕ ಕಂಪನಿಗಳು, ತಾರಾ ಹೋಟೆಲ್‌ಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಲಿದ್ದು, ತಮಗೆ ಅಗತ್ಯ ಇರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಲಿವೆ. ಎಸ್ಸೆಸ್ಸೆಲ್ಸಿ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ಪಡೆದಿರುವ 18 ರಿಂದ 30 ವರ್ಷದೊಳಗಿನವರು ಅಗತ್ಯ ದಾಖಲೆಗಳೊಂದಿಗೆ ಭಾಗವಹಿಸಬಹುದು ಎಂದು ಟಾಟಾ ಸ್ಟ್ರೈವ್ ಅಧಿಕಾರಿಗಳು ತಿಳಿಸಿದ್ದಾರೆ.

ಮಾಯಸಂದ್ರಕ್ಕೆ ಬಸ್

ಬೆಂಗಳೂರು: ದೇವನಹಳ್ಳಿ ಹಾಗೂ ಬ್ಯಾಡರಹಳ್ಳಿ ಮಾರ್ಗವಾಗಿ ಮಾಯಸಂದ್ರ ಗ್ರಾಮಕ್ಕೆ ನ.18ರಿಂದ ಬಿಎಂಟಿಸಿ ಬಸ್ ಸಂಚಾರ ಆರಂಭಗೊಳ್ಳಲಿದೆ.

ಮೆಜೆಸ್ಟಿಕ್‌ನಿಂದ ಎರಡು ಬಸ್‌ಗಳು ಹೆಬ್ಬಾಳ-ಯಲಹಂಕ-ದೇವನಹಳ್ಳಿ-ಬ್ಯಾಡರಹಳ್ಳಿ ಮಾರ್ಗದ ಮೂಲಕ ತೆರಳಲಿವೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.



ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಶುಕ್ರವಾರ ಕಂಡುಬಂದ ಜನಸಾಗರ   ಪ್ರಜಾವಾಣಿ ಚಿತ್ರ : ಎಂ.ಎಸ್.ಮಂಜುನಾಥ್

ಕೃಷಿ ಯಂತ್ರಗಳತ್ತ ರೈತರ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಳೆ ಬಿಡುವು ಕೊಟ್ಟಿತ್ತು, ಗುರುವಾರದ ಮಳೆಯ ಕುರುಹಾಗಿ ಮಳಿಗೆಗಳ ಅಂಗಳದಲ್ಲಿ ಕೆಸರು ಹಾಗೇ ಉಳಿದಿತ್ತು.. ಆದರೆ ಮೇಳದಲ್ಲಿ, ಕೃಷಿ ಯಂತ್ರೋಪಕರಣಗಳ ಮಳಿಗೆಗಳಲ್ಲಿ ಜನವೋ ಜನ...

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ(ಜಿಕೆವಿಕೆ) ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದ ಎರಡನೇ ದಿನವಾದ ಶುಕ್ರವಾರದಂದು ಮೇಳದ ಅಂಗಳದಲ್ಲಿನ ದೃಶ್ಯಗಳಿವು.

ಕೈಯಲ್ಲೊಂದು ಚೀಲ, ಹೆಗಲಲ್ಲೊಂದು ಬ್ಯಾಕ್‌ಪ್ಯಾಕು, ಕೈತುಂಬಾ ಮಾಹಿತಿ ಪತ್ರಗಳ ರಾಶಿ, ಕಣ್ಣುಗಳು ಮಾತ್ರ ಯಂತ್ರಗಳನ್ನು ಹುಡುಕುತ್ತಿದ್ದವು. ಕಾರ್ಮಿಕರ ಕೊರತೆಯಿಂದ ಹೈರಾಣಾದವರು, 'ನಮ್ಮ ಕೆಲಸಕ್ಕೆ ಬರುವಂತಹ ಯಂತ್ರಗಳಿವೆಯೇ' ಎಂದು ಹುಡುಕಾಟ ನಡೆಸುತ್ತಿದ್ದರು. ಮಳಿಗೆಗೆ ಭೇಟಿ ನೀಡಿದವರು ಅಲ್ಲೇ ಯಂತ್ರ ಬಳಸಿ ನೋಡಿ, ಎದುರಾದ ಸಂದೇಹಗಳಿಗೆ ಉತ್ತರ ಪಡೆದುಕೊಂಡರು. ಕೃಷಿ ವಿಶ್ವವಿದ್ಯಾಲಯಗಳು ಅಭಿವೃದ್ಧಿಪಡಿಸಿರುವ ಬಹು–ಬೆಳೆ ಯಂತ್ರೋಪಕರಣ, ಸಿರಿಧಾನ್ಯ ಸಂಸ್ಕರಿಸುವ ಯಂತ್ರಗಳ ಬಗ್ಗೆ ಮಾಹಿತಿ ಪಡೆದರು. ಸಬ್ಸಿಡಿ ದರದಲ್ಲಿ ಯಂತ್ರಗಳ ಖರೀದಿ ಬಗ್ಗೆ ಹೆಚ್ಚು ವಿಚಾರಿಸುತ್ತಿದ್ದರು.

ತೋಟದೊಳಗೆ ವಸ್ತುಗಳನ್ನು ಸಾಗಿಸುವ ಬುಲೆಟ್ ಕಾರ್ಟ್, ಕೈಚಾಲಿತ ಕಮ್ ಮೋಟಾರ್ ಚಾಲಿತ ಗಾಡಿಗಳು, ಕಡಿಮೆ ಶ್ರಮದಲ್ಲಿ ಏಕಕಾಲಕ್ಕೆ ಹೆಚ್ಚು ಜಾಗದಲ್ಲಿ ಕಳೆ ತೆಗೆಯುವ ಮೂರು ಬ್ರಷ್‌ಗಳಿರುವ ಕೈ ಚಾಲಿತ ಬ್ರಷ್ ಕಟರ್, ಗದ್ದೆ, ಅಡಿಕೆ, ತೆಂಗಿನ ತೋಟಗಳು ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಕಳೆ ತೆಗೆಯುವ ಹತ್ತಾರು ವಿಧದ ಯಂತ್ರಗಳನ್ನು ರೈತರು ಪರಿಶೀಲಿಸುತ್ತಿದ್ದರು. ಕೆಲವರು ಸ್ಥಳದಲ್ಲೇ ಬೇಡಿಕೆ ಸಲ್ಲಿಸುತ್ತಿದ್ದರು.

ಕೃಷಿ ವಿಶ್ವವಿದ್ಯಾಲಯದ ಎಂಜಿನಿಯರಿಂಗ್ ವಿಭಾಗದ ಮಳಿಗೆಯಲ್ಲಿ ಪ್ರದರ್ಶನಕ್ಕಿಟ್ಟಿದ್ದ ನೆಲದ ತೇವಾಂಶ ಅಳೆಯುವ ಹಾಗೂ ಕೊಳವೆ ಬಾವಿಯಲ್ಲಿ ನೀರಿನ ಮಟ್ಟ ಎಷ್ಟಿದೆ ಎಂದು ತಿಳಿಸುವ 'ಸೆನ್ಸರ್' ಆಧಾರಿತ ಸಾಧನಗಳ ಮಾದರಿ ರೈತರನ್ನು ಸೆಳೆಯಿತು. ಒಂದಷ್ಟು ಮಂದಿ 'ಈ ಉಪಕರಣ ಎಲ್ಲಿ ಸಿಗುತ್ತದೆ' ಎಂದು ಕೇಳಿದರೆ, ಕೆಲವರು 'ಇಂಥ ಯಂತ್ರಗಳನ್ನು ಕೃಷಿ ವಿಶ್ವವಿದ್ಯಾಲಯಗಳೂ ಆವಿಷ್ಕರಿಸಬೇಕು' ಎಂದು ಅಭಿಪ್ರಾಯಪಟ್ಟರು.



ಕಳೆ ತೆಗೆಯುವ ವಿವಿಧ ಯಂತ್ರಗಳನ್ನು ಪರೀಕ್ಷಿಸುತ್ತಿರುವ ರೈತರು

2 ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆ

ಬೆಂಗಳೂರು: ಜಿಕೆವಿಕೆ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳಕ್ಕೆ ಶನಿವಾರ ಹಾಗೂ ಭಾನುವಾರ ಪ್ರತಿ ದಿನ ಅಂದಾಜು ಎರಡು ಲಕ್ಷಕ್ಕೂ ಅಧಿಕ ಜನರು ಸೇರುವ ನಿರೀಕ್ಷೆಯಿದ್ದು, ಅಂದು ಈ ಭಾಗದಲ್ಲಿ ವಾಹನ ದಟ್ಟಣೆಯಾಗುವ ಸಾಧ್ಯತೆಯಿದೆ.

ಬ್ಯಾಟರಾಯನಪುರ ಜಂಕ್ಷನ್‌ನಿಂದ ಜಕ್ಕೂರುವರೆಗೆ ವಾಹನ ಸಂಚಾರ ನಿಧಾನಗತಿಯಲ್ಲಿ ಇರಲಿದೆ. ಸವಾರರು ಸಹಕರಿಸಬೇಕು ಎಂದು ಹೆಬ್ಬಾಳ ಸಂಚಾರ ಪೊಲೀಸರು ಕೋರಿದ್ದಾರೆ.

ಕೃಷಿ ಮೇಳಕ್ಕೆ ಸ್ವಂತ ವಾಹನದಲ್ಲಿ ಬರುವವರು, ತಮ್ಮ ಕಾರು ಹಾಗೂ ಬಸ್ಸುಗಳನ್ನು ಜಕ್ಕೂರು ಏರೋಡ್ರಮ್‌ನಲ್ಲಿ ನಿಲುಗಡೆ ಮಾಡಬೇಕು ಎಂದು ಸಂಚಾರ ಪೊಲೀಸರು ಕೋರಿದ್ದಾರೆ.



ಟ್ರೇನಲ್ಲಿರುವ ಕೇಸರಿ ಗೆಡ್ಡೆ ಪ್ರದರ್ಶಿಸಿದ ಲೋಕೇಶ್

ಮೇಳ ಚೆನ್ನಾಗಿದೆ.. ಇನ್ನಷ್ಟು ಸೌಲಭ್ಯ ಬೇಕಿದೆ..

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಳೆದ ವರ್ಷಕ್ಕಿಂತ ಈ ಬಾರಿ ಜನರ ಸ್ಪಂದನೆ ಚೆನ್ನಾಗಿದೆ. ವ್ಯಾಪಾರವೂ ಪರವಾಗಿಲ್ಲ.. ಶೌಚಾಲಯ, ಕಸದಬುಟ್ಟಿ ಕೊರತೆ ಇದೆ. ರೈತರ ಸಂಸ್ಥೆಗಳಿಗೆ ಆದ್ಯತೆ ಮೇಲೆ ಮಳಿಗೆ ನೀಡುವ ವ್ಯವಸ್ಥೆಯಾಗಬೇಕಿತ್ತು.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ(ಜಿಕೆವಿಕೆ) ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳದಲ್ಲಿ ಭಾಗವಹಿಸಿರುವ ವಿವಿಧ ಸಂಘಟನೆಗಳ ಅಭಿಪ್ರಾಯಗಳು.

'ಗುರುವಾರ ಮಳೆಯಿಂದಾಗಿ ಸ್ವಲ್ಪ ಜನರ ಪ್ರತಿಕ್ರಿಯೆ ಕಡಿಮೆ ಇತ್ತು. ಆದರೆ, ಶುಕ್ರವಾರ ಬೆಳಿಗ್ಗೆ 10 ಗಂಟೆಯಿಂದಲೇ ಜನ ಮಳಿಗೆಗಳತ್ತ ಬರುತ್ತಿದ್ದಾರೆ. ವ್ಯಾಪಾರವೂ ಚೆನ್ನಾಗಿದೆ. ಸ್ವಸಹಾಯ ಸಂಘಗಳಿಗೆ ಇನ್ನಷ್ಟು ಪ್ರತ್ಯೇಕ ಮಳಿಗೆ ಇದ್ದಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಅಭಿಪ್ರಾಯಪಟ್ಟಿದ್ದು ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕಿನ ಅನ್ನಪೂರ್ಣೇಶ್ವರಿ ಸ್ತ್ರೀಶಕ್ತಿ ಸ್ವಸಹಾಯ ಸಂಘದ ಮಹಿಳೆಯರು. ಇವರೊಂದಿಗೆ ಮೂರು ಸಂಘಗಳು ಸೇರಿ ಒಂದೇ ಮಳಿಗೆಯಲ್ಲಿ ತಮ್ಮ ಉತ್ಪನ್ನಗಳನ್ನು ಪ್ರದರ್ಶನಕ್ಕಿಟ್ಟಿದ್ದರು.

'ಮೇಳದ ವ್ಯವಸ್ಥೆ ಚೆನ್ನಾಗಿ ಮಾಡಿದ್ದಾರೆ. ಜನರು ನಾಟಿ ಬಿತ್ತನೆ ಬೀಜಗಳನ್ನು ಹುಡುಕಿಕೊಂಡು ಬಂದು ಖರೀದಿಸುತ್ತಿದ್ದಾರೆ. ತರಕಾರಿ ಬೀಜಗಳಿಗೆ ಉತ್ತಮ ಬೇಡಿಕೆ ಇದೆ. ಗುರುವಾರಕ್ಕಿಂತ ಶುಕ್ರವಾರ ಜನರ ಪ್ರತಿಕ್ರಿಯೆ ಚೆನ್ನಾಗಿದೆ' ಎಂದರು ದೇಸಿ ಸೀಡ್ ಪ್ರೊಡ್ಯೂಸರ್ ಕಂಪನಿಯ ಮನು. ಚಾಮರಾಜನಗರದ ಆಕೃತಿ ಎಕೋಫ್ರೆಂಡ್ಲಿ ಎಂಟರ್‌ಪ್ರೈಸಸ್‌ನ ವರ್ಷಾ 'ಪ್ರತಿ ವರ್ಷದಂತೆ ಈ ವರ್ಷವೂ ವ್ಯವಸ್ಥೆ ಚೆನ್ನಾಗಿದೆ' ಎಂದು ಮನು ಮಾತಿಗೆ ದನಿಗೂಡಿಸಿದರು.

'ಮೇಳದ ಅಂಗಳದಲ್ಲಿ ಶೌಚಾಲಯ, ಕಸದ ಬುಟ್ಟಿ ಕೊರತೆ ಇದೆ. ಇನ್ನೊಂದಿಷ್ಟು ಶೌಚಾಲಯಗಳ ಸೌಲಭ್ಯ ಕಲ್ಪಿಸಬೇಕಿತ್ತು' ಎಂದು ಜನಧಾನ್ಯ ರೈತ ಉತ್ಪಾದಕ ಸಂಸ್ಥೆಯ ರಾಜೇಶ್ ಸಲಹೆ ನೀಡಿದರು.

'ಮಳಿಗೆಗಳಿಗೆ ದುಬಾರಿ ಶುಲ್ಕವಿದೆ. ಆ ಶುಲ್ಕವನ್ನು ದೊಡ್ಡ ದೊಡ್ಡ ಕಂಪನಿಗಳು ಪಾವತಿಸಬಹುದೇನೋ, ಆದರೆ, ಸಣ್ಣ ಸಣ್ಣ ರೈತ ಉತ್ಪಾದಕ ಸಂಸ್ಥೆಗಳಿಗೆ ತುಂಬಾ ಹೊರೆಯಾಗುತ್ತದೆ' ಎಂದು ಕೆಲವು ಸಂಸ್ಥೆಗಳು ಅಭಿಪ್ರಾಯ ವ್ಯಕ್ತಪಡಿಸಿದರು.

'ಕೃಷಿಯೇತರ ಹಾಗೂ ವಾಣಿಜ್ಯ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಮುಂಭಾಗದಲ್ಲಿ ಮಳಿಗೆಗಳನ್ನು ಕೊಡುತ್ತಾರೆ. ಸರ್ಕಾರದ ಇಲಾಖೆಗಳು ಪ್ರಾಯೋಜಿಸುವ ಸ್ವಸಹಾಯ ಸಂಘಗಳಿಗೆ, ರೈತ ಉತ್ಪಾದಕ ಸಂಸ್ಥೆಗಳಿಗೆ ಕೊನೆ ಭಾಗದಲ್ಲಿ ಮಳಿಗೆ ಕೊಡುತ್ತಾರೆ. ಇದರಿಂದ ರೈತರ ಉತ್ಪನ್ನಗಳು ವ್ಯಾಪಾರವಾಗುವುದು ಕಷ್ಟ. ಇದರ ಬಗ್ಗೆ ಗಮನ ಹರಿಸಬೇಕು' ಎಂದು ಧಾರವಾಡದ ದೇವಧಾನ್ಯ ರೈತ ಉತ್ಪಾದಕ ಸಂಸ್ಥೆಯ ಸೂರ್ಯಕಾಂತ್ ಅಭಿಪ್ರಾಯಪಟ್ಟರು.



ಪ್ರತಿ ವರ್ಷ ಮೇಳಕ್ಕೆ ಬರುತ್ತೇನೆ. ಈ ವರ್ಷ ಮೇಳದಲ್ಲಿ ಡಿಜಿಟಲ್ ಕೃಷಿಯ ಹಲವು ವಿಶೇಷಗಳನ್ನು ಗಮನಿಸಿದೆ. ಕೃಷಿಗೆ ಸಂಬಂಧಿಸಿದ ವಿಭಿನ್ನ ವಿಷಯಗಳಿವೆ

ಚಂದ್ರಶೇಖರ್, ಮಧುಗಿರಿ



ಮಾಹಿತಿ ತಿಳಿಯಲೆಂದೇ ಪ್ರತಿ ವರ್ಷ ಮೇಳಕ್ಕೆ ಬರುತ್ತೇನೆ. ಈ ಬಾರಿ ಹಣ್ಣಿನ ಬೆಳೆಗೆ ತಗಲುವ ಕೀಟ ನಿಯಂತ್ರಣದ ಬಗ್ಗೆ ಮಾಹಿತಿ ಸಿಕ್ಕಿದೆ. ಮೇಳದ ವ್ಯವಸ್ಥೆ ಚೆನ್ನಾಗಿದೆ

ನಾಗರಾಜ ಎಚ್.ಆರ್. ಹೇರೂರು, ಕುಣಿಗಲ್ ತಾಲ್ಲೂಕು



ಕಳೆದ ವರ್ಷ ಪ್ರದರ್ಶನಕ್ಕಾಗಿ ನಮ್ಮ ರೈತರು ಬೆಳೆದ ಉತ್ಪನ್ನಗಳನ್ನು ಮೇಳಕ್ಕೆ ತಂದಿದ್ದೆವು. ಈ ಬಾರಿ ಮಾರಾಟಕ್ಕೆ ಇಟ್ಟಿದ್ದೇವೆ. ವ್ಯಾಪಾರ ಚೆನ್ನಾಗಿದೆ

ಸೂರ್ಯಕಾಂತ್, ದೇವಧಾನ್ಯ ರೈತ ಉತ್ಪಾದಕ ಕಂಪನಿ, ಧಾರವಾಡ

ಸೇಬು, ಕೇಸರಿ ಸಸಿಗಳಿಗೆ ಮನಸೋತ ರೈತರು

ಬೆಂಗಳೂರು: ಎರಡು ದಿನಗಳಲ್ಲಿ ಸೇಬಿನ ಸಸಿ, ಕೇಸರಿ ಗೆಡ್ಡೆಗಳ ಮಾರಾಟ ಚೆನ್ನಾಗಿದೆ. ಕರ್ನಾಟಕದಲ್ಲೂ ಸೇಬು ಬೆಳೆಯಬಹುದೆಂದು ಖಚಿತವಾದ ಮೇಲೆ, ಅನೇಕ ರೈತರು ತೋಟದಲ್ಲಿ, ಕೆಲವು ನಾಗರಿಕರು ಮನೆಯಂಗಳದಲ್ಲಿ ಸೇಬು ಬೆಳೆಯಲು ಆಸಕ್ತಿ ತೋರುತ್ತಿದ್ದಾರೆ..!

ಮಾಲೂರಿನ ವ್ರೊಲಿವಿನ್ ಅಗ್ರಿಪ್ರೋಹಂ ಕಂಪನಿಯ ಆರ್. ಲೋಕೇಶ್, ಸೇಬಿನ ಸಸಿಯೊಂದನ್ನು ಗ್ರಾಹಕರ ಕೈಗಿಡುತ್ತಾ, ಹೀಗೆ ಮಾತಿಗಿಳಿದರು. ಅಷ್ಟರಲ್ಲೇ 'ಕೇಸರಿ ನಮ್ಮ ವಾತಾವರಣದಲ್ಲಿ ಬೆಳೆಯುತ್ತಾ' ಅಂತ 'ಕೇಳುತ್ತಾ, ಒಂದೆರಡು ಕೇಸರಿ ಗೆಡ್ಡೆ ಕೊಡಿ' ಎಂದು ಕೊಂಡುಕೊಂಡರು ಸಾರ್ವಜನಿಕರೊಬ್ಬರು. 'ಕಾಶ್ಮೀರದಿಂದ ಕೇಸರಿ ಗೆಡ್ಡೆ ತರಿಸಿ, ಏರೋಪೋನಿಕ್ ತಂತ್ರಜ್ಞಾನದಲ್ಲಿ ಬೆಳೆಯಲು ಆರಂಭಿಸಿದೆ. ಅದು ಯಶಸ್ವಿಯಾದ ಮೇಲೆ, ಗೆಡ್ಡೆಗಳನ್ನು ಮಾರಾಟ ಮಾಡುತ್ತಿದ್ದೇನೆ' ಎಂದರು.

'ಕೇಸರಿ ಜೊತೆಗೆ, ಅನ್ನ, ಎಚ್‌ಆರ್ ಎ೦9, ರೆಡ್ ಗೋಲ್ಡ್ ಮೂರು ತಳಿಯ ಸೇಬಿನ ಸಸಿಗಳನ್ನೂ ಮಾರಾಟ ಮಾಡುತ್ತಿದ್ದೇನೆ. ಹೊಸಕೋಟೆ, ಸಿರಾ, ಕೊಡಗಿನ ಭಾಗದಲ್ಲಿ ರೈತರು ಸೇಬು ಬೆಳೆದು ಸ್ಥಳೀಯವಾಗಿ ಮಾರಾಟ ಮಾಡುತ್ತಿದ್ದಾರೆ. ಹೀಗಾಗಿ ಸೇಬನ್ನು ಜಮೀನಿನಲ್ಲಿ, ಮನೆಯಂಗಳದಲ್ಲಿ ಬೆಳೆಯುವ ಆಸಕ್ತರ ಸಂಖ್ಯೆ ಹೆಚ್ಚಿದೆ'. 2 ದಿನಗಳಲ್ಲಿ 100 ಸೇಬಿನ ಸಸಿಗಳು, 200ಕ್ಕೂ ಹೆಚ್ಚು ಕೇಸರಿ ಗೆಡ್ಡೆಗಳು ಮಾರಾಟವಾಗಿವೆ' ಎಂದರು.

ಚಿತ್ರಾವಳಿ



ವಿಶ್ವ ಮಧುಮೇಹ ದಿನದ ಸ್ಮರಣಾರ್ಥವಾಗಿ ಮಧುಮೇಹದ ನಿರ್ವಹಣೆಯ ಬಗ್ಗೆ ಜಾಗೃತಿ ಮೂಡಿಸಲು ರಾಮಯ್ಯ ಸ್ಮಾರಕ ಆಸ್ಪತ್ರೆ ವತಿಯಿಂದ ವಾಕಥಾನ್ ನಡೆಯಿತು. ರಾಮಯ್ಯ ವಿದ್ಯಾನಿಕೇತನದ ವಿದ್ಯಾರ್ಥಿಗಳು, ಆಸ್ಪತ್ರೆ ಸಿಬ್ಬಂದಿ, ವೈದ್ಯರು ಹಾಗೂ ಶುಶ್ರೂಷಕರು ಪಾಲ್ಗೊಂಡಿದ್ದರು



ಬೆಂಗಳೂರಿನ ಬಿ.ಎಂ.ಎಸ್ ತಾಂತ್ರಿಕ ಮಹಾವಿದ್ಯಾಲಯ ವತಿಯಿಂದ ಚೆಸ್ ನೈಟ್ಸ್ ಸಹಯೋಗದೊಂದಿಗೆ ಚೆಸ್ ಸ್ಪರ್ಧೆ ಗುರುವಾರ ಆರಂಭವಾಗಿದ್ದು, ನ.18ರವರೆಗೆ ನಡೆಯಲಿದೆ. ದೇಶದ ಎಲ್ಲ ರಾಜ್ಯಗಳಿಂದ 350ಕ್ಕೂ ಹೆಚ್ಚು ಸ್ಪರ್ಧಿಗಳು ಭಾಗವಹಿಸಿದ್ದಾರೆ. ಕಾಲೇಜಿನ ಪ್ರಾಂಶುಪಾಲ ಭೀಮಶಾ ಆರ್ಯ, ಉಪಪ್ರಾಂಶುಪಾಲ ಶೇಷಾಚಲಂ ಡಿ., ಅಂತರರಾಷ್ಟ್ರೀಯ ತೀರ್ಪುಗಾರರಾದ ಸಲೀಂ ಬೇಗ್, ಅನಿಲ್ ಎನ್.ಜೆ., ದೈಹಿಕ ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕ ಶಿವಕುಮಾರ ಸ್ವಾಮಿ ಜಿ.ವಿ., ತೀರ್ಪುಗಾರ ನಾಗರಾಜ ಸಿ. ಉಪಸ್ಥಿತರಿದ್ದರು

ವಂಚಕರ ಬಗ್ಗೆ ಎಚ್ಚರವಿರಿ ಜೋಯಾಲುಕ್ಕಾಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಲಿ ಮಾರ್ಕೆಟಿಂಗ್ ಹೆಸರಿನಡಿ ಗ್ರಾಹಕರಿಗೆ ಕರೆ ಮಾಡಿ ರಿಯಾಯಿತಿ ದರದಲ್ಲಿ ಚಿನ್ನ ಖರೀದಿಸುವಂತೆ ಹಾಗೂ ಹಣ ಪಾವತಿ ಮಾಡುವಂತೆ ಕಂಪನಿಯಿಂದ ಗ್ರಾಹಕರಿಗೆ ದೂರವಾಣಿ ಕರೆ ಮಾಡುತ್ತಿಲ್ಲ ಎಂದು ಜೋಯಾಲುಕ್ಕಾಸ್ ಸ್ಪಷ್ಟನೆ ನೀಡಿದೆ.

ಜೋಯಾಲುಕ್ಕಾಸ್‌ನ ಸಿಬ್ಬಂದಿ ಎಂದು ಹೇಳಿಕೊಂಡು ವಂಚಕರು, ರಿಯಾಯಿತಿ ದರದಲ್ಲಿ ಚಿನ್ನ ನೀಡಲಾಗುತ್ತಿದೆ ಎಂದು ಕರೆ ಮಾಡುತ್ತಿದ್ದಾರೆ. ಈ ಬಗ್ಗೆ ಗ್ರಾಹಕರು ಎಚ್ಚರಿಕೆಯಿಂದ ಇರಬೇಕು ಎಂದು ಕೋರಿದೆ.

ಮಳಿಗೆಗಳು ಮತ್ತು ಅಧಿಕೃತ ಆನ್‌ಲೈನ್ ವೇದಿಕೆಯಲ್ಲಿ ಮಾತ್ರ ನಮ್ಮ ಉತ್ಪನ್ನಗಳ ಮಾರಾಟ ಮತ್ತು ವಹಿವಾಟು ನಡೆಸಲಾಗುತ್ತಿದೆ ಎಂದು ತಿಳಿಸಿದೆ. ವಂಚನೆ ಕೃತ್ಯ ಎಸಗುವವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಲಿದ್ದೇವೆ. ಸಾರ್ವಜನಿಕರು ಇಂತಹ ದೂರವಾಣಿ ಕರೆ ಬಂದರೆ ಹತ್ತಿರದ ಜೋಯಾಲುಕ್ಕಾಸ್‌ನ ಮಳಿಗೆಗಳು ಅಥವಾ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕು ಎಂದು ಕೋರಿದೆ.



'ಎಂಜಿನಿಯರಿಂಗ್ ವಿಜ್ಞಾನದಲ್ಲಿ ಇತ್ತೀಚಿಗಿನ ಬೆಳವಣಿಗೆ' ಕುರಿತ ವಿಚಾರ ಸಂಕಿರಣದಲ್ಲಿ ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಅವರು ಸ್ಮರಣಿಕೆ ಬಿಡುಗಡೆ ಮಾಡಿದರು

'ಸುಸ್ಥಿರ ಯೋಜನೆಗಳಿಂದ ಪರಿಸರ ರಕ್ಷಣೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಧುನೀಕರಣದ ಭರಾಟೆಯಲ್ಲಿ ಪರಿಸರ ಹಾಳಾಗದಂತೆ ಎಚ್ಚರವಹಿಸಿ, ಸುಸ್ಥಿರ ಅಭಿವೃದ್ಧಿ ಯೋಜನೆ ಅನುಷ್ಠಾನ ಮಾಡುವ ಮೂಲಕ ಮುಂದಿನ ಪೀಳಿಗೆಗೆ ಪರಿಸರ ಉಳಿಸಬೇಕು ಎಂದು ರಾಷ್ಟ್ರೀಯ ಬಾಹ್ಯಾಕಾಶ ಪ್ರಯೋಗಾಲಯ ಕ್ಲಸ್ಟರ್ ಅಧ್ಯಕ್ಷ ಹರೀಶ್ ಬರ್ಶೀಲಿಯಾ ಹೇಳಿದರು.

ರಾಮಯ್ಯ ತಾಂತ್ರಿಕ ಮಹಾ ವಿದ್ಯಾಲಯ ಸೋಮವಾರ ಆಯೋಜಿಸಿದ್ದ 'ಎಂಜಿನಿಯ ರಿಂಗ್ ವಿಜ್ಞಾನದಲ್ಲಿ ಇತ್ತೀಚಿಗಿನ ಬೆಳವಣಿಗೆ' ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದರು.

'ಒಂದು ಟನ್ ಉಕ್ಕು ಉತ್ಪಾದನೆಗೆ ಒಂದು ಟನ್ ಇಂಗಾಲದ ಡೈ ಆಕ್ಸೈಡ್ ಬೇಕು. ಇದರಿಂದ ಪರಿಸರ ಮಾಲಿನ್ಯವಾಗಲಿದೆ. 2070ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವಿಕೆ ಸೃಷ್ಟಿಸುವುದಾಗಿ ನಮ್ಮ ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಈ ರೀತಿ ಮಾಡಬೇಕಾದಲ್ಲಿ ನಮ್ಮ ಯೋಜನೆಗಳು ಸುಸ್ಥಿರವಾಗಿರಬೇಕು' ಎಂದರು.

ಕೇಂದ್ರ ಸರ್ಕಾರ ಈ ಸುಸ್ಥಿರ ಅಭಿವೃದ್ಧಿಗಾಗಿ 24 ರಾಷ್ಟ್ರೀಯ ಯೋಜನೆಗಳನ್ನು ಜಾರಿಗೊಳಿಸಿದೆ. ಸೋಲಾರ್ ಮಿಷನ್, ವಿದ್ಯುತ್ ಚಾಲಿತ ವಾಹನಗಳ ಬಳಕೆ, ಕ್ವಾಂಟಮ್ ಕಂಪ್ಯೂಟಿಂಗ್ ಹೀಗೆ ಹಲವು ಯೋಜನೆಗಳಿವೆ. ಇವುಗಳ ಸಮರ್ಪಕ ಅನುಷ್ಠಾನದಿಂದ ಪರಿಸರ ಮಾಲಿನ್ಯ ತಡೆಗಟ್ಟಬಹುದಾಗಿದೆ ಎಂದರು.

ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಪ್ರೊ. ಅಶೋಕ್ ಎಂ.ರಾಯಚೂರು ಮಾತನಾಡಿ, 'ಬೂಟಿನಿಂದ ಬಟ್ಟೆ ಉತ್ಪಾದನೆವರೆಗೆ ಎಲ್ಲ ಕಡೆ ಸಾಮಗ್ರಿಗಳ ಅವಶ್ಯ ಇದೆ. ನಾವು ನವೀಕರಿಸಬಹುದಾದ ವಸ್ತುಗಳ ಬಳಕೆ ಬಗ್ಗೆ ಹೆಚ್ಚು ಆಲೋಚಿಸಬೇಕು' ಎಂದರು.

'160 ಪ್ರಬಂಧಗಳು ಬಂದಿದ್ದವು. ನಾವು ಪರಿಶೀಲನೆ ಮಾಡಿ 130 ಪ್ರಬಂಧಗಳನ್ನು ಆಯ್ಕೆ ಮಾಡಿದ್ದೇವೆ. ಸೌರಶಕ್ತಿ, ಪವನ ವಿದ್ಯುತ್ ಹೆಚ್ಚು ಬಳಕೆ ಮಾಡಬೇಕು. ವಿದ್ಯಾರ್ಥಿಗಳು ಆವಿಷ್ಕಾರ, ತಂತ್ರಜ್ಞಾನದ ಕಡೆಗೆ ಗಮನ ನೀಡಬೇಕು. ಮಾನವೀಯತೆ ರೂಢಿಸಿಕೊಳ್ಳಬೇಕು' ಎಂದು ಗೋಕುಲ ಶಿಕ್ಷಣ ಸಂಸ್ಥೆ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಮಾಹಿತಿ ನೀಡಿದರು. ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಎಚ್.ವಿ. ಪಾರ್ಶ್ವನಾಥ್, ಶೈಕ್ಷಣಿಕ ಸಲಹೆಗಾರ ಕರಸಿದ್ದಪ್ಪ, ಪ್ರಾಂಶುಪಾಲರಾದ ಎನ್.ವಿ.ಆರ್.ನಾಯ್ಡು ಉಪಸ್ಥಿತರಿದ್ದರು.

ಇಂದಿನಿಂದ ವಿಮಾ ನೌಕರರ ಒಕ್ಕೂಟದ 13ನೇ ಸಮ್ಮೇಳನ

ಬೆಂಗಳೂರು: ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ 13ನೇ ಸಮ್ಮೇಳನವು ನ.16ರಿಂದ 19ರವರೆಗೆ ನಗರದ ಶಿಕ್ಷಕರ ಸದನದಲ್ಲಿ ನಡೆಯಲಿದೆ.

ಎಲ್‌ಐಸಿ ಖಾಸಗೀಕರಣ ಪ್ರಸ್ತಾವಕ್ಕೆ ವಿರೋಧ, ಜಿಎಸ್‌ಟಿ ನೀತಿ ಕೈಬಿಡುವುದು ಸೇರಿದಂತೆ ವಿಮಾ ಪಾಲಿಸಿದಾರರ ಸಮಸ್ಯೆಗಳ ಕುರಿತು ಸಮ್ಮೇಳನದಲ್ಲಿ ಚರ್ಚೆಗಳಾಗಲಿವೆ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರವೀಂದ್ರನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕರ್ನಾಟಕ, ಆಂಧ್ರ ಪ್ರದೇಶ, ತಮಿಳುನಾಡಿನ 900 ನೌಕರರು ಸಮ್ಮೇಳನದಲ್ಲಿ ಭಾಗಿಯಾಗಲಿದ್ದಾರೆ. ವಿಮಾ ವಲಯ ಒಕ್ಕೂಟದ ಅಧ್ಯಕ್ಷ ಪಿ. ಸತೀಶ್ ಅಧ್ಯಕ್ಷತೆ ವಹಿಸಲಿದ್ದಾರೆ. ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಅಖಿಲ ಭಾರತ ಕಿಸಾನ್ ಸಭಾ ಅಧ್ಯಕ್ಷ ಅಶೋಕ್ ಧವಳೆ, ಅಖಿಲ ಭಾರತ ವಿಮಾ ನೌಕರರ ಸಂಘದ ಅಧ್ಯಕ್ಷ ವಿ. ರಮೇಶ್, ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ಮಿಶ್ರ, ನಿಕಟ ಪೂರ್ವ ಅಧ್ಯಕ್ಷ ಅಮಾನುಲ್ಲಾ ಖಾನ್, ಪ್ರಧಾನ ಕಾರ್ಯದರ್ಶಿ ಕೆ. ವೇಣುಗೋಪಾಲ್, ಸಿ.ಐ.ಟಿ.ಯು ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ವಿವಿಧ ಸೌಹಾರ್ದ ಸಂಘಟನೆಗಳ ನಾಯಕರು ಪಾಲ್ಗೊಳ್ಳುವರು ಎಂದು ವಿವರಿಸಿದರು.

ನಗರದಲ್ಲಿ ಇಂದು

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಕರುನಾಡ ಉತ್ಸವ 'ನಮ್ಮ ಹಬ್ಬ': ಮುಖ್ಯ ಅತಿಥಿ: ವೆಂಕಟೇಶ್ ಜಿ., ಅಧ್ಯಕ್ಷತೆ: ಎಚ್.ಜಿ. ಹರ್ಷ, ಆಯೋಜನೆ ಹಾಗೂ ಸ್ಥಳ: ಎಸ್.ಎಸ್.ಆರ್.ವಿ.ಎಂ. ಪಿಯು ಕಾಲೇಜು, ಕನಕಪುರ ರಸ್ತೆ, ಬೆಳಿಗ್ಗೆ 9

'ಯೂಥ್ ಇನ್‌ಸ್ಪೈರ್ಸ್' ರಾಜ್ಯಮಟ್ಟದ ವಿದ್ಯಾರ್ಥಿಗಳ ಸಮಾವೇಶ: ಮುಖ್ಯ ಅತಿಥಿಗಳು: ಎ.ಎಸ್. ಕಿರಣ್ ಕುಮಾರ್, ಡಾ.ಸಿ.ಎನ್. ಮಂಜುನಾಥ್, ಆಯೋಜನೆ: ದಿಶಾ ಭಾರತ್, ಸ್ಥಳ: ಡಾ.ಡಿ. ಪ್ರೇಮಚಂದ್ರ ಸಾಗರ್ ಸಭಾಂಗಣ, ದಯಾನಂದ್ ಸಾಗರ್ ಸಂಸ್ಥೆಗಳು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 9.30



ಎ.ಎಸ್.ಕಿರಣ್ ಕುಮಾರ್

ಕನ್ನಡ ರಾಜ್ಯೋತ್ಸವ, ನಾಟಕೋತ್ಸವ: 'ಮಿ. ಡೂಪ್ಲಿಕೇಟ್' ನಾಟಕ ಪ್ರದರ್ಶನ, ರಚನೆ: ಯು.ಗೋವಿಂದೇಗೌಡ, ನಿರ್ದೇಶನ: ಸುರೇಶ್ ಜಿ., ಧನ್ವಂತ್ರಿ ಬಿ.ಎ., ಆಯೋಜನೆ: ಯಶವಂತಪುರ ವಿಧಾನಸಭಾ ಕ್ಷೇತ್ರ ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಎಲ್.ಎನ್.ಆರ್.ಶಾಲೆ, ರಾಮೋಹಳ್ಳಿ, ಕೆಂಗೇರಿ, ಬೆಳಿಗ್ಗೆ 10

'ಸಶಕ್ತ ಮತ್ತು ಸಮೃದ್ಧ ಭಾರತಕ್ಕಾಗಿ' ಸಮ್ಮೇಳನ: ಮುಖ್ಯ ಅತಿಥಿಗಳು: ಯೋಗೇಂದ್ರ ಸಿಂಗ್ ಯಾದವ್, ಪ್ರತಾಪ್ ರೆಡ್ಡಿ, ಶ್ರೀಕಾಂತ್ ಶರ್ಮ, ಕಲಾ ಪ್ರದರ್ಶನ: ವಿಲಾಸ್ ನಾಯಕ್, ಆಯೋಜನೆ: ಪಿಎಂಐ ಬೆಂಗಳೂರು ಇಂಡಿಯಾ ಚಾಪ್ಟರ್, ಸ್ಥಳ: ಎಚ್‌ಎಎಲ್ ಮ್ಯಾನೇಜ್ಮೆಂಟ್ ಅಕಾಡೆಮಿ, ಮಾರತ್ತಹಳ್ಳಿ, ಬೆಳಿಗ್ಗೆ 10

ವೀರಲೋಕ ಪುಸ್ತಕ ಸಂತೆ: ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, 'ಕಥೆ ಕಟ್ಟೋಣ ಬನ್ನಿ...' ನಿರ್ವಹಣೆ: ಶಿವಕುಮಾರ ಮಾವಲಿ, ಶ್ರೀಧರ ಬನವಾಸಿ, ಆರು ಪುಸ್ತಕಗಳ ಬಿಡುಗಡೆ: ಕಾ.ತ. ಚಿಕ್ಕಣ್ಣ, ಅನಂತ್ ಚಿನಿವಾರ್, ರವಿ ಡಿ. ಚನ್ನಣ್ಣನವರ್, ಜಯಪ್ರಕಾಶ್ ಶೆಟ್ಟಿ, 'ಭಾವ ಸಂಜೆ' ಸಾಂಸ್ಕೃತಿಕ ಕಾರ್ಯಕ್ರಮ, ಆಯೋಜನೆ: ವೀರಲೋಕ ಪ್ರಕಾಶನ, ಸ್ಥಳ: ಶಾಲಿನಿ ಮೈದಾನ, ಜಯನಗರ, ಬೆಳಿಗ್ಗೆ 10ರಿಂದ

'ಪೀಪಲ್ಸ್ ಪ್ಲಾನೆಟ್' ಸರ್ಕಾರೇತರ ಸಂಸ್ಥೆಗೆ ಚಾಲನೆ: ಎನ್.ಎ. ಹ್ಯಾರಿಸ್, ಸ್ಥಳ: ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಲ್ಯಾಂಗ್‌ಫೋರ್ಡ್ ರಸ್ತೆ, ಬೆಳಿಗ್ಗೆ 10.30

ಮಕ್ಕಳ ದಿನಾಚರಣೆ ಪ್ರಯುಕ್ತ ರೋಟರಿ ನಡಿಗೆ ಚಿಣ್ಣರ ಕಡೆಗೆ: ಸಮುದಾಯ ಸೇವಾ ಯೋಜನೆಗೆ ಚಾಲನೆ, ಆಯೋಜನೆ: ರೋಟರಿ ಡಿಸ್ಟ್ರಿಕ್ಟ್, ಸ್ಥಳ: ಲಾಲ್‌ಬಾಗ್, ಬೆಳಿಗ್ಗೆ 11

ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಮೂರು ಪುಸ್ತಕಗಳ ಬಿಡುಗಡೆ: ಸ್ವಾಮಿ ವೀರೇಶಾನಂದ ಸರಸ್ವತಿ, ಪುಸ್ತಕಗಳ ಬಗ್ಗೆ ಮಾತು: ಚಕ್ರವರ್ತಿ ಸೂಲಿಬೆಲೆ, ಉಪಸ್ಥಿತಿ: ಮಂಜುನಾಥ್ ಅಜ್ಜಂಪುರ, ಬಿ.ಪಿ. ಪ್ರೇಮಕುಮಾರ್, ನಾ.ದಿನೇಶ್ ಹೆಗ್ಡೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ರಾಷ್ಟ್ರೋತ್ಥಾನ ಪರಿಷತ್, ಕೆಂಪೇಗೌಡ ನಗರ, ಬೆಳಿಗ್ಗೆ 11

'ಮ್ಯೂಸಿಯಂ ಆಫ್ ಮೆಮೋರಿಸ್' ಹವಾಮಾನ ಬಿಕ್ಕಟ್ಟಿನ ಬಗ್ಗೆ ಪ್ರದರ್ಶನ: ಆಯೋಜನೆ: ಗ್ರೀನ್‌ಪೀಸ್ ಇಂಡಿಯಾ, ಸ್ಥಳ: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೋಗ್ರಫಿ, ಕಸ್ತೂರಿ ಬಾ ರಸ್ತೆ, ಶಾಂತಲಾನಗರ, ಬೆಳಿಗ್ಗೆ 11

ರಾಷ್ಟ್ರೀಯ ಪತ್ರಿಕಾ ದಿನಾಚರಣೆಯ ಅಂಗವಾಗಿ 'ಬದಲಾಗುತ್ತಿರುವ ಪತ್ರಿಕಾ ಮಾಧ್ಯಮದ ಸ್ವರೂಪ' ವಿಚಾರಸಂಕಿರಣ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಪ್ರಾಸ್ತಾವಿಕ ನುಡಿ: ಆಯೇಶಾ ಖಾನಂ, ಆಶಯ ನುಡಿ: ಎಂ. ವೀರಪ್ಪ ಮೊಯಿಲಿ, ಪ್ರಧಾನ ಭಾಷಣ: ಎ. ನಾರಾಯಣ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಮುಖ್ಯ ಅತಿಥಿಗಳು: ಪಿ.ಸಿ. ಮೋಹನ್, ಕೆ.ವಿ. ಪ್ರಭಾಕರ್, ಆಯೋಜನೆ: ಕರ್ನಾಟಕ ಮಾಧ್ಯಮ ಅಕಾಡೆಮಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳ: ಮಹಾತ್ಮ ಗಾಂಧಿ ಸಭಾಂಗಣ, ವಾರ್ತಾ ಸೌಧ, ಇನ್‌ಫೆಂಟ್ರಿ ರಸ್ತೆ, ಬೆಳಿಗ್ಗೆ 11

'ಸಂವಿಧಾನ' ಕುರಿತು ರಾಜ್ಯ ಮಟ್ಟದ ಪ್ರಬಂಧ ಸ್ಪರ್ಧೆ: ಅತಿಥಿಗಳು: ನ್ಯಾ.ಎಚ್.ಎನ್. ನಾಗಮೋಹನದಾಸ್, ಪಿ.ಟಿ. ಶ್ರೀನಿವಾಸ ನಾಯಕ, ಆಯೋಜನೆ: ಸಂವಿಧಾನ ಓದು ಅಭಿಯಾನ–ಕರ್ನಾಟಕ, ಸ್ಥಳ: ಸರ್ಕಾರಿ ಕಲಾ ಕಾಲೇಜು, ಡಾ.ಬಿ. ಆರ್.ಅಂಬೇಡ್ಕರ್ ವೀಧಿ, ಬೆಳಿಗ್ಗೆ 11



ನಾಗಮೋಹನ ದಾಸ್

ಎನ್. ಶ್ರೀದೇವಿ ಅವರ 'ಹಾರ್ಮೋನಿಯಸ್ ಹೊರೈಜನ್', 'ಜಾಯ್ ಆಫ್ ಸ್ಟ್ಯಾಂಪ್ ಕಲೆಕ್ಟಿಂಗ್', 'ಸಾಗಾ ಆಫ್ ಬುದ್ಧಿಸಂ' ಪುಸ್ತಕಗಳ ಬಿಡುಗಡೆ: ಹಂ.ಪ. ನಾಗರಾಜಯ್ಯ, ಕಾರ್ಯಕ್ರಮ ಉದ್ಘಾಟನೆ: ರಾಣಿ ಸತೀಶ್, ಅಧ್ಯಕ್ಷತೆ: ಎಸ್.ಜಿ. ಸುಶೀಲಮ್ಮ, ಮುಖ್ಯ ಅತಿಥಿಗಳು: ವೂಡೇ ಪಿ. ಕೃಷ್ಣ, ಎಸ್. ಶ್ರೀದೇವಿ, ಆಯೋಜನೆ: ಸುಮಂಗಲಿ ಸೇವಾ ಆಶ್ರಮ, ಸ್ಥಳ: ಶೇಷಾದ್ರಿಪುರಂ ಶಿಕ್ಷಣ ದತ್ತಿ ಸಭಾಂಗಣ, ಶೇಷಾದ್ರಿಪುರ, ಬೆಳಿಗ್ಗೆ 11

ಸಾಹಿತ್ಯ ಕಾರ್ಯಕ್ರಮ ಹಾಗೂ ಪುಸ್ತಕ ಪ್ರದರ್ಶನ: ಯು.ಆರ್. ಅನಂತಮೂರ್ತಿ ಅವರ ಸಾಹಿತ್ಯ, ಮೋನೋಗ್ರಾಫ್ ಕುರಿತು ಉಪನ್ಯಾಸ ಹಾಗೂ ಸಾಕ್ಷ್ಯಚಿತ್ರ ಪ್ರದರ್ಶನ: ಭಾಷಣ: ಎನ್. ಮನು ಚಕ್ರವರ್ತಿ, ಎಚ್.ಎಲ್.ಪುಷ್ಪ, ಅಧ್ಯಕ್ಷತೆ: ಮನು ಬಳಿಗಾರ್, ಆಯೋಜನೆ ಹಾಗೂ ಸ್ಥಳ: ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಾದೇಶಿಕ ಕಚೇರಿ, ಕಲಾಗ್ರಾಮದ ಎದುರು, ಜ್ಞಾನಜ್ಯೋತಿ ನಗರ, ಮಲ್ಲತ್ತಹಳ್ಳಿ, ಬೆಳಿಗ್ಗೆ 11



ಮನೆಯಂಗಳದಲ್ಲಿ ಮಾತುಕತೆ: ತಿಂಗಳ ಅತಿಥಿ: ಉಮಾಶ್ರೀ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 4

ಉಮಾಶ್ರೀ

'ಕುರುಬ್ಕಿ' ಕುರುಬರ ಜತೆಗೊಂದು ಪಯಣ: ಉಣ್ಣೆ ಕಾರ್ಯಾಗಾರ, ವಿಚಾರಸಂಕಿರಣ, ಛಾಯಾಚಿತ್ರ ಹಾಗೂ ಕಲಾಕೃತಿ ಪ್ರದರ್ಶನ, ಆಯೋಜನೆ: ದಖ್ಖನಿ ಡೈರೀಸ್, ಸ್ಥಳ: ಸಮಗತ ಫೌಂಡೇಷನ್, 4ನೇ ಮಹಡಿ, ಚರ್ಚ್ ಸ್ಟ್ರೀಟ್, ಬೆಳಿಗ್ಗೆ 11

ಚಿಣ್ಣರ ಉತ್ಸವ: ಚಿತ್ರಕಲೆ, ಸಂಗೀತ, ನೃತ್ಯ, ಮ್ಯಾಜಿಕ್ ಶೊ, ಆಯೋಜನೆ: ಎ.ಎಂ.ಎಸ್. ಗ್ರೂಪ್, ಸ್ಥಳ: ಜವಾಹರ್ ಬಾಲಭವನ, ಕಬ್ಬನ್ ಉದ್ಯಾನ, ಮಧ್ಯಾಹ್ನ 12


ಮಕ್ಕಳ ದಿನಾಚರಣೆ ಪ್ರಯುಕ್ತ 'ಮಾಜಿ ಪ್ರಧಾನಿ ಜವಾಹರ್‌ಲಾಲ್ ನೆಹರೂ ಅವರು ವಿಜ್ಞಾನಕ್ಕೆ ನೀಡಿದ ಕೊಡುಗೆಗಳು' ವಿಷಯದ ಬಗ್ಗೆ ಉಪನ್ಯಾಸ: ಶ್ರೀನಾಥ್ ರತ್ನ ಕುಮಾರ್, ಉದ್ಘಾಟನೆ: ಶ್ರೀನಿವಾಸಲು, ರೇಖಾ ಶ್ರೀನಿವಾಸಲು, ಅಧ್ಯಕ್ಷತೆ: ನಾ. ಶ್ರೀಧರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ, ಸ್ಥಳ: ಸೆಂಟ್ ಕ್ಯಾಥರೀನ್ ಪ್ರೌಢಶಾಲೆ, ಕಾಟನ್‌ಪೇಟೆ ಮುಖ್ಯರಸ್ತೆ, ಮಧ್ಯಾಹ್ನ 2.30

'ಆರ್.ಬಿ.ಮೋರೆ ಮೊದಲ ದಲಿತ ಕಮ್ಯುನಿಸ್ಟ್' ಪುಸ್ತಕ ಬಿಡುಗಡೆ ಹಾಗೂ 'ಅಂಬೇಡ್ಕರ್, ಮೋರೆ ಮತ್ತು ಇಂದಿನ ಸಮರಶೀಲ ದಲಿತ ಚಳವಳಿ: ಸವಾಲುಗಳು, ಸಾಧ್ಯತೆಗಳು' ವಿಚಾರಸಂಕಿರಣ: ಆಶಯ ಭಾಷಣ: ಅಶೋಕ್ ಧವಳೆ, ವಿಷಯ ಮಂಡನೆ: ಮೂಡ್ನಾಕೂಡು ಚಿನ್ನಸ್ವಾಮಿ, ಪುಸ್ತಕ ಪರಿಚಯ: ಬಂಜಗೆರೆ ಜಯಪ್ರಕಾಶ್, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಸೌಹಾರ್ದ, ಐಸಿಇಯು, 1ನೇ ಅಡ್ಡರಸ್ತೆ, ಸಿಎಸ್‌ಐ ಕಾಂಪೌಂಡ್, ಮಧ್ಯಾಹ್ನ 3

ನಾದ ಲಹರಿ: ಗುರು ವಂದನೆ: ಆರ್. ಕೆ. ಪದ್ಮನಾಭ, ಸತೀಶ್ ಹಂಪಿಹೊಳಿ, ಆನೂರು ಅನಂತಕೃಷ್ಣಶರ್ಮ, ಎಚ್.ಎಸ್. ವೇಣುಗೋಪಾಲ್, ರವಿ ಕಶ್ಯಪ್, ಅರುಣ್ ಕುಮಾರ್, ಕರ್ನಾಟಕ ಸಂಗೀತ ಕಛೇರಿ, ಆಯೋಜನೆ ಹಾಗೂ ಸ್ಥಳ: ಆರ್ಟ್ ಆಫ್ ಮ್ಯೂಸಿಕ್, ಸಿದ್ದಣ್ಣ ಲೇಔಟ್, ಮಧ್ಯಾಹ್ನ 3.30

ಕನ್ನಡ ಸೌರಭ ಸಂಭ್ರಮ: ಕೃತಿ ಲೋಕಾರ್ಪಣೆ, ಪತ್ರಿಕೋದ್ಯಮದ ಸ್ಥಿತ್ಯಂತರಗಳು–ನೆನಪಿನಂಗಳದ ಮಾತು ಹಾಗೂ ಚುಟುಕು ಕವಿಗೋಷ್ಠಿ, ಉದ್ಘಾಟನೆ: ಈಶ್ವರ ದೈತೋಟ, ಅಧ್ಯಕ್ಷತೆ: ಎಸ್. ಷಡಕ್ಷರಿ, ಪುಸ್ತಕ ಬಿಡುಗಡೆ: ವನಮಾಲಾ ಸಂಪನ್ನಕುಮಾರ್, ಕೃತಿ ಬಗ್ಗೆ ಮಾತು: ಭಾಗ್ಯಲಕ್ಷ್ಮಿ ಮಗ್ಗೆ, ಸ್ಥಳ: ಹಿರಿಯ ನಾಗರೀಕರ ಕೇಂದ್ರ, 5ನೇ ಅಡ್ಡ ರಸ್ತೆ, ಕಿರ್ಲೋಸ್ಕರ್ ಕಾಲೊನಿ, ಬಸವೇಶ್ವರನಗರ, ಸಂಜೆ 4

26ನೇ ಕಾರ್ತಿಕ ಸಂಗೀತೋತ್ಸವ ಮತ್ತು ವಾರ್ಷಿಕೋತ್ಸವ: ಉದ್ಘಾಟನೆ: ಬಿ.ಕೆ. ಅನಂತರಾಮ್, ವಂಶಿ ಪುರಸ್ಕಾರ: ಚಿದಾನಂದ, ಸಂಗೀತ ಕಛೇರಿ, ಆಯೋಜನೆ: ವಂಶಿ ಅಕಾಡೆಮಿ ಆಫ್ ಮ್ಯೂಸಿಕ್ ಟ್ರಸ್ಟ್, ಸ್ಥಳ: ಶ್ರೀ ರಾಮಮಂದಿರ, ಮಲ್ಲೇಶ್ವರ, ಸಂಜೆ 4



200ರ ಹುಣ್ಣಿಮೆ ಹಾಡು 'ಹಾಡು ಮಲ್ಲೇಶ್ವರ': ಹಂಸಲೇಖ ಮತ್ತು ತಂಡ, ಆಯೋಜನೆ: ಕಾಡು ಮಲ್ಲೇಶ್ವರ ಗೆಳೆಯರ ಬಳಗ, ಸ್ಥಳ: ಶ್ರೀ ಭ್ರಮರಾಂಭ ಸಮೇತ ಶ್ರೀ ಕಾಡುಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ, ಸಂಪಿಗೆ ರಸ್ತೆ, ಮಲ್ಲೇಶ್ವರ, ಸಂಜೆ 6.30

ಹಂಸಲೇಖ

ಸರ್.ಸಿ.ವಿ. ರಾಮನ್ ವಿಜ್ಞಾನ ಉಪನ್ಯಾಸ ದತ್ತಿ ಕಾರ್ಯಕ್ರಮ: 'ವಿಜ್ಞಾನ ಮತ್ತು ವೇದಾಂತ' ವಿಷಯದ ಬಗ್ಗೆ ಉಪನ್ಯಾಸ: ಪ್ರೊ.ಶ್ರೀಕಂಠ ಎ.ಎಸ್., ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ. ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ. ಸಭಾಂಗಣ, ಬಿ.ಎಂ.ಶ್ರೀ. ಕಲಾಭವನ, ಸಂಜೆ 5

5ನೇ ಸಾಂಸ್ಕೃತಿಕ ಉತ್ಸವ: ಉದ್ಘಾಟನೆ: ಆರ್.ಕೆ. ಪದ್ಮನಾಭ, ಉಪಸ್ಥಿತಿ: ಎಚ್. ಎಸ್. ವೇಣುಗೋಪಾಲ್, ಕೊಳಲು ವಾದನ: ಗೋಕುಲಂ ಸಂಗೀತ ಶಾಲೆ ವಿದ್ಯಾರ್ಥಿಗಳು, ಕರ್ನಾಟಕ ಶಾಸ್ತ್ರೀಯ ಸಂಗೀತ: ಪ್ರವರ್ಧನ್, ವಾಸ್ಯವರ್ಧನ ಟ್ರಸ್ಟ್‌ನಿಂದ ನೃತ್ಯ ವೈಭವ, ಆಯೋಜನೆ: ರಂಗವಿಜಯಾ, ಸ್ಥಳ: ರಂಗವಿಠಲ, 5ನೇ ಮುಖ್ಯರಸ್ತೆ, ವೈಯಾಲಿಕಾವಲ್, ಸಂಜೆ 5.45

23ನೇ ವಾರ್ಷಿಕ ಸಂಗೀತ ಉತ್ಸವ: ಸಾನ್ನಿಧ್ಯ: ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿ, ಸಂಗೀತ ಕಛೇರಿ: ಸಂಪಗೋಡು ವಿಘ್ನರಾಜ ಮತ್ತು ತಂಡ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 5.30

ಆನೂರ್ ಎಸ್. ರಾಮಕೃಷ್ಣ ಅವರ ಸ್ಮರಣಾರ್ಥ ಸಂಗೀತ ಕಛೇರಿ: ವೇಣುವಾದನ: ಜಿ. ರವಿಕಿರಣ್, ಪಿಟೀಲು: ಕೇಶವ ಮೋಹನ್ ಕುಮಾರ್, ಮೃದಂಗ: ಆನೂರು ದತ್ತಾತ್ರೇಯ ಶರ್ಮ, ಘಟ: ಎ.ಸೋಮಶೇಖರ್, ಆಯೋಜನೆ: ವಿದ್ವಾನ್ ಶ್ರೀ ಕೆ.ಎನ್. ಕೃಷ್ಣಮೂರ್ತಿ ಗುರುವಂದನಾ ಟ್ರಸ್ಟ್, ಸ್ಥಳ: ಶ್ರೀ ಜಯಮಾರುತಿ ಸೇವಾ ಸಮಿತಿ, ಕಮಲಾನಗರ ಮುಖ್ಯರಸ್ತೆ, ಬಸವೇಶ್ವರನಗರ, ಸಂಜೆ 6

ತಿಂಗಳ ನಾಟಕ ಸಂಭ್ರಮ: ಕುಣಿಗಲ್‌ನ ಮಧುರಿಮ ಥಿಯೇಟರ್ ಅಭಿನಯಿಸುವ, ದೇವನೂರು ಮಹಾದೇವ ಅವರ 'ಒಡಲಾಳ' ನಾಟಕ ಪ್ರದರ್ಶನ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

'ತುಳಸಿ ವಿವಾಹ' ಪ್ರವಚನ: ಚಂದ್ರಶೇಖರ ಆಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಈಜುಕೊಳದ ಬಡಾವಣೆ, ಸುಧೀಂದ್ರನಗರ, ಮಲ್ಲೇಶ್ವರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಮಹದೇವಪುರ ವಲಯ: ರಸ್ತೆ ದುರಸ್ತಿ ಶೀಘ್ರ ಪೂರ್ಣಗೊಳಿಸಲು ಮುಖ್ಯ ಆಯುಕ್ತರ ಆದೇಶ

ಕೆರೆ, ಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯದಲ್ಲಿ ಕೆರೆ, ರಾಜಕಾಲುವೆ ಹಾಗೂ ಬದಿ ಕಾಲುವೆಗಳು ಒತ್ತುವರಿಯಾಗಿರುವುದನ್ನು ಗುರುತಿಸಿ ತೆರವುಗೊಳಿಸಲು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಹದೇವಪುರ ವಲಯದಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದಡಿ ಶುಕ್ರವಾರ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವೆಂಗಯ್ಯನ ಕೆರೆಯಲ್ಲಿ ₹8 ಕೋಟಿ ವೆಚ್ಚದಲ್ಲಿ ಹೂಳೆತ್ತುವ ಕಾಮಗಾರಿ, ಕೆರೆಯ ಸುತ್ತಲೂ ಬೇಲಿ ನಿರ್ಮಾಣ, ಏರಿ ಬಲಪಡಿಸುವ, ವಾಯು ವಿಹಾರ ಮಾರ್ಗ, ಒಳಹರಿವು ದುರಸ್ತಿ ಕಾರ್ಯ, ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಒಳಚರಂಡಿ ನೀರು ಬಾರದಂತೆ ಪಾಲಿಕೆ ವತಿಯಿಂದಲೇ ಪ್ರತಿ ದಿನ 15 ದಶಲಕ್ಷ ಲೀಟರ್ (ಎಂಎಲ್‌ಡಿ) ತ್ಯಾಜ್ಯ ನೀರು ಸಂಗ್ರಹಿಸುವ ಸಾಮರ್ಥ್ಯದ ಸಂಸ್ಕರಣಾ ಘಟಕ ನಿರ್ಮಿಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಕೆರೆಯ ಒತ್ತುವರಿ ಭಾಗವನ್ನು ಗುರುತಿಸಿ ತೆರವುಗೊಳಿಸುವಂತೆ ಮುಖ್ಯ ಆಯುಕ್ತರು ಸೂಚಿಸಿದರು.

ಸಕ್ರಾ ಆಸ್ಪತ್ರೆ ರಸ್ತೆಯಲ್ಲಿ ಮಳೆಗಾಲದ ವೇಳೆ ಪ್ರವಾಹ ಉಂಟಾಗುವುದನ್ನು ತಪ್ಪಿಸಲು ರಸ್ತೆಯಲ್ಲಿ ದುರಸ್ತಿ ಕಾರ್ಯ ಕೈಗೆತ್ತಿಕೊಳ್ಳಲಾಗಿದೆ. ಅದರಂತೆ ರಸ್ತೆ ಭಾಗದಲ್ಲಿ ಹಾದು ಹೋಗುವ ರಾಜಕಾಲುವೆಯ ಎರಡೂ ಬದಿಯ ಸುಮಾರು 120 ಮೀಟರ್ ವ್ಯಾಪ್ತಿಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಾಣ ಮಾಡಿ ಉಳಿದ ಕಡೆ ಡಾಂಬರೀಕರಣ ಮಾಡಲಾಗುತ್ತಿದೆ ಎಂದು ಅಧಿಕಾರಿ ಮಾಹಿತಿ ನೀಡಿದರು.

ಅಧಿಕಾರಿಗಳ ವಿರುದ್ಧ ಕ್ರಮ: ಐಟಿಪಿಎಲ್ ರಸ್ತೆ ಝೂರಿ ವೈಟ್‌ಫೀಲ್ಡ್ ಉಪ ವಿಭಾಗ ಸಹಾಯಕ ಕಂದಾಯ ಅಧಿಕಾರಿ ಕಚೇರಿಯಲ್ಲಿ ನಾಗರಿಕರಿಗೆ ಅನುಕೂಲವಾಗಲು ಸಹಾಯ ಕೇಂದ್ರ, ಮಾಹಿತಿಯ ನಾಮಫಲಕ ಅಳವಡಿಸಬೇಕು. ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಸುಸ್ತಿದಾರರು ಹಾಗೂ ಪರಿಷ್ಕರಣೆ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಾಕಿ ಆಸ್ತಿ ತೆರಿಗೆ ಸಂಗ್ರಹಿಸುವ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ವಲಯ ಆಯುಕ್ತರಿಗೆ ಸೂಚಿಸಿದರು.

ಹೋಟೆಲ್ ಬಳಿ ಕಲ್ವರ್ಟ್ ಡ್ರೈನ್‌ನಲ್ಲಿ ಹೂಳೆತ್ತಿ ಸ್ವಚ್ಛತೆ ಕಾಪಾಡಬೇಕು. ಈ ಸ್ಥಳದಲ್ಲಿ ನೀರು ನಿಲ್ಲುವುದನ್ನು ತಪ್ಪಿಸುವ ಸಲುವಾಗಿ ಶಾಶ್ವತ ಪರಿಹಾರ ನೀಡಬೇಕು ಎಂದು ತುಷಾರ್ ಗಿರಿನಾಥ್ ಹೇಳಿದರು.

ವಲಯ ಆಯುಕ್ತ ರಮೇಶ್, ಮುಖ್ಯ ಎಂಜಿನಿಯರ್ ಲೋಕೇಶ್, ಉಪ ಆಯುಕ್ತ ಶಶಿಕುಮಾರ್ ಉಪಸ್ಥಿತರಿದ್ದರು.

ಬೀದಿ ದೀಪಗಳ ನಿರ್ವಹಣೆಗೆ ₹10 ಲಕ್ಷ

ಮಹದೇವಪುರ ವಲಯದಲ್ಲಿ ಕಾರ್ಮೆಲಾರಾಮ್ ರಸ್ತೆಯಲ್ಲಿ ಎಲ್‌ಇಡಿ ಬೀದಿ ದೀಪಗಳ ಅಳವಡಿಕೆಗಾಗಿ ₹10 ಲಕ್ಷ ಬಿಡುಗಡೆ ಮಾಡಲಾಗುವುದೆಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸಾರ್ವಜನಿಕರಿಗೆ ಭರವಸೆ ನೀಡಿದರು.

ಕಾಡುಬೀಸನಹಳ್ಳಿ ಹಾಗೂ ಪಣತ್ತೂರಿನ ರಸ್ತೆಯಲ್ಲಿ ಚರಂಡಿ ಸಮಸ್ಯೆಯಿಂದಾಗಿ ಮಳೆಗಾಲದಲ್ಲಿ ಪ್ರವಾಹ ಸೃಷ್ಟಿಯಾಗಿ ರಸ್ತೆ ಸಂಪೂರ್ಣ ಹದಗೆಟ್ಟಿದೆ ಎಂದು ನಾಗರಿಕರು ಹೇಳಿದಾಗ, ಕೂಡಲೇ ದುರಸ್ತಿ ಕಾರ್ಯ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅನಧಿಕೃತ ಫ್ಲೆಕ್ಸ್, ಬ್ಯಾನರ್ ತೆರವುಗೊಳಿಸಿ, ಟಿನ್ ಫ್ಯಾಕ್ಟರಿ ಬಳಿ ಸ್ಕೈವಾಕ್ ತೆರವುಗೊಳಿಸಿ, ಕಸವನಹಳ್ಳಿ ಕೆರೆ ಬಳಿ ತ್ಯಾಜ್ಯ ಸುಡುತ್ತಿದ್ದು, ಮಾಲಿನ್ಯ ಉಂಟಾಗುತ್ತಿದೆ. ಸನ್ನಿ ಬ್ರೂಕ್ ಬಡಾವಣೆ ಮಳೆಗಾಲದಲ್ಲಿ ಜಲಾವೃತವಾಗುತ್ತಿದ್ದು,ಶಾಶ್ವತ ಪರಿಹಾರ ಕಲ್ಪಿಸಿ, ಕಾಲೊನಿಗಳಲ್ಲಿ ಮೂಲಸೌಕರ್ಯ ಕಲ್ಪಿಸಿ ಎಂಬ ದೂರು, ಮನವಿಗಳಿಗೆ ಸ್ಪಂದಿಸಿ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

'ಪಾದಚಾರಿ ಮಾರ್ಗದಲ್ಲಿ ವಾಹನ: ಬಿಬಿಎಂಪಿ, ಪೊಲೀಸರ ನಿರ್ಲಕ್ಷ್ಯ'


ಪ್ರೊ.ಬಿ.ಕೆ. ಚಂದ್ರಶೇಖರ್

'ಬೀದಿಬದಿ ವ್ಯಾಪಾರಿಗಳಿಗೆ ಅನ್ವಯವಾಗುವ ಆದೇಶ, ಕಾರು ಮತ್ತು ಸ್ಕೂಟರ್‌ಗಳನ್ನು ಪಾದಚಾರಿ ಮಾರ್ಗದ ಮೇಲೆ ಯಾವ ಅಂಜಿಕೆ, ಕಳಕಳಿಯಿಲ್ಲದೆ ನಿಲ್ಲಿಸುತ್ತಿರುವವರಿಗೆ ಅನ್ವಯಿಸುವುದಿಲ್ಲವೇ' ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಪ್ರಶ್ನಿಸಿದ್ದಾರೆ.

'ಬಹುಪಾಲು ಬಡಾವಣೆಗಳಲ್ಲಿ ಬಿಬಿಎಂಪಿ ಮತ್ತು ಸಂಚಾರ ಪೊಲೀಸ್ ವ್ಯವಸ್ಥೆಯ ನಿರ್ಲಕ್ಷ್ಯದಿಂದ ಪಾದಚಾರಿ ಮಾರ್ಗದ ಮೇಲೆ ವಾಹನ ನಿಲುಗಡೆ ಮಾಡಲಾಗುತ್ತಿದೆ. ನಗರದ ಈ ಅವ್ಯವಸ್ಥೆ ಸರಿಯಾದ ನಂತರ, ವೀಕ್ಷಣಾ ಗೋಪುರ (ಸ್ಕೈ ಡೆಕ್) ನಿರ್ಮಿಸುವುದು ಸರ್ಕಾರದ ವಿವೇಕದ ನಡೆಯಾಗಲಿದೆ' ಎಂದಿದ್ದಾರೆ.

'ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಇನ್ನು ಮುಂದೆ ರಸ್ತೆ ಮೇಲೆ ವ್ಯಾಪಾರಕ್ಕೆ ಅವಕಾಶವಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ, ಬನಶಂಕರಿ, ಬಸವನಗುಡಿ ಹಾಗೂ ಜಯನಗರದಲ್ಲಿ ಸುಮಾರು ವರ್ಷಗಳಿಂದ ಗಮನಿಸಿರುವಂತೆ, ತರಕಾರಿ, ಹೂವು, ಹಣ್ಣು ಹಾಗೂ ಇನ್ನಿತರೆ ಪದಾರ್ಥಗಳನ್ನು ಪಾದಚಾರಿ ಮಾರ್ಗದಲ್ಲೇ ಮಾರಾಟ ಮಾಡಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ವ್ಯಾಪಾರ ರಸ್ತೆಗೂ ಬಂದಿದೆ. ಹೀಗಾಗಿ, ಅಪಘಾತಗಳು ಉಂಟಾಗುತ್ತಿವೆ' ಎಂದು ಹೇಳಿದ್ದಾರೆ.

ಹನಿಟ್ರ್ಯಾಪ್: ಇನ್‌ಸ್ಪೆಕ್ಟರ್‌ಗೆ ನ್ಯಾಯಾಂಗ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಶಾಸಕ ಮುನಿರತ್ನ ಅವರು ನಡೆಸಿದ್ದರು ಎನ್ನಲಾದ ಹನಿಟ್ರ್ಯಾಪ್ ಪ್ರಕರಣದಲ್ಲಿ ಒಳಸಂಚು ರೂಪಿಸಿದ್ದ ಆರೋಪದ ಅಡಿ ಬಂಧನಕ್ಕೆ ಒಳಗಾಗಿರುವ ಇನ್‌ಸ್ಪೆಕ್ಟರ್ ಐಯಣ್ಣ ರೆಡ್ಡಿ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಸಿಐಡಿಯ ವಿಶೇಷ ತನಿಖಾ ದಳದ (ಎಸ್‌ಐಟಿ) ಪೊಲೀಸರು ಗುರುವಾರ ಐಯಣ್ಣ ಅವರನ್ನು ಬಂಧಿಸಿದ್ದರು.

ಆರೋಪಿಯನ್ನು ಶುಕ್ರವಾರ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಹೆಬ್ಬಗೋಡಿ ಠಾಣೆಯ ಇನ್‌ಸ್ಪೆಕ್ಟರ್ ಐಯಣ್ಣ ರೆಡ್ಡಿ ಅವರನ್ನು ಸಿಐಡಿ ಕಚೇರಿಯಲ್ಲೇ ಗುರುವಾರ ರಾತ್ರಿ ವಿಚಾರಣೆಗೆ ಒಳಪಡಿಸಲಾಗಿತ್ತು.

'ಮುನಿರತ್ನ ಅವರು ಎಲ್ಲಿ ಹನಿಟ್ರ್ಯಾಪ್ ನಡೆಸಿದ್ದರು? ಅದರಲ್ಲಿ ಐಯಣ್ಣ ಅವರ ಪಾತ್ರ ಏನು? ಎಂಬುದರ ಕುರಿತು ಪ್ರಶ್ನೆಗಳನ್ನು ಕೇಳಿ ಮಾಹಿತಿ ಪಡೆದುಕೊಳ್ಳಲಾಗಿದೆ. ಕೆಲವು ಮುಖಂಡರಿಗೆ ಆರೋಪಿಗಳು, ಎಚ್‌ಐವಿ ಚುಚ್ಚುಮದ್ದು ಪ್ರಯೋಗಿಸಲು ಸಂಚು ರೂಪಿಸಿದ್ದರು ಎಂಬ ಆರೋಪಗಳಿವೆ. ಆ ಪ್ರಕರಣದಲ್ಲಿ ಆರೋಪಿಯ ಪಾತ್ರದ ಕುರಿತು ಮಾಹಿತಿ ಕಲೆ ಹಾಕಲಾಗುತ್ತಿದೆ' ಎಂದು ಎಸ್‌ಐಟಿ ಪೊಲೀಸರು ಹೇಳಿದರು.

ಚಂದ್ರಾ ಲೇಔಟ್ ಠಾಣೆ ಪೊಲೀಸರ ಕಾರ್ಯಾಚರಣೆ: ಇಬ್ಬರ ಬಂಧನ

ಕದ್ದ ಮೊಬೈಲ್ ಕೊರಿಯರ್‌ನಲ್ಲಿ ಕೇರಳಕ್ಕೆ ರವಾನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಮೊಬೈಲ್ ಫೋನ್‌ಗಳನ್ನು ಕಳ್ಳತನ ಮಾಡಿ, ಹೊರ ರಾಜ್ಯಗಳಲ್ಲಿ ಮಾರಾಟ ಮಾಡುತ್ತಿದ್ದ ಹಾಗೂ ಆ ಮೊಬೈಲ್‌ಗಳನ್ನು ಸ್ವೀಕರಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಚಂದ್ರಾ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಭದ್ರಾವತಿಯ ಹೊಸಮನೆ ಮುಖ್ಯರಸ್ತೆಯ ಶ್ರೀನಿವಾಸ್ ಹಾಗೂ ಕೇರಳದ ಶಫೀಕ್ ಬಂಧಿತರು.

ಆರೋಪಿಗಳಿಂದ ₹10.50 ಲಕ್ಷ ಮೌಲ್ಯದ 52 ಮೊಬೈಲ್ ಫೋನ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮೊಬೈಲ್ ಫೋನ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿ ಶ್ರೀನಿವಾಸ್‌ನ ಸಹಚರರು ಹಾಗೂ ಕೇರಳದಲ್ಲಿ ಮೊಬೈಲ್ ಸ್ವೀಕರಿಸುತ್ತಿದ್ದ ಮತ್ತೊಬ್ಬ ಆರೋಪಿ ಸಬಿನ್ ಎಂಬಾತ ತಲೆಮರೆಸಿಕೊಂಡಿದ್ದು, ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.


ಶ್ರೀನಿವಾಸ್


ಶಫೀಕ್

ಜನದಟ್ಟಣೆ ಪ್ರದೇಶದಲ್ಲೇ ಕಳ್ಳತನ: ಶ್ರೀನಿವಾಸ್ ಹಾಗೂ ಆತನ ನಾಲ್ವರು ಸಹಚರರು ಸಭೆ-ಸಮಾರಂಭ, ಜಾತ್ರೆ ಹಾಗೂ ಹೆಚ್ಚಿನ ಜನಸಂದಣಿಯಿರುವ ಕಡೆಗಳಿಗೆ ತೆರಳಿ ಮೊಬೈಲ್ ಫೋನ್ ಕಳ್ಳತನ ಮಾಡುತ್ತಿದ್ದರು. ಕದ್ದ ಮೊಬೈಲ್ ಫೋನ್‌ಗಳನ್ನು ಕೇರಳದಲ್ಲಿದ್ದ ಆರೋಪಿಗಳಿಗೆ ಕೊರಿಯರ್‌ನಲ್ಲಿ ರವಾನೆ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ವಾಪಸ್ ಬಂದಿದ್ದ ಕೊರಿಯರ್: 'ಕೆಲವು ದಿನಗಳ ಹಿಂದೆ ಆರೋಪಿಗಳು ಕೇರಳದ ವಿಳಾಸಕ್ಕೆ ಕಳುಹಿಸಿದ್ದ ಕೊರಿಯರ್ ಬಾಕ್ಸ್ ಅನ್ನು ಯಾರೂ ಸ್ವೀಕರಿಸದ ಕಾರಣ ವಾಪಸ್ ಬಂದಿತ್ತು. ಡಿಟಿಡಿಸಿ ಕೊರಿಯರ್ ಶಾಖೆಯ ವ್ಯವಸ್ಥಾಪಕ, ಕೊರಿಯರ್ ಬಾಕ್ಸ್ ಮೇಲಿದ್ದ ಮೊಬೈಲ್ ಸಂಖ್ಯೆಗೆ ಹಲವು ಬಾರಿ ಕರೆ ಮಾಡಿದ್ದರೂ ಆತ ಸ್ವೀಕರಿಸಿರಲಿಲ್ಲ. ಬಳಿಕ, ಕೊರಿಯರ್ ಕಂಪನಿ ಸಿಬ್ಬಂದಿ ಬಾಕ್ಸ್ ತೆರೆದು ನೋಡಿದಾಗ ಅದರಲ್ಲಿ 12 ಮೊಬೈಲ್ ಫೋನ್‌ಗಳು ಪತ್ತೆಯಾಗಿದ್ದವು. ಬಳಿಕ ವ್ಯವಸ್ಥಾಪಕ ಚಂದ್ರಾ ಲೇಔಟ್ ಪೊಲೀಸರಿಗೆ ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಕೊರಿಯರ್ ಕಳಿಸಿದ್ದ ಆರೋಪಿ ಶ್ರೀನಿವಾಸ್‌ನನ್ನು ಭದ್ರಾತಿಯಲ್ಲಿ ಬಂಧಿಸಿ ವಿಚಾರಣೆ ನಡೆಸಿದಾಗ, 'ಬೆಂಗಳೂರಿನಲ್ಲಿ ಕದ್ದ ಮೊಬೈಲ್‌ಗಳನ್ನು ಕೊರಿಯರ್ ಮಾಡುತ್ತಿದ್ದೆ' ಎಂದು ತಿಳಿಸಿದ್ದ. ಆರೋಪಿ ನೀಡಿದ ಮಾಹಿತಿ ಮೇರೆಗೆ ಕೇರಳದಲ್ಲಿ ಮೊಬೈಲ್ ಸ್ವೀಕರಿಸುತ್ತಿದ್ದ ಶಫೀಕ್‌ನನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ವಾಹನ ಕಳ್ಳತನ: 12 ಆರೋಪಿಗಳ ಬಂಧನ

ಬೆಂಗಳೂರು: ನಗರದ ಹಲವು ಪೊಲೀಸ್ ಠಾಣಾ ವ್ಯಾಪ್ತಿಯ ಮನೆಗಳ ಎದುರು ಹಾಗೂ ರಸ್ತೆ ಬದಿಯಲ್ಲಿ ನಿಲುಗಡೆ ಮಾಡಿದ್ದ ವಿವಿಧ ಮಾದರಿಯ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ 12 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕಾಡುಗೋಡಿ, ಬಾಣಸವಾಡಿ, ಸೋಲದೇವನಹಳ್ಳಿ, ಆರ್.ಟಿ.ನಗರ, ಬಾಗಲಗುಂಟೆ, ಚಿಕ್ಕಜಾಲ, ಎಲೆಕ್ಟ್ರಾನಿಕ್ ಸಿಟಿ ಠಾಣೆಯ ಪೊಲೀಸರು ನಡೆಸಿದ ಕಾರ್ಯಾಚರಣೆಯಲ್ಲಿ ಕಳ್ಳತನ ಮಾಡಿದ್ದ ₹60 ಲಕ್ಷ ಮೌಲ್ಯದ ವಿವಿಧ ಮಾದರಿಯ 62 ವಾಹನಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಒಟ್ಟು ಏಳು ಠಾಣೆಗಳ ಪೊಲೀಸರು, ಒಟ್ಟು 32 ಪ್ರಕರಣಗಳನ್ನು ಪತ್ತೆಹಚ್ಚಿದ್ದಾರೆ.

928 ಬಸ್‌ಗಳಲ್ಲಿ ಧ್ವನಿ ಪ್ರಕಟಣೆ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೃಷ್ಟಿದೋಷ ಇರುವವರೂ ಸೇರಿದಂತೆ ಅಂಗವಿಕಲರಿಗೆ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ (ಬಿಎಂಟಿಸಿ) 928 ಬಸ್‌ಗಳಲ್ಲಿ ಧ್ವನಿ ಪ್ರಕಟಣೆ ವ್ಯವಸ್ಥೆಯನ್ನು ಅಳವಡಿಸಲಾಗಿದೆ' ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ತಿಳಿಸಿದೆ.

'ಅಂಗವಿಕಲರ ಸುಗಮ ಸಂಚಾರಕ್ಕೆ ಅಗತ್ಯ ಕ್ರಮ ಕೈಗೊಳ್ಳುವಂತೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಗೆ (ಬಿಎಂಟಿಸಿ) ನಿರ್ದೇಶಿಸಬೇಕು'ಎಂದು ಕೋರಿ ಬೆಂಗಳೂರಿನ 'ಶ್ರೇಯಸ್ ಗ್ಲೋಬಲ್ ಟ್ರಸ್ಟ್ ಫಾರ್ ಸೋಷಿಯಲ್ ಕಾಸ್' ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಎಂಟಿಸಿ ಪರ ಹಾಜರಿದ್ದ ವಕೀಲರು, ಅರ್ಜಿದಾರರ ಮನವಿಗೆ ಸಂಬಂಧಿಸಿದ ಕ್ರಮಗಳನ್ನು ಜಾರಿಗೊಳಿಸಿರುವ ಕುರಿತಂತೆ ನ್ಯಾಯಪೀಠಕ್ಕೆ ಮಾಹಿತಿ ನೀಡಿದರು.


ಮಲ್ಲೇಶ್ವರದಲ್ಲಿ ನಡೆದ ಕಡಲೆಕಾಯಿ ಪರಿಷೆ ಸಂದರ್ಭದಲ್ಲಿ ಮಳೆ ಬಂದಾಗ ವ್ಯಾಪಾರಿಗಳು ಪ್ಲಾಸ್ಟಿಕ್ ಹೊದಿಕೆಗಳಿಂದ ಕಡಲೆಕಾಯಿ ಮುಚ್ಚಿದ್ದರು. ನಾಗರಿಕರು ಛತ್ರಿ ಹಿಡಿದು ಸಾಗಿದರು – ಪ್ರಜಾವಾಣಿ ಚಿತ್ರ

ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರವೂ ಮಳೆ ಮುಂದುವರಿದಿದ್ದು, ಆಗಾಗ ಬಿರುಸಿನ ಮಳೆಯಾಗಿ ಸಂಚಾರ ಅಸ್ತವ್ಯಸ್ತವಾಗಿತ್ತು.

ಶುಕ್ರವಾರ ಬೆಳಿಗ್ಗೆಯಿಂದಲೂ ಮೋಡ ಕವಿದ ವಾತಾವರಣವಿತ್ತು. ಮಧ್ಯಾಹ್ನ ಹಾಗೂ ಸಂಜೆ ವೇಳೆಯಲ್ಲಿ ಹೆಚ್ಚು ಮಳೆಯಾಯಿತು. ರಸ್ತೆಗಳಲ್ಲಿ ವಾಹನ ದಟ್ಟಣೆ ಉಂಟಾಯಿತು. ಅಲ್ಲದೆ, ಕೃಷಿ ಮೇಳ ಹಾಗೂ ಮಲ್ಲೇಶ್ವರದಲ್ಲಿ ನಡೆದ ಕಡಲೆಕಾಯಿ ಪರಿಷೆಗೆ ಒಂದಷ್ಟು ಅಡ್ಡಿಯಾಯಿತು.

ವಿದ್ಯಾಪೀಠ, ಯಲಹಂಕ, ಸಂಪಂಗಿರಾಮನಗರ, ನಂದಿನಿ ಲೇಔಟ್, ಪುಲಕೇಶಿ ನಗರದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಒಂದು ಸೆಂ.ಮೀ.ಗೂ ಹೆಚ್ಚಿನ ಮಳೆಯಾಯಿತು.

ನಗರದ ಉಳಿದ ಬಹುತೇಕ ಪ್ರದೇಶದಲ್ಲಿ ಸಾಧಾರಣ ಮಳೆಯಾಯಿತು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಟರಾಯನಪುರ ಹಾಗೂ ಪೀಣ್ಯ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಾಯಂಡಹಳ್ಳಿ ಜಂಕ್ಷನ್‌ನಲ್ಲಿ ಸಂಭವಿಸಿದ ಅಪಘಾತದಲ್ಲಿ ಭಾನು(59) ಎಂಬುವವರು ಮೃತಪಟ್ಟಿದ್ದಾರೆ.

'ಮೈಸೂರು ರಸ್ತೆಯ ನಾಯಂಡಹಳ್ಳಿ ಜಂಕ್ಷನ್ ಕಡೆಯಿಂದ ಕೆ.ಆರ್.ಮಾರುಕಟ್ಟೆ ಕಡೆಗೆ ಖಾಸಗಿ ಬಸ್‌ವೊಂದು ಸಂಚರಿಸುತ್ತಿತ್ತು. ಬಿಎಚ್‌ಇಎಲ್ ಬಳಿಯ ಕೆಎಸ್‌ಆರ್‌ಟಿಸಿ ಘಟಕ 5ರ ಬಳಿ ಮಹಿಳೆ ನಿಂತಿದ್ದರು. ವೇಗವಾಗಿ ಬಂದ ಬಸ್, ಮಹಿಳೆಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಮಹಿಳೆ ಕೆಳಕ್ಕೆ ಬಿದ್ದಿದ್ದರು. ಅವರ ಎರಡೂ ಕಾಲುಗಳ ಮೇಲೆ ಬಸ್ಸಿನ ಚಕ್ರಗಳು ಹರಿದ ಪರಿಣಾಮ ಅವರು ಗಂಭೀರವಾಗಿ ಗಾಯಗೊಂಡಿದ್ದರು. ಮಹಿಳೆಯನ್ನು ಸಂಜಯ್ ಗಾಂಧಿ ಆಸ್ಪತ್ರೆಗೆ ಸ್ಥಳೀಯರು ದಾಖಲಿಸಿದ್ದರು. ಅಲ್ಲಿ ಮಹಿಳೆ ಮೃತಪಟ್ಟಿದ್ದಾರೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಬ್ಯಾಟರಾಯನಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾರ್ಮಿಕ ಸಾವು: ತುಮಕೂರು ರಸ್ತೆಯ ಪಾರ್ಲೆ-ಜಿ ಫ್ಯಾಕ್ಟರಿ ಬಳಿ ನಡೆದ ಅಪಘಾತದಲ್ಲಿ ಕಾರ್ಮಿಕ ಬಸವರಾಜು(37) ಅವರು ಮೃತಪಟ್ಟಿದ್ದಾರೆ. ಬಸವರಾಜು ಅವರು ರಾಯಚೂರು ಜಿಲ್ಲೆಯ ಸಿಂಧನೂರಿನವರು. ನಗರದಲ್ಲಿ ಕೆಲಸ ಮಾಡುತ್ತಿದ್ದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಸಹಾಯಕ ಆಯುಕ್ತರವರ ಕಛೇರಿ (ನೇಮಕಾತಿ ಮತ್ತು ವಿಚಾರಣೆ ವಿಭಾಗ)
ಅನೆಕ್ಸ್ ಕಟ್ಟಡ–2, ಎನ್.ಆರ್.ಚೌಕ, ಬೆಂಗಳೂರು– 560002

ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್ 2022 (ಇ), ದಿನಾಂಕ: 23–11–2022 ಮತ್ತು 02–03–2023.
ಅಧಿಸೂಚನೆ ಸಂಖ್ಯೆ: ನಅಇ 165 ಬಿಬಿಎಲ್ 2022 (ಭಾ–1), ದಿನಾಂಕ: 28–03–2023 ಮತ್ತು 04–03–2024.

ನೇಮಕಾತಿ ಪ್ರಕಟಣೆ

ಪೌರಕಾರ್ಮಿಕರ ಅಂತಿಮ ಆಯ್ಕೆ ಪಟ್ಟಿ ಪ್ರಕಟಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೌರಕಾರ್ಮಿಕ ಹುದ್ದೆಗಳಿಗೆ ಆಯ್ಕೆಯಾಗಿರುವ **12692** ಪೌರಕಾರ್ಮಿಕರ ಕರಡು ಆಯ್ಕೆ ಪಟ್ಟಿಯನ್ನು ದಿನಾಂಕ: **09.10.2024** ರಂದು ಪಾಲಿಕೆ ವೆಬ್‌ಸೈಟ್ **http://bbmp.gov.in/home** ನಲ್ಲಿ ಪ್ರಕಟಿಸಿದ್ದು, ಆಯಾ ವಲಯ ಜಂಟಿ ಆಯುಕ್ತರವರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲೂ ಸಹ ಪಟ್ಟಿಯನ್ನು ಪ್ರಕಟಿಸಿ, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿತ್ತು. ಅದರಂತೆ, ವಲಯವಾರು ಸ್ವೀಕರಿಸಲಾದ ಆಕ್ಷೇಪಣೆಗಳನ್ನು ಪರಿಶೀಲಿಸಿ ಕ್ರಮವಹಿಸಿ, ಪೌರಕಾರ್ಮಿಕರನ್ನು ಆಯ್ಕೆ ಮಾಡಿ, ಅಂತಿಮ ಆಯ್ಕೆ ಪಟ್ಟಿಯನ್ನು ಸಿದ್ದಗೊಳಿಸಲಾಗಿದ್ದು, ಸದರಿ ಅಂತಿಮ ಆಯ್ಕೆ ಪಟ್ಟಿಯನ್ನು ದಿನಾಂಕ: **16.11.2024** ರಂದು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಆಯಾ ವಲಯ ಜಂಟಿ ಆಯುಕ್ತರವರ ಕಛೇರಿ ಹಾಗೂ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲೂ ಸಹ ಅಂತಿಮ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗುವುದು.

ಅಂತಿಮ ಆಯ್ಕೆ ಪಟ್ಟಿಯಲ್ಲಿ ಮೀಸಲಾತಿಗೆ ಅನುಗುಣವಾಗಿ (1) ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಜಾತಿ ಮೀಸಲಾತಿ ಪ್ರಮಾಣ ಪತ್ರ. (2) ಕನ್ನಡ ಮಾಧ್ಯಮ ಪ್ರಮಾಣ ಪತ್ರ. (3) ಗ್ರಾಮೀಣ ಪ್ರಮಾಣ ಪತ್ರ. (4) ಅಂಗವಿಕಲ ಪ್ರಮಾಣ ಪತ್ರ. (5) ಯೋಜನಾ ನಿರಾಶ್ರಿತರ ಪ್ರಮಾಣ ಪತ್ರ. (6) ಮಾಜಿ ಸೈನಿಕ ಪ್ರಮಾಣ ಪತ್ರ. (7) ಕಲ್ಯಾಣ ಕರ್ನಾಟಕ ಪ್ರಮಾಣ ಪತ್ರ. (8) ತೃತೀಯ ಲಿಂಗ ಪ್ರಮಾಣ ಪತ್ರ. (9) ಇತರೇ (ಅನ್ವಯಿಸುವ ದಾಖಲೆ ಮಾತ್ರ). ಆಯ್ಕೆಯಾಗಿರುವ ಪೌರಕಾರ್ಮಿಕರು ತಮ್ಮ ಆಯ್ಕೆಗೆ ಸಂಬಂಧಿಸಿದ ಮೂಲ ದಾಖಲೆಗಳನ್ನು ವಲಯ ಮಟ್ಟದಲ್ಲಿ ರಚಿಸಲಾಗಿರುವ ದಾಖಲಾತಿ ಪರಿಶೀಲನಾ ತಂಡಗಳ ಮುಂದೆ ದಿನಾಂಕ: **25.11.2024** ರಿಂದ **30.11.2024**ರ ವರೆಗೆ ವಲಯ ಮಟ್ಟದಲ್ಲಿ ನೀಡಲಾಗುವ ವೇಳಾಪಟ್ಟಿಯ ಅನುಗುಣವಾಗಿ ಮೇಲ್ಕಂಡಂತೆ ದಾಖಲೆಗಳನ್ನು ಖುದ್ದು ಹಾಜರುಪಡಿಸುವುದು.

ಪೌರಕಾರ್ಮಿಕರ ಹುದ್ದೆಗೆ ಆಯ್ಕೆಯಾಗಿರುವವರು ಯಾವುದೇ ಆಸೆ / ಆಮಿಷಗಳಿಗೆ ಒಳಗಾಗಬಾರದು ಹಾಗೂ ಮಧ್ಯವರ್ತಿಗಳ ಮಾತುಗಳನ್ನು ಕೇಳಿ ವಂಚನೆಗಳಿಗೆ ಒಳಗಾಗಬಾರದು. ಸದರಿ ಅಂತಿಮ ಆಯ್ಕೆ ಪಟ್ಟಿಯ ವಿವರಣೆ ಅಥವಾ ಮಾಹಿತಿಗಾಗಿ ತಮ್ಮ ವ್ಯಾಪ್ತಿಗೆ ಒಳಪಡುವ ಘನತ್ಯಾಜ್ಯ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿಗೆ ನೇರವಾಗಿ ಭೇಟಿ ನೀಡಿ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಬಹುದಾಗಿದೆ.

ಸಹಿ/–
ವಿಶೇಷ ಆಯುಕ್ತರು (ಆಡಳಿತ) ಹಾಗೂ
ಸದಸ್ಯ ಕಾರ್ಯದರ್ಶಿ, ಪೌರಕಾರ್ಮಿಕರ ಆಯ್ಕೆ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ದಿನಾಂಕ: **15.11.2024**

ಏನಿದು ಬ್ಯೂಟಿಪಾರ್ಲರ್ ಸ್ಟ್ರೋಕ್ ಸಿಂಡ್ರೋಮ್?

ಬ್ಯೂಟಿಪಾರ್ಲರ್‌ಗಳಲ್ಲಿ ತಲೆ ತೊಳೆಯುವಾಗ, ಮಸಾಜ್ ಮಾಡಿಸಿಕೊಳ್ಳುವಾಗ ಕುತ್ತಿಗೆಯನ್ನು ತುಂಬಾ ಅವಧಿಯವರೆಗೆ ಹಿಂದಕ್ಕೆ ಬಾಗಿಸುವುದರಿಂದ ಆಗುವ ಆರೋಗ್ಯ ಸಮಸ್ಯೆಗಳ ಬಗ್ಗೆ ಅರಿವಿರಲಿ




ಡಾ.ರೂಪಾ ಕೆ.ಜಿ.

ಬ್ಯೂಟಿ ಪಾರ್ಲರ್ ಸ್ಟ್ರೋಕ್ ಸಿಂಡ್ರೋಮ್ ಈ ಪ್ರಕರಣವನ್ನು ಮೊದಲ ಬಾರಿಗೆ ಡಾ. ಮೈಕೇಲ್ ವಿಯ್ನೆಟ್ರಾಬ್ (Michel weintraub) 1992-93ರಲ್ಲಿ ನ್ಯೂಯಾರ್ಕ್‌ನ ವೈದ್ಯಕೀಯ ಕಾಲೇಜೊಂದರಲ್ಲಿ ಪ್ರಸ್ತಾಪಿಸಿದರು.

ಬ್ಯೂಟಿಪಾರ್ಲರಿಗೂ ಪಾರ್ಶ್ವವಾಯುವಿಗೂ ಏನು ಸಂಬಂಧ ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಈಚಿನ ದಿನಗಳಲ್ಲಿ ಬ್ಯೂಟಿಪಾರ್ಲರ್‌ಗಳಿಗೆ ಹೋಗದ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಆದರೆ, ನಿಮ್ಮ ಕುತ್ತಿಗೆಯನ್ನು ಬ್ಯೂಟಿಷಿಯನ್‌ಗಳಿಗೆ ಕೊಡುವ ಮುನ್ನ ಯೋಚಿಸಿ.

ಏನಾಗುತ್ತದೆ?

ಬ್ಯೂಟಿಪಾರ್ಲರ್‌ಗಳ ವಾಷ್ ಬೇಸಿನ್‌ನಲ್ಲಿ ತಲೆ ತೊಳೆಯುವಾಗ ಅಥವಾ ಹುಬ್ಬುಗಳನ್ನು ತೀಡುವಾಗ, ಮುಖದ ಮಸಾಜ್ ಮಾಡಿಸುವಾಗ ಬಹಳ ಕಾಲ ಕುತ್ತಿಗೆಯನ್ನು ಹಿಂದಕ್ಕೆ ಬಾಗಿಸಲಾಗುತ್ತದೆ.



ಇದರಿಂದ ಕೆಲವು ಮಹಿಳೆಯರಲ್ಲಿ ಸ್ವಲ್ಪ ಸಮಯದ ನಂತರ ಏಕಾಏಕಿ ತಲೆಸುತ್ತು, ವಾಂತಿ, ಬಾಯಿ ತೊದಲುವಿಕೆ ಅಥವಾ ಕಣ್ಣಿನ ದೋಷ ಕಾಣಿಸಿಕೊಳ್ಳಬಹುದು. ದೇಹದ ಸಮತೋಲನ ತಪ್ಪಿ, ಮುಖ ಹಾಗೂ ದೇಹದ ಅರ್ಧ ಭಾಗದಲ್ಲಿ ಮರಗಟ್ಟುವಿಕೆಯ ಸಮಸ್ಯೆಗಳು ಕಾಣಿಸಿಕೊಳ್ಳಹುದು.

ಯಾಕೆ ಹೀಗಾಗುತ್ತದೆ?

ಮನುಷ್ಯರ ಕತ್ತಿನ ಭಾಗದಲ್ಲಿ ಮಿದುಳಿನ ರಕ್ತಸಂಚಾರಕ್ಕೆ ಅಗತ್ಯವಿರುವ ರಕ್ತನಾಳಗಳಿರುತ್ತವೆ. ಮುಂಭಾಗದಲ್ಲಿ ಕ್ಯಾರೋಟಿಡ್ ಆರ್ಟೀಸ್ (carotid arteies)ಮತ್ತು ಹಿಂಭಾಗದಲ್ಲಿ ವರ್ಟಿಬ್ರೆಲ್ ಆರ್ಟೀಸ್ (vertebral arteries)ಇರುತ್ತವೆ. ಕತ್ತನ್ನು ಬಹಳ ಹೊತ್ತು ಬಗ್ಗಿಸಿದಾಗ ರಕ್ತನಾಳಗಳ ಮೇಲೆ ಒತ್ತಡ ಬೀಳುತ್ತದೆ. ವಯಸ್ಸಾದವರಲ್ಲಿ ರಕ್ತನಾಳಗಳಲ್ಲಿ ಹೆಚ್ಚಿನ ಕೊಬ್ಬಿನಂಶ ಸೇರಿಕೊಂಡಿರುತ್ತದೆ. ಇದರ ಮೇಲೆ ಒತ್ತಡ ಬಿದ್ದಷ್ಟು ಮಿದುಳಿನ ರಕ್ತ ಸಂಚಾರದಲ್ಲಿ ವ್ಯತ್ಯಯ ಉಂಟಾಗುತ್ತದೆ.


ಇದಲ್ಲದೇ ಕತ್ತಿನ ಮೂಳೆಗಳಲ್ಲಿ ಚಿಕ್ಕ ಚಿಕ್ಕದಾಗಿ ಚೂಪಾದ ಮೂಳೆಗಳು ಬೆಳೆಯುವಿಕೆಯಿಂದಲೂ ಕುತ್ತಿಗೆಯ ಹಿಂಭಾಗದಲ್ಲಿರುವ ರಕ್ತನಾಳಗಳ ಮೇಲೆ ಒತ್ತಡ ಉಂಟಾಗುತ್ತದೆ. ಇಂಥ ಸಮಯದಲ್ಲಿ ಕುತ್ತಿಗೆ ಬಗ್ಗಿಸಿದಾಗ ರಕ್ತಸಂಚಲನಕ್ಕೆ ತೊಂದರೆಯಾಗಬಹುದು. ಇದರಿಂದ ಪಾರ್ಶ್ವವಾಯು ಸಂಭವಿಸಬಹುದು. ಕೆಲವೊಮ್ಮೆ ಹಿಂಬದಿಯ ರಕ್ತನಾಳ ಒಡೆದು ಹೋಗಿಯೂ ಹೀಗಾಗುತ್ತದೆ. ಸಣ್ಣ ಪ್ರಮಾಣದಲ್ಲಿ ಕಂಡರೆ ವರ್ಟಿಬ್ರೇಲ್ ಅರ್ಟ್ರಿಯಲ್ ಇನ್‌ಸಫಿಷಿಯೆನ್ಸಿ (vertebral arterial insufficiency)ಹಾಗೂ ತೀವ್ರ ಪ್ರಮಾಣದಲ್ಲಿ ಕಂಡರೆ ಪೋಸ್ಟಿರಿಯರ್ ಸರ್ಕ್ಯುಲೇಷನ್ ಸ್ಟ್ರೋಕ್ (posterior circulation stroke)ಎಂದು ಪರಿಗಣಿಸಲಾಗುತ್ತದೆ.

ಜಾಗ್ರತೆ ವಹಿಸುವುದು ಹೇಗೆ?

ಅಧಿಕ ರಕ್ತದ ಒತ್ತಡ, ಮಧುಮೇಹ, ರಕ್ತದಲ್ಲಿ ಕೊಬ್ಬಿನಂಶ, ಸ್ಥೂಲಕಾಯ ಸಮಸ್ಯೆ ಇರುವವರು ಹೆಚ್ಚು ಜಾಗ್ರತೆ ವಹಿಸಬೇಕು.

ಏಕಾಏಕಿ ಕತ್ತನ್ನು ತಿರುಗಿಸುವ ತಪ್ಪನ್ನು ಸೌಂದರ್ಯತಜ್ಞರು ಮಾಡಬಾರದು. ಸರಿಯಾದ ತರಬೇತಿ ಪಡೆದ, ವೃತ್ತಿಪರತೆ ಇರುವ ಸೌಂದರ್ಯತಜ್ಞರಲ್ಲಿ ಮಸಾಜ್‌ಗಳನ್ನು ಮಾಡಿಸಿಕೊಳ್ಳಿ. ಯಾವುದೇ ಚಿಕಿತ್ಸೆಯಿದ್ದರೂ ದೀರ್ಘಕಾಲದವರೆಗೆ ಕತ್ತನ್ನು ಹಿಂದಕ್ಕೆ ಬಾಗಿಸದಂತೆ ನೋಡಿಕೊಳ್ಳಿ.

ಲೇಖಕಿ, ನರರೋಗತಜ್ಞರು, ಶಿವಮೊಗ್ಗ.



ಸ್ವಾತಿ ಬಿಸಿಲೂ ರೇಷ್ಮೆ ಸೀರೆಗಳೂ

ಶ್ರೀರಂಜನಿ ಅಡಿಗ

ಲಹರಿ

ಮೊನ್ನೆ ಊರಿಗೆ ಹೋದಾಗ ಹೆಚ್ಚಿನ ಮನೆಯಂಗಳದಲ್ಲಿ ಬಣ್ಣಬಣ್ಣದ ಸೀರೆಗಳು ಮೈಬಿಡಿಸಿ ಅರಳಿತ್ತು. ಬಣ್ಣಬಣ್ಣದ ರಂಗೋಲಿಗಳು ಗಾಳಿಯಲ್ಲಿ ಮೂರ್ತರೂಪ ತಾಳಿ ಹಾರಾಡುತ್ತಿರುವಂತೆ ಕಾಣಿಸಿತ್ತು. ಸ್ವಾತಿ ಬಿಸಿಲಿನ ಸಮಯವಿರಬೇಕು, ಬೆಂಗಳೂರಿಗೆ ಹಿಂದಿರುಗಿದ ಮೇಲೆ ನಾನೂ ಮಾಡಬೇಕೆಂದುಕೊಂಡೆ. ಆದರೆ ಅಲ್ಲಿ ಉರಿಬಿಸಿಲಿದ್ದರೆ, ಇಲ್ಲಿ ಮೋಡದ ಛಾಯೆ. ಬಿಸಿಲಿಗಾಗಿ ಎರಡು ದಿನ ಕಾದದ್ದಾಯಿತು, ನಂತರ ತಿಂಗಳ ರಜೆಯೆಂದು ನಾಲ್ಕೈದು ದಿನ ಹಾಗೇ ಕಳೆದುಹೋಯಿತು, ಇನ್ನೇನು ಸ್ವಾತಿ ನಕ್ಷತ್ರ ಮುಗಿಯುತ್ತಿದೆ ಎನ್ನುವಾಗ ನನ್ನ ಸೀರೆಗಳಿಗೆ ಬಿಸಿಲು ಕಾಣುವ ಮುಹೂರ್ತ ಬಂದಂತಾಯಿತು, ಇಲ್ಲಿಯವರೆಗೆ ಆಷಾಢದ ಗಾಳಿ, ಶ್ರಾವಣದ ಮಳೆ ಎಂದು ತಣಸು ಹತ್ತಿಸಿಕೊಂಡ ಬಟ್ಟೆಗಳಿಗೆ ಬೆಚ್ಚಗಾಗಲು ಇದೇ ಸುಸಮಯ. ಸ್ವಾತಿಬಿಸಿಲಿಗೆ ಹಾಕಿದ ಬಟ್ಟೆಗಳಿಗೆ ಹುಳಹುಪ್ಪಟೆ ಹಿಡಿಯುವುದಿಲ್ಲ ಎಂಬುದು ಅನಾದಿ ಕಾಲದಿಂದ ಬಂದ ಆಚರಣೆ. ಹೀಗಾಗಿ ಸೀರೆಗಳಿರುವ ಚೀಲ ಬಿಚ್ಚಿದೆ.

ಕಳೆದ ವರ್ಷ ಸೀರೆಗಳನ್ನು ಹೇಗಿಟ್ಟದ್ದೆನೋ ಇವತ್ತೂ ಹಾಗೆಯೇ ಇದ್ದವು. ನಾಲ್ಕೈದು ಸೀರೆಗಳು ಜಾಸ್ತಿಯಾಗಿದ್ದವು ಎನ್ನುವುದು ಬಿಟ್ಟರೆ ಬೇರೇನೂ ಬದಲಾಗಿರಲಿಲ್ಲ. ಒಂದು ವರ್ಷದಿಂದ ಕತ್ತಲೊಳಗೇ ಮಲಗಿದ್ದ ಸೀರೆಗಳನ್ನು ಒಂದೊಂದೇ ತೆಗೆದಂತೆ ಒಂದೊಂದು ಕತೆ ಬಿಚ್ಚಿಕೊಳ್ಳಲಾರಂಭಿಸಿತು. ಅಣ್ಣ ಕಂಚಿಯಿಂದ ತಂದದ್ದು, ಹುಟ್ಟುಹಬ್ಬಕ್ಕೆ ಕೊಂಡದ್ದು, ಮಾವನ ಮಗನ ಮದುವೆಯಲ್ಲಿ ಕೊಟ್ಟದ್ದು ಎಂದು ಮನಸ್ಸು ಮಧುರವಾಯಿತು. ಬೇಸರವಾಗಿದ್ದು ಮಾತ್ರ ಒಂದೇ ಬಣ್ಣದ ಐದಾರು ಸೀರೆಗಳನ್ನು ಕಂಡು.

ಜೊತೆಗೆ ಒಂದಿಷ್ಟು ಹೊಸ ಸೀರೆಗಳು. ಆನ್‌ಲೈನಿನಲ್ಲಿ ಕೊಂಡದ್ದಾದರೂ ಅದಕ್ಕೂ ಒಂದು ಹಿನ್ನೆಲೆ. ಸ್ಕ್ರೀನಿನಲ್ಲಿ ಕಂಡ ಬಣ್ಣವೇ ಒಂದಾದರೆ ಕಳುಹಿಸಿಕೊಟ್ಟದ್ದು ಬೇರೆ ಬಣ್ಣ, ಡ್ಯಾಮೇಜಿನ ಸೀರೆಯೆಂದು ಅಂಗಡಿಯವನ ಹತ್ತಿರ ಗಲಾಟೆ ಮಾಡಿ ಬದಲಾಯಿಸಿ ತಂದದ್ದು, ನನ್ನಲ್ಲಿರುವ ಸೀರೆಯಂತದ್ದೇ ಬಣ್ಣ, ಮೆಟೀರಿಯಲ್‌ನ ಸೀರೆಯನ್ನು ಪಕ್ಕದ ಮನೆಯವರು ಕಡಿಮೆ ಬೆಲೆಗೆ ತಂದದ್ದು ಕಂಡು ಎರಡು ದಿನ ನಿದ್ದೆಯಿಲ್ಲದೆ ಒದ್ದಾಡಿದ್ದು- ಎಲ್ಲವೂ ಅದರಲ್ಲಿತ್ತು.



ಮತ್ತೆ ಕೆಲವು ನನ್ನನ್ನು ನಿಕಷಕ್ಕೆ ಒಡ್ಡಿದ್ದವು. ಆಗ ಚಂದವಿದೆ ಅಂದುಕೊಂಡ ಸೀರೆ ಈಗ ಒಂಚೂರು ಇಷ್ಟವಾಗುತ್ತಿಲ್ಲ. ಆಗ ನನಗಿದ್ದ ಖರಾಬು ಟೇಸ್ಟಿನ ಬಗ್ಗೆ ನನಗೇ ವಿಷಾದವುಂಟಾಯಿತು. ಇನ್ನು ಕೆಲವು ಸೀರೆಗಳದ್ದು ಒಂದೇ ಬಾರಿ ಸುತ್ತಾಡಿಸಿದ್ದೆ. ಅದೂ ಕೇವಲ ಯಾವುದೋ ಒಂದು ಸಮಾರಂಭಕ್ಕೋಸ್ಕರ. ಮತ್ತೆ ಉಟ್ಟೇ ಇರಲಿಲ್ಲ. ಕೇಳಿದ ಕೂಡಲೇ ನಿರಾಕರಿಸದೆ ಕೊಡಿಸಿದ ಗಂಡನ ಮೇಲೆ ಪ್ರೀತಿ ಉಕ್ಕಿಬಂತು. ಇನ್ನು ಕೆಲವು ಸೀರೆಗಳು ಆಗಿನ ಕಾಲದಲ್ಲಿ ಟ್ರೆಂಡಿಂಗ್ ಎಂದು ಕೊಂಡದ್ದು. ಈಗ ಅದು ಔಟ್ ಆಫ್ ಫ್ಯಾಶನ್ ಆಗಿತ್ತು. ಉಟ್ಟುಕೊಂಡು ಹೋದರೆ ಶಿಲಾಯುಗದವಳು ಎಂದುಕೊಳ್ಳಬಹುದು ಅನ್ನಿಸಿತು. ಬದಲಾವಣೆ ಜಗದ ನಿಯಮವಲ್ಲವೇ! ಅಂತದ್ದರಲ್ಲಿ ನಾನೇನು ಮಹಾ?ಎಂದು ಸಮಜಾಯಿಷಿ ಕೊಟ್ಟುಕೊಂಡೆ. ಕೆಲವು ಸೀರೆಗಳು ಈಗ ಐವತ್ತು ಸಾವಿರ ಕೊಟ್ಟರೂ ಸಿಗದ ಜೆಮ್‌ಗಳಂತೆ ಕಂಡುಬಂದವು. ಚಿನ್ನದ ಅಂಚಿನ ಮೈ ತುಂಬಾ ಬುಟ್ಟಾಗಳಿರುವ ಸೀರೆ ಉಟ್ಟರೆ ಎಲ್ಲರ ಕಣ್ಣಲ್ಲೂ ಮಿಂಚು ಮಿನುಗುತ್ತಿತ್ತು.

ಇನ್ನು ರವಿಕೆಗಳು - ಹೈ ನೆಕ್ಕಿನ, ಬೋಟು ಕುತ್ತಿಗೆಯ, ಫ್ರೆಂಚ್ ಕಟ್ಟಿನ, ಹಿಂದೆಗುಂಡಿಯಿರುವ, ಹ್ಯಾಂಡ್, ಮೆಷಿನ್ ಎಂಬ್ರಾಯಿಡರಿಯ, ರೆಡಿಮೇಡ್‌ಗಳೆಂದು ಯಾವ ಡಿಸೈನಿನ ರವಿಕೆಗಳು ಬೇಕು? ಎಲ್ಲಾ ಅಲ್ಲಿದ್ದವು. ಹೆಚ್ಚಿನವುಗಳದ್ದು ಸೀರೆಯಷ್ಟೇ ಬೆಲೆ ಅಥವಾ ಅದಕ್ಕಿಂತ ಜಾಸ್ತಿಯಿದ್ದಿತ್ತು. ಮೂಗಿಗಿಂತ ಮೂಗುತಿಯ ಭಾರವೇ ಜಾಸ್ತಿಯಾದಕ್ಕೆ ಸಾಕ್ಷಿಯಾಗಿದ್ದವು. ಅದರೆ ಅಷ್ಟು ಹಣ ಕೊಟ್ಟು ಹೊಲಿಸಿದ್ದು ಈಗ ಮಾತ್ರ ಮೈಒಳಗೆ ತೂರಲು ನಖರಾ ತೋರಿಸುತ್ತಿದ್ದುದನ್ನು ಅರಗಿಸಿಕೊಳ್ಳಲಾಗಲಿಲ್ಲ.

ಅಷ್ಟೂ ಸೀರೆಗಳನ್ನು ದಿನಕ್ಕೆರಡು ಪಾಳಿಯಂತೆ ಬಿಸಿಲಿಗೆ ಹಾಕಿ ಮತ್ತೆ ಒಳಗಡೆಯಿಡುವಾಗ ಎರಡು ದಿನ ಕಳೆದಿತ್ತು. ಬಿಸಿಲಿಗೆ ಹರಹುವ ನೆವದಲ್ಲಿ ಹಳೆಯ ಆಲ್ಬಂನ್ನು ತಿರುವಿದಂತೆ ನೆನಪಿನ ನೆರಿಗೆ ಚಿಮ್ಮಿ ಮನಸ್ಸು ಪ್ರಫುಲ್ಲಗೊಂಡಿತ್ತು. ಆದರೆ ಸತ್ಯದ ವಿಷಯವೇನೆಂದರೆ ದಾಸರು 'ಇಷ್ಟು ದೊರಕಿದರೆ ಮತ್ತಷ್ಟು ಬೇಕೆಂಬಾಸೆ' ಎಂದಂತೆ ಹೆಂಗಳೆಯರಿಗೆ ಸೀರೆ ಎಷ್ಟಿದ್ದರೂ ಇನ್ನು ಸಾಕು ಎಂದೂ ಎನಿಸದು. ಅದರ ಮೇಲಿನ ಮೋಹ ಎಂದೂ ತೀರದು.

ಸ್ಪಂದನ



ಡಾ. ವೀಣಾ ಎಸ್. ಭಟ್

ಹೆರಿಗೆ ನಂತರ ಹೊಟ್ಟೆ ಇಳಿಸುವುದು ಹೀಗೆ

• ಏಳು ದಿನದ ಹಿಂದೆ ಶಸ್ತ್ರಚಿಕಿತ್ಸೆಯ ಮೂಲಕ ಹೆರಿಗೆಯಾಗಿದ್ದು, ಹೊಟ್ಟೆ ಉಬ್ಬಿದೆ. ಅದನ್ನು ಕಡಿಮೆ ಮಾಡುವುದು ಹೇಗೆ?

ಇದು ಮೊದಲನೆಯ ಮಗು ಅಥವಾ ಎರಡನೆಯ ಮಗು ತಿಳಿಸಿಲ್ಲ. ಇರಲಿ. ಒಂಬತ್ತು ತಿಂಗಳಲ್ಲಿ ಸರಾಸರಿ ತೂಕ ಎಷ್ಟು ಹೆಚ್ಚಾಗಿದೆ ಎಂಬುದನ್ನು ಗಮನಿಸಿ. ಸಹಜ ತೂಕವಿರುವ ಮಹಿಳೆ ಗರ್ಭಧಾರಣೆಯ ಅವಧಿಯಲ್ಲಿ 10ರಿಂದ 12ಕೆ.ಜಿ ತೂಕಗಳಿಸಬಹುದು. ಗರ್ಭಧಾರಣೆಗೂ ಮೊದಲು ಬೊಜ್ಜಿನ ಸಮಸ್ಯೆ ಇದ್ದರೆ, ಅಂಥವರು 8.ಕೆ.ಜಿ ತೂಕವನ್ನಷ್ಟೆ ಹೆಚ್ಚಿಗೆ ಗಳಿಸಬೇಕು. ಆದರೆ, ಈಚೆಗೆ 15ರಿಂದ 20 ಕೆ.ಜಿ. ಹೆಚ್ಚಾಗುತ್ತಿದೆ. ಹೆರಿಗೆ ನಂತರವೂ 9 ತಿಂಗಳವರೆಗೆ ಬಾಣಂತನವೆಂದು ಕಡಿಮೆ ದೈಹಿಕ ಶ್ರಮ, ಹೆಚ್ಚು ಆಹಾರ ಸೇವನೆ, ಮಗುವಿಗೆ ದೀರ್ಘಾವಧಿಯವರೆಗೆ ಸ್ತನ್ಯಪಾನ ಮಾಡಿಸದೇ ಇರುವುದರಿಂದ ದೇಹದ ತೂಕ ಹೆಚ್ಚುತ್ತದೆ.

ಹೊಟ್ಟೆಯ ಮುಂದಿನ ಭಾಗದ ಮುಖ್ಯ ಸ್ನಾಯು ರೆಕ್ಟಸ್ ಅಬ್ಡಾಮಿನಿಸ್ ಮಾಂಸಖಂಡ ಬಲಹೀನಗೊಂಡು, ಅದರ ನಡುವಿನ ಅಂತರ ಹೆಚ್ಚಿ, ಕರುಳುಗಳು ಅವೆರಡರ ನಡುವಿನ ಜಾಗವನ್ನು ಆಕ್ರಮಿಸಿಕೊಳ್ಳುತ್ತದೆ. ಇದರಿಂದ ಹೊಟ್ಟೆ ಉಬ್ಬಿದ ಹಾಗೆ ಅನಿಸುತ್ತದೆ. ಸಾಮಾನ್ಯವಾಗಿ ಅವಳಿ ಮಕ್ಕಳನ್ನು ಹಡೆದವರಲ್ಲಿ, ಅತಿ ತೂಕದ ಮಗು ಹೊಂದಿದವರಲ್ಲಿ, ನೆತ್ತಿನೀರು ಹೆಚ್ಚಿದವರಲ್ಲಿ ಹೆರಿಗೆ ನಂತರ ಹೀಗೆ ಆಗಬಹುದು. ಹೊಟ್ಟೆಯ ಸ್ನಾಯುಗಳನ್ನು ಬಲಪಡಿಸುವ ವ್ಯಾಯಾಮಗಳನ್ನು ಮಾಡಿ. ಶಸ್ತ್ರಚಿಕಿತ್ಸೆ ಆಗಿರುವುದರಿಂದ ಕನಿಷ್ಠ 8 ವಾರಗಳ ನಂತರ ಆರಂಭಿಸಬಹುದು. ಅಲ್ಲಿಯವರೆಗೆ ಸೀರೆ ಅಥವಾ ಹತ್ತಿಬಟ್ಟೆಯಿಂದ ಮಾಡಿದ ಬೆಲ್ಟ್ ಹೊಲಿಸಿಕೊಂಡು ನಡಿಗೆ ಆರಂಭಿಸಬಹುದು. ಎರಡು ವರ್ಷಗಳವರೆಗೆ ಮಗುವಿಗೆ ಎದೆಹಾಲುಣಿಸಿ. ಹೊಟ್ಟೆಯ ಬೊಜ್ಜಷ್ಟೆ ಅಲ್ಲ, ಇಡೀ ಶರೀರದ ಬೊಜ್ಜು ಕಡಿಮೆಯಾಗುತ್ತದೆ.

ಹೊಟ್ಟೆ ಇಳಿಸುತ್ತದೆ ಎಂದು ಹೇಳಿಕೊಳ್ಳುವ ತರಹೇವಾರಿ ಎಣ್ಣೆಗಳು, ವೈಬ್ರೇಟರ್ ಬೆಲ್ಟ್, ಲೈಪೊಸಕ್ಷನ್‌ಗಳಂಥ ಆಲೋಚನೆಗಳಿಂದ ದೂರವಿರಿ. ಹಿತಮಿತವಾದ ಪ್ರೊಟೀನ್‌ಯುಕ್ತ, ಕಡಿಮೆ ಕೊಬ್ಬಿನಾಂಶವಿರುವ ಆಹಾರ ಸೇವಿಸಿ.

ಹೊಟ್ಟೆಯ ಮಾಂಸಖಂಡಗಳನ್ನ ಬಲಪಡಿಸಿಕೊಳ್ಳಲು ದ್ವಿಪಾದಉತ್ತಾನಾಸನ, ನೌಕಾಸನ, ಸೂರ್ಯನಮಸ್ಕಾರ ನಿಯಮಿತವಾಗಿ ಮಾಡಿ.

• ಹೆರಿಗೆಯಾಗಿ ನಾಲ್ಕು ತಿಂಗಳಿಗೆ ಮೊದಲ ಬಾರಿಗೆ ಮುಟ್ಟು ಆರಂಭವಾಯಿತು. ಈಗ ಮುಟ್ಟಾಗುತ್ತಿಲ್ಲ. ಕಾರಣವೇನಿರಬಹುದು?

ಮಗುವಿಗೆ ಸ್ತನ್ಯಪಾನವಷ್ಟೆ ಮಾಡಿಸುತ್ತಿರುವಾಗ ಮೊದಲ ಒಂದು ವರ್ಷದವರೆಗೆ ಅಂಡಾಶಯದಿಂದ ಅಂಡಾಣು ಬಿಡುಗಡೆಯಾಗದೇ ಮುಟ್ಟಾಗುವ ಪ್ರಕ್ರಿಯೆಯಲ್ಲಿ ವ್ಯತ್ಯಾಸ ಉಂಟಾಗುತ್ತದೆ. ಈ ಅಂಡೋತ್ಪತ್ತಿಯ ಪ್ರಕ್ರಿಯೆ ಯಾವಾಗ ಬೇಕಾದರೂ ಆಗಬಹುದು. ಮೂತ್ರತಪಾಸಣೆಯಿಂದ ಮತ್ತೊಮ್ಮೆ ಗರ್ಭಧಾರಣೆ ಆಗಿದೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಿ.



ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಸಂಸ್ಕರಿಸಿದ ಆಹಾರ ಬೇಡವೇಕೆ?

ಅಮೂಲ್ಯ ಬಿ.ಕೆ.

ಕಾಳಜಿ

ಹಸಿವನ್ನು ನೀಗಿಸುವ ನೆಪದಲ್ಲಿ ಬಹಳ ಬೇಗನೆ ಕೈಗೆಟುಕುವ ಹಾಗೂ ಬಾಯಿರುಚಿ ತಣಿಸಬಲ್ಲ ಪದಾರ್ಥಗಳನ್ನು ತಿನ್ನುವ ಅಭ್ಯಾಸವಿದ್ದರೆ ತುಸು ಯೋಚಿಸಿ.

ವಿಶೇಷವಾಗಿ ಪ್ಯಾಕ್ಡ್ ಫುಡ್ಸ್, ರೆಡಿ ಟು ಈಟ್, ಇನ್‌ಸ್ಟಂಟ್ ಆಹಾರಗಳು, ಕುರುಕಲು ತಿಂಡಿಗಳು, ಬೀದಿ ಬದಿಯ ಜಂಕ್‌ಫುಡ್ಸ್ ಹಾಗೂ ಮತ್ತಿತರ ಪ್ರೊಸೆಸ್ಡ್ ಆಹಾರವನ್ನು ಸೇವಿಸುವುದರಿಂದ ಅಗತ್ಯಕ್ಕಿಂತ ಹೆಚ್ಚು ಉಪ್ಪು, ಸಕ್ಕರೆ, ಕೃತಕ ಬಣ್ಣ, ರಾಸಾಯನಿಕಗಳು ಹಾಗೂ ಕೃತಕ ಸಿಹಿಯನ್ನು ತಿನ್ನುತ್ತಿದ್ದೀರಿ ಎಂದರ್ಥ.

ಆಲೂಗಡ್ಡೆ ಚಿಪ್ಸ್ ಪ್ಯಾಕ್ ತೆಗೆದುಕೊಂಡರೆ ಇದರಲ್ಲಿ ಹೆಚ್ಚು ಕಾರ್ಬೋಹೈಡ್ರೇಟ್, ಅನಗತ್ಯ ಕೊಬ್ಬು, ಹೆಚ್ಚು ಉಪ್ಪಿರುತ್ತದೆ. ಇದರಿಂದ ಹಾನಿಕಾರಕ ಮಸಾಲೆ ಪದಾರ್ಥಗಳು ವಿಷದಂತೆ ದೇಹ ಸೇರುತ್ತವೆ. ಈ ಎಲ್ಲಾ ಅಡ್ಡಿಟಿವ್ಸ್ ಸೇರಿಸಿದ ಆಹಾರಗಳು ನಮ್ಮ ನಾಲಗೆಯ ರುಚಿಮೊಗ್ಗುಗಳನ್ನು ಮಂದಗೊಳಿಸುತ್ತದೆ. ನಿತ್ಯ ತಿನ್ನಲು ಆರಂಭಿಸಿದರೆ 'ಸಾಮಾನ್ಯ ಆಹಾರ} ರುಚಿಯಿಲ್ಲದಂತೆ ಅನಿಸುತ್ತದೆ. ಕ್ರಮೇಣ ಜಂಕ್‌ಫುಡ್‌ಗಳ ಮೇಲೆ ಅವಲಂಬನೆ ಹೆಚ್ಚುತ್ತದೆ. ಇಂಥ ಆಹಾರದಿಂದ ಮಿದುಳಿನಲ್ಲಿ ಡೋಪಮೈನ್ ಬಿಡುಗಡೆಯಾಗುವ ಪ್ರಮಾಣ ಹೆಚ್ಚುತ್ತದೆ. ಡೋಪಮೈನ್ ಖುಷಿಯ ಹಾರ್ಮೋನ್ ಆಗಿದ್ದು, ಇದನ್ನು ತಿಂದಾಗ ಹೆಚ್ಚು ಖುಷಿ ಎನಿಸುತ್ತದೆ. ಮದ್ಯವ್ಯಸನದಂತೆ ಇಂಥ ಆಹಾರಕ್ಕೂ ದಾಸರಾಗುವ ಸಾಧ್ಯತೆ ಇರುತ್ತದೆ.

ಫುಡ್ ಲೇಬಲಿಂಗ್ ಕುರಿತು ಅರಿವಿರಲಿ: ಆರೋಗ್ಯದ ಹಿತದೃಷ್ಟಿಯಿಂದ ಫುಡ್ ಲೇಬಲಿಂಗ್ ಗಮನಿಸುವುದು ಅಗತ್ಯ. ಗ್ರಾಹಕರಿಗೆ ಮಾಹಿತಿ ನೀಡುವ ಫುಡ್ ಲೇಬಲಿಂಗ್‌ನಲ್ಲಿ ಪ್ರತಿ ಪದಾರ್ಥಗಳನ್ನು ಎಷ್ಟು ಪ್ರಮಾಣದಲ್ಲಿ ಸೇರಿಸಲಾಗಿದೆ ಎಂಬುದರ ಕುರಿತು ಮಾಹಿತಿ ಇರುತ್ತದೆ. ಎಷ್ಟು ಪ್ರಮಾಣದಲ್ಲಿ ವಿಟಮಿನ್, ಖನಿಜಗಳು, ಪೋಷಕಾಂಶಗಳನ್ನು ಹೊಂದಿದೆ



ಎಂಬುದನ್ನು ನೋಡಬಹುದು. ಕ್ಯಾಲೊರಿಗಳು, ಒಟ್ಟು ಕಾರ್ಬೋಹೈಡ್ರೇಟ್‌ಗಳು, ನಾರಿನಂಶ, ಕೊಬ್ಬು, ಉಪ್ಪು ಮತ್ತು ಸಕ್ಕರೆ, ಟ್ರಾನ್ಸ್ ಕೊಬ್ಬಿನಾಮ್ಲಗಳಂಥ ವಿವರಗಳಿಗೆ ಗಮನ ನೀಡಿದರೆ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯರಕ್ತನಾಳದ ಕಾಯಿಲೆಯಂಥ ಆರೋಗ್ಯ ಸಮಸ್ಯೆಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳಬಹುದು.

ಪನ್ನೀರ್, ಟೊಫೊ, ಪೀನಟ್ ಬಟರ್ ಸಂಸ್ಕರಿಸಿದ ಪದಾರ್ಥಗಳಾಗಿದ್ದರೂ ಅದರ ಬಳಕೆ ಅನಿವಾರ್ಯ. ಅದರಲ್ಲಿಯೂ ಸಸ್ಯಾಹಾರಿಗಳಿಗೆ ನಿತ್ಯದ ಪ್ರೋಟಿನ್ ಅನ್ನು ಒದಗಿಸುತ್ತದೆ. ಆದರೆ, ಸಂಸ್ಕರಿಸಿದ ಆಹಾರ ನಮ್ಮ ಅಡುಗೆಮನೆಯಲ್ಲಿ ಎಷ್ಟು ಪ್ರಮಾಣದಲ್ಲಿ ಇರಬೇಕು ಎಂಬುದನ್ನು ನಿರ್ಧರಿಸುವುದು ಒಳಿತು. ಎಲ್ಲ ಪೌಷ್ಟಿಕಾಂಶಗಳನ್ನು ಒಳಗೊಂಡಿರುವ, ಸಂರಕ್ಷಕಗಳು ಮತ್ತು ಅಡಿಟಿವ್ಸ್ ನೈಸರ್ಗಿಕ ರೂಪದಲ್ಲಿ ಇರಬೇಕು. ಆಹಾರದ ಮೂಲರೂಪ ಬದಲಾಗಬಾರದು. ಸರಳವಾಗಿ ಹೇಳುವುದಾದರೆ ಶೂನ್ಯ ಕ್ಯಾಲೋರಿಸ್ ಕೊಡುವ ಆಹಾರಗಳಾಗಿರಬಾರದು.

ಸಂಸ್ಕರಿಸಿದ ಆಹಾರ ಎಷ್ಟೇ ಹಿತವಾಗಿದ್ದರೂ ಅದಕ್ಕೆ ಮಿತಿ ಹಾಕಿಕೊಳ್ಳುವುದು ಒಳಿತು.

ಲೇಖಕಿ, ಕ್ಲಿನಿಕಲ್ ನ್ಯೂಟ್ರಿಷಿಯನಿಸ್ಟ್

ಒಣಹಣ್ಣುಗಳ ಕೋಸಂಬರಿ



ರಸಾಸ್ವಾದ

ಜಾನಕಿ ಎಸ್. ಸಾಗರ

ಅಡುಗೆ ಮಾಡುವಾಗ ರುಚಿ ಜೊತೆಗೆ ಪೌಷ್ಟಿಕತೆ ಹೆಚ್ಚಿಸುವ ಪದಾರ್ಥಗಳು ಇದ್ದರೆ ಅದು ಪರಿಪೂರ್ಣ. ಊಟಕ್ಕೆ ಉಪ್ಪಿನಕಾಯಿ ಎಷ್ಟು ಮುಖ್ಯವೋ ಅಷ್ಟೇ ಕೋಸಂಬರಿಯೂ ಮುಖ್ಯ. ಸಾಮಾನ್ಯವಾಗಿ ಮಾಡುವ ಕೋಸಂಬರಿಗಿಂತ ವಿಭಿನ್ನವಾಗಿ ಒಣಹಣ್ಣುಗಳು ಮತ್ತು ಬೀಜಗಳಿಂದ ಮಾಡಿದ ಕೋಸಂಬರಿ ವಿಧಾನವನ್ನು ಇಲ್ಲಿ ತಿಳಿಸಲಾಗಿದೆ.

ಒಣದ್ರಾಕ್ಷಿ ಕೋಸಂಬರಿ

ಬೇಕಾಗುವ ಪದಾರ್ಥಗಳು: ಒಣ ದ್ರಾಕ್ಷಿ ಒಂದು ಕಪ್, ಹೆಸರುಬೇಳೆ 1/4 ಕಪ್, ಕಾಯಿ ತುರಿ 2 ಚಮಚ, ಕ್ಯಾರೆಟ್ 1, ಉಪ್ಪು,ಲಿಂಬು,ಸಕ್ಕರೆ, ಹಸಿಮೆಣಸು 1, ಉದ್ದಿನಬೇಳೆ, ಸಾಸಿವೆ ಕಾಳು, ಎಣ್ಣೆ.

ಮಾಡುವ ವಿಧಾನ: ಹೆಸರುಬೇಳೆ ನೆನಸಿ ಕುದಿ ನೀರಿನಲ್ಲಿ ಬೇಯಿಸಿ ಬಸಿದು , ಅದಕ್ಕೆ ಹುಳಿ ಸಿಹಿ ಇರುವ ಒಣದ್ರಾಕ್ಷಿ ತೊಳೆದು ಹಾಕಬೇಕು.ಸಣ್ಣಗೆ ಹೆಚ್ಚಿದ ಕ್ಯಾರೆಟ್ ಸೇರಿಸಬೇಕು.ಒಗ್ಗರಣೆಗೆ ಮೇಲಿನ ಪದಾರ್ಥಗಳನ್ನು ಹಾಕಿ ಉಪ್ಪು ಹುಳಿ, ಚಿಟಿಕೆ ಸಕ್ಕರೆ ಕಾಯಿತುರಿ ಸೇರಿಸಿ ಚೆನ್ನಾಗಿ ಕಲಸಿದರೆ ದ್ರಾಕ್ಷಿ ಕೋಸಂಬರಿ ಸಿದ್ಧ.



ಶೇಂಗಾ ಬೀಜದ ಕೋಸಂಬರಿ

ಬೇಕಾಗುವ ಪದಾರ್ಥಗಳು: ಶೇಂಗಾ 1 ಕಪ್, ಈರುಳ್ಳಿ 1, ಹಸಿಮೆಣಸು1, ಕ್ಯಾರೆಟ್ 1, ಉಪ್ಪು , ಲಿಂಬು, ಉದ್ದಿನ ಬೇಳೆ, ಸಾಸಿವೆ, ಕೊತ್ತಂಬರಿ ಸೊಪ್ಪು ಸ್ವಲ್ಪ, ಚಿಟಿಕೆ ಅರಿಶಿಣ,ಖಾರದ ಪುಡಿ ಸ್ವಲ್ಪ.

ಮಾಡುವ ವಿಧಾನ: ಶೇಂಗಾ ಹುರಿದು ಸಿಪ್ಪೆ ಬಿಡಿಸಿ. ಒಗ್ಗರಣೆಗೆ ಎಣ್ಣೆ ಹಾಕಿ ಉದ್ದಿನಬೇಳೆ, ಸಾಸಿವೆ, ಹಸಿಮೆಣಸು, ಸ್ವಲ್ಪ ಖಾರದ ಪುಡಿ, ಅರಿಶಿಣ ಪುಡಿ ಹಾಕಿ ಒಗ್ಗರಣೆ ಕಾದಮೇಲೆ ಬಿಡಿಸಿಟ್ಟ ಶೇಂಗಾ, ಉಪ್ಪು, ಲಿಂಬು ಹುಳಿ ಸೇರಿಸಿ ಚೆನ್ನಾಗಿ ಮಿಶ್ರ ಮಾಡಿ. ಆರಿದ ಮಿಶ್ರಣಕ್ಕೆ ಸಣ್ಣಗೆ ಹೆಚ್ಚಿದ ಈರುಳ್ಳಿ, ಕೊತ್ತಂಬರಿ ಸೊಪ್ಪು, ಕಾಯಿತುರಿ ಹಾಕಿ ಸರಿಯಾಗಿ ಕಲಸಿದರೆ ರುಚಿಯಾದ ಕೋಸಂಬರಿ ತಯಾರಾಗುವುದು.

ಗೋಡಂಬಿ ಕೋಸಂಬರಿ

ಬೇಕಾಗುವ ಪದಾರ್ಥಗಳು : ಗೋಡಂಬಿ 1 ಕಪ್, ಸ್ವೀಟ್ ಕಾರ್ನ್ 1/4 ಕಪ್, ತೆಂಗಿನಕಾಯಿ ತುರಿ 2 ಚಮಚ, ಹಸಿಮೆಣಸು 1, ಉಪ್ಪು ಸ್ವಲ್ಪ, ಲಿಂಬು ಹುಳಿ ಸ್ವಲ್ಪ , ಉದ್ದಿನ ಬೇಳೆ, ಸಾಸಿವೆ ಕಾಳು 1 ಚಮಚ. ಕೊತ್ತಂಬರಿ ಸೊಪ್ಪು ಸ್ವಲ್ಪ, ಒಗ್ಗರಣೆಗೆ 1 ಚಮಚ ಎಣ್ಣೆ.

ಮಾಡುವ ವಿಧಾನ : ಗೋಡಂಬಿಯನ್ನು 4 ತಾಸು ಚಿಟಿಕೆ ಉಪ್ಪು ಹಾಕಿ ನೆನಸಿ ಇಡಬೇಕು. ನೀರು ಬಸಿದು ಚೂರುಗಳನ್ನಾಗಿ ಮಾಡಬೇಕು. ಒಗ್ಗರಣೆಗೆ ಒಂದು ಚಮಚ ಎಣ್ಣೆ ಹಾಕಿ ಉದ್ದಿನ ಬೇಳೆ, ಸಾಸಿವೆ ಕಾಳು, ಹಸಿಮೆಣಸು ಹಾಕಿ , ಚಿಟಿಪಿಟಿ ಆದಮೇಲೆ ಕಾರ್ನ್, ಗೋಡಂಬಿ, ಲಿಂಬು ರಸ, ಕಾಯಿತುರಿ , ಉಪ್ಪು, ಕೊತ್ತಂಬರಿ ಸೊಪ್ಪು ಎಲ್ಲಾ ಸೇರಿಸಿ ಕಲಸಿದರೆ ಗೋಡಂಬಿ ಕೋಸಂಬರಿ ತಯಾರಾಗುವುದು.



ರಾಜ್ಯದ 200 ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕವಾಗಿ ಅಳವಡಿಕೆ

ಬೀದಿದೀಪ ನಿರ್ವಹಣೆಗೆ ಮೀಟರ್

● ಸಿದ್ದು ಆರ್.ಜಿ.ಹಳ್ಳಿ



ಮಂಡ್ಯ: ರಾಜ್ಯದಲ್ಲಿ ಆಯ್ದ 200 ಗ್ರಾಮ ಪಂಚಾಯಿತಿಗಳಲ್ಲಿ ಬೀದಿದೀಪಗಳಿಗೆ ಪ್ರಾಯೋಗಿಕವಾಗಿ ಮೀಟರ್ ಅಳವಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮುಂದಾಗಿದೆ.

ವಿದ್ಯುತ್ ಬಳಕೆಯ ಮೇಲೆ ನಿಗಾ ವಹಿಸುವುದು ಮತ್ತು ವೆಚ್ಚ ಕಡಿಮೆ ಮಾಡುವುದೇ ಪ್ರಮುಖ ಉದ್ದೇಶ. ಅತಿ ಹೆಚ್ಚು ವಿದ್ಯುತ್ ಶುಲ್ಕ ಪಾವತಿಸುವ ಪಂಚಾಯಿತಿಗಳ ವಿವರಗಳನ್ನು ಆರು 'ಎಸ್ಕಾಂ'ಗಳಿಂದ ಪಡೆದು ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗಿದೆ. ಯೋಜನೆಗೆ ಆಡಳಿತಾತ್ಮಕ ಅನುಮೋದನೆಯೂ ದೊರೆತಿದೆ.

ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಆಯಾ ಜಿಲ್ಲೆಯ ಎಸ್ಕಾಂಗೆ ಪ್ರಸ್ತಾವ ಸಲ್ಲಿಸಬೇಕು. ಗ್ರಾಮವಾರು ಮೀಟರ್ ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ, ಕ್ರೋಡೀಕೃತ ವರದಿಯನ್ನು ಸಲ್ಲಿಸುವಂತೆ ಇಲಾಖೆಯ ಆಯುಕ್ತರು ಸೂಚಿಸಿದ್ದಾರೆ.

ಜಟಾಪಟಿಗೆ ಕಾರಣ: ಬೀದಿದೀಪಗಳಿಗೆ ಸಮರ್ಪಕವಾಗಿ ಮೀಟರ್ ಅಳವಡಿಸದ ಕಾರಣ, ಮಾಸಿಕ ವಿದ್ಯುತ್ ಶುಲ್ಕ ಎಷ್ಟು ಭರಿಸಬೇಕೆಂಬ ಬಗ್ಗೆ ನಿಖರತೆ ಇರಲಿಲ್ಲ. ಇದು ಪಂಚಾಯಿತಿ ಮತ್ತು ವಿದ್ಯುತ್ ಕಂಪನಿ ಮಧ್ಯೆ ಜಟಾಪಟಿಗೆ ಕಾರಣವಾಗಿತ್ತು.

'ವಿದ್ಯುತ್ ಕಂಪನಿಗಳು ಅವೈಜ್ಞಾನಿಕವಾಗಿ ವಿದ್ಯುತ್ ಬಿಲ್ ನೀಡುತ್ತಿರುವುದರಿಂದ ಹಣ ಪಾವತಿ ದೊಡ್ಡ ಹೊರೆಯಾಗಿದೆ' ಎಂಬುದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಆರೋಪ. 'ಕೆಲವು ಪಂಚಾಯಿತಿಗಳು ₹50 ಲಕ್ಷದಿಂದ ₹1 ಕೋಟಿಯವರೆಗೆ ಬಿಲ್ ಬಾಕಿ ಉಳಿಸಿಕೊಂಡಿವೆ. ಇದರಿಂದ ಸಮರ್ಪಕ ವಿದ್ಯುತ್ ಪೂರೈಕೆಗೆ ತೊಡಕಾಗಿದೆ' ಎಂಬುದು ಸೆಸ್ಕ್ ಅಧಿಕಾರಿಗಳ ದೂರು.

ಹಗಲಿನಲ್ಲೂ ಬೀದಿದೀಪ: 'ಹಲವು ಗ್ರಾಮಗಳಲ್ಲಿ ಸಮರ್ಪಕ ನಿರ್ವಹಣೆ ಕೊರತೆಯಿಂದ ಹಗಲಲ್ಲೂ ಬೀದಿದೀಪಗಳು ಉರಿಯುತ್ತಿವೆ. ಕೆಲವೆಡೆ ಅನಧಿಕೃತವಾಗಿ ಜನ ವಿದ್ಯುತ್ ಸಂಪರ್ಕ ಪಡೆಯುತ್ತಿದ್ದಾರೆ. ಹೀಗಾಗಿ ಪಂಚಾಯಿತಿಗಳಿಗೆ ವಿದ್ಯುತ್ ಶುಲ್ಕ ಪಾವತಿಸುವುದು ದೊಡ್ಡ ಹೊರೆಯಾಗಿತ್ತು. ಮೀಟರ್ ಅಳವಡಿಸಿದರೆ ವಿದ್ಯುತ್ ಪೋಲಾಗುವುದನ್ನು ತಪ್ಪಿಸಬಹುದು' ಎನ್ನುತ್ತಾರೆ ಇಲಾಖೆಯ ಅಧಿಕಾರಿಗಳು.

ಮಂಡ್ಯ ಜಿಲ್ಲೆಯ 7 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರಾಯೋಗಿಕವಾಗಿ ವಿದ್ಯುತ್ ಮೀಟರ್ ಅಳವಡಿಸಲು ಈಗಾಗಲೇ ಕ್ರಮ ಕೈಗೊಂಡಿದ್ದೇವೆ

ಶೇಖ್ ತನ್ವೀರ್ ಆಸಿಫ್
ಸಿಇಒ, ಮಂಡ್ಯ ಜಿಲ್ಲಾ ಪಂಚಾಯಿತಿ

ಮೀಟರ್ ಅಳವಡಿಸುವುದರಿಂದ ಬೀದಿದೀಪಗಳು ಎಷ್ಟು ವಿದ್ಯುತ್ ಬಳಸಿವೆ ಎಂಬ ನಿರ್ದಿಷ್ಟ ಮಾಹಿತಿ ದೊರೆತು, ನಿಖರ ಬಿಲ್ ನೀಡಲು ಅನುಕೂಲವಾಗುತ್ತದೆ

ಶೀಲಾ ಜಿ.
ವ್ಯವಸ್ಥಾಪಕ ನಿರ್ದೇಶಕಿ, ಸೆಸ್ಕ್

ಮೀಟರ್ ಅಳವಡಿಕೆಗೆ ಆಯ್ಕೆಯಾದ ಗ್ರಾಮ ಪಂಚಾಯಿತಿಗಳ ವಿವರ

ವಿದ್ಯುತ್ ಕಂಪನಿಗಳು	ಗ್ರಾ.ಪಂ.ಸಂಖ್ಯೆ
ಹೆಸ್ಕಾಂ	47
ಸೆಸ್ಕ್	33
ಜೆಸ್ಕಾಂ	47
ಬೆಸ್ಕಾಂ	42
ಮೆಸ್ಕಾಂ	31
ಒಟ್ಟು	200

ಮರಕುಂಬಿ ಪ್ರಕರಣ: 99 ಮಂದಿ ಇಂದು ಬಿಡುಗಡೆ

ಬಳ್ಳಾರಿ: ಮರಕುಂಬಿ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ 99 ಅಪರಾಧಿಗಳಿಗೆ ಜಾಮೀನು ಮಂಜೂರಾಗಿದ್ದು, ಎಲ್ಲರನ್ನೂ ಶನಿವಾರ ಪೊಲೀಸರು ಬಿಡುಗಡೆ ಮಾಡುವರು.

'ಭದ್ರತೆ ಮತ್ತು ₹50 ಸಾವಿರ ಬಾಂಡ್ ಅನ್ನು 99 ಮಂದಿ ಸಲ್ಲಿಸಿದ್ದರು. ಜಾಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಂಡಿವೆ. ಕೆಳಹಂತದ ನ್ಯಾಯಾಲಯದಿಂದ ಬಿಡುಗಡೆ ಆದೇಶ ಬಂದಿದ್ದು, ಶನಿವಾರ ಬಿಡುಗಡೆ ಆಗುವರು' ಎಂದು ಬಳ್ಳಾರಿ ಕಾರಾಗೃಹದ ಅಧೀಕ್ಷಕಿ ಲತಾ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರಕರಣದ ಒಟ್ಟು 101 ಅಪರಾಧಿಗಳ ಪೈಕಿ ಒಬ್ಬ ಅಪರಾಧಿ ಶಿಕ್ಷೆ ಪ್ರಕಟವಾದ ದಿನವೇ ಮೃತಪಟ್ಟಿದ್ದ. 100 ಜನರನ್ನು ಬಳ್ಳಾರಿಯ ಕೇಂದ್ರ ಕಾರಾಗೃಹದಲ್ಲಿ ಇರಿಸಲಾಗಿತ್ತು. ಈ ಪೈಕಿ ಪ್ರಕರಣದ 'ಎ1' ಆರೋಪಿ ಜಾಮೀನಿಗೆ ಅರ್ಜಿ ಸಲ್ಲಿಸಿರಲಿಲ್ಲ. ಸದ್ಯ 99 ಮಂದಿಗೆ ಜಾಮೀನು ಸಿಕ್ಕಿದೆ.

ಮುಂಡಾಲ ಸಮುದಾಯ ವಿರೋಧ

ಮಂಗಳೂರು: 'ಒಳ ಮೀಸಲಾತಿ ಜಾರಿಗೊಳಿಸಿದರೆ ಮುಂಡಾಲ ಸಮುದಾಯಕ್ಕೆ ಭಾರಿ ಅನ್ಯಾಯವಾಗಲಿದೆ' ಎಂದು ಈ ಸಮುದಾಯದ ಮುಖಂಡರು ಆತಂಕ ವ್ಯಕ್ತಪಡಿಸಿದರು.

ಇಲ್ಲಿಯ ಬಿಜೈ ಕಾಪಿಕಾಡ್‌ನಲ್ಲಿರುವ ಕುದ್ಮುಲ್ ರಂಗರಾವ್ ಸ್ಮಾರಕ ಭವನದಲ್ಲಿ ಅಖಿಲ ಭಾರತ ಮುಂಡಾಲ ಯುವ ವೇದಿಕೆಯ ನೇತೃತ್ವದಲ್ಲಿ ನಡೆದ ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳ ಮುಂಡಾಲ ಸಮುದಾಯದ ಮುಖಂಡರ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಯಿತು.

'ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಮುಂಡಾಲ ಸಮುದಾಯದ ಸ್ಪಷ್ಟ ದಾಖಲೆಯನ್ನು ಪಡೆಯದೆ ಜಾರಿಗೊಳಿಸಲು ಉದ್ದೇಶಿಸಿರುವ ಈ ಒಳಮೀಸಲಾತಿಯು ಅವೈಜ್ಞಾನಿಕವಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಸಿಗುವ ಸವಲತ್ತು, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ ಸೇರಿದಂತೆ ಎಲ್ಲಾ ಸೌಲಭ್ಯದಿಂದ ಮುಂಡಾಲ ಸಮುದಾಯ ವಂಚಿತವಾಗಲಿದೆ. ಒಳ ಮೀಸಲಾತಿ ತಡೆಹಿಡಿದು ಈ ಹಿಂದಿನಂತೆ ಸಂವಿಧಾನದ ಆಶಯದಡಿ ಇದ್ದ ಮೀಸಲಾತಿಯನ್ನು ಮುಂದುವರಿಸಬೇಕು' ಎಂದು ಮುಖಂಡರು ಆಗ್ರಹಿಸಿದರು.

ಕಚೂರು ಶ್ರೀ ಮಾಲ್ತಿದೇವಿ ಬಬ್ಬುಸ್ವಾಮಿ ಕ್ಷೇತ್ರದ ಆಡಳಿತ ಸಮಿತಿ, ಮುಂಡಾಲ ಮಹಾಸಭಾ ಉಡುಪಿ, ಮುಂಡಾಲ ಯುವ ವೇದಿಕೆ ಪಡುಬಿದ್ರಿ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಮಂಗಳೂರು ಹಾಗೂ ಬಬ್ಬುಸ್ವಾಮಿ ದೈವಸ್ಥಾನಗಳ ಪ್ರಮುಖರು, ರಾಜಕೀಯ, ಧಾರ್ಮಿಕ ಮುಖಂಡರು ಸಭೆಯಲ್ಲಿ ಭಾಗವಹಿಸಿದ್ದರು.



ಅಖಿಲ ಭಾರತ ಮುಂಡಾಲ ಯುವ ವೇದಿಕೆಯ ನೇತೃತ್ವದಲ್ಲಿ ದ.ಕ. ಉಡುಪಿ, ಚಿಕ್ಕಮಗಳೂರು ಜಿಲ್ಲೆಗಳ ಮುಂಡಾಲ ಸಮುದಾಯದ ಮುಖಂಡರ ಸಭೆ ಮಂಗಳೂರಿನಲ್ಲಿ ನಡೆಯಿತು

ಒಳ ಮೀಸಲಾತಿ



ಹುಬ್ಬಳ್ಳಿಯ ತತ್ವದರ್ಶ ಆಸ್ಪತ್ರೆ ಆವರಣದಲ್ಲಿ ಶುಕ್ರವಾರ ಇಂದೂಧರ ದೇವರು ಅವರನ್ನು ಮಂಟೂರಿನ ಅಡವಿಸಿದ್ಧೇಶ್ವರ ಮಠದ ಉತ್ತರಾಧಿಕಾರಿಯನ್ನಾಗಿ ಭಕ್ತರ ಸಮ್ಮುಖದಲ್ಲಿ ಘೋಷಿಸಲಾಯಿತು

ಅಡವಿಸಿದ್ಧೇಶ್ವರ ಮತ್ತು ಇಂದೂಧರೇಶ್ವರ ಮಠ

ಆಸ್ಪತ್ರೆಯಲ್ಲೇ ಉತ್ತರಾಧಿಕಾರಿ ಘೋಷಣೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ತಾಲ್ಲೂಕಿನ ಮಂಟೂರಿನ ಅಡವಿಸಿದ್ಧೇಶ್ವರ ಮಠ ಮತ್ತು ಸೊರಬ ತಾಲ್ಲೂಕಿನ ಗೇರೆಕೊಪ್ಪದ ಇಂದೂಧರೇಶ್ವರ ಮಠದ ಪೀಠಾಧಿಪತಿ ಶಿವಲಿಂಗೇಶ್ವರ ಸ್ವಾಮೀಜಿ ಅನಾರೋಗ್ಯದಿಂದ ನಗರದ ತತ್ವದರ್ಶ ಆಸ್ಪತ್ರೆಗೆ ದಾಖಲಾಗಿದ್ದು, ಅಲ್ಲಿಯೇ ಮಠದ ಉತ್ತರಾಧಿಕಾರಿಯಾಗಿ ಇಂದೂಧರ ದೇವರು ಅವರನ್ನು ಶುಕ್ರವಾರ ಸಾಂಕೇತಿಕವಾಗಿ ಘೋಷಿಸಲಾಯಿತು.

'82 ವರ್ಷದ ಶಿವಲಿಂಗೇಶ್ವರ ಸ್ವಾಮೀಜಿಯವರಿಗೆ ಐದು ದಿನಗಳ ಹಿಂದೆ ಹೃದಯಾಘಾತವಾಗಿದ್ದು, ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಮುಂದುವರೆದಿದೆ. ಭಕ್ತರು ಆತಂಕಗೊಳ್ಳದಿರಲಿ ಎಂಬ ಉದ್ದೇಶದಿಂದ ಶಿವಲಿಂಗೇಶ್ವರ ಸ್ವಾಮೀಜಿ ಅವರ ಇಚ್ಛೆಯಂತೆ ಉತ್ತರಾಧಿಕಾರಿಯನ್ನು ಘೋಷಿಸಲಾಗಿದೆ' ಎಂದು ಮಂಟೂರಿನ ಮಠದ ಭಕ್ತರಾದ ಈರಣ್ಣ ಮಳಗಿ ಮತ್ತು ರೇವಣಸಿದ್ದಯ್ಯ ತಿಳಿಸಿದರು.

'ಮೈಸೂರಿನ ಸುತ್ತೂರು ಮಠದಲ್ಲಿ ಬಿ.ಎ ಓದುತ್ತಿರುವ ಇಂದೂಧರ ದೇವರಿಗೆ ಕಳೆದ ವರ್ಷವೇ ಪಟ್ಟಾಭಿಷೇಕ ಮಾಡಲು ನಿರ್ಧರಿಸಲಾಗಿತ್ತು. ಸಾಧ್ಯವಾಗಿರಲಿಲ್ಲ. ಹುಬ್ಬಳ್ಳಿ, ಮಂಟೂರು, ಬಮ್ಮಿಗಟ್ಟಿ ಭಕ್ತರ ಸಮ್ಮುಖದಲ್ಲಿ ಈಗ ಘೋಷಣೆ ಪ್ರಕ್ರಿಯೆ ನೆರವೇರಿಸಲಾಗಿದೆ' ಎಂದು ಸೊರಬ ತಾಲ್ಲೂಕಿನ ಬಿಳವಾಣಿ ಗ್ರಾಮ ಪಂಚಾಯಿತಿ ಸದಸ್ಯ ಮಹೇಂದ್ರ ಬಿ ತಿಳಿಸಿದರು. ಬೊಮ್ಮನಹಳ್ಳಿ ಮಠದ ಸ್ವಾಮೀಜಿ ಮತ್ತು ಪ್ರಮುಖರು ಇದ್ದರು.

ವಿವಾಹ ಪ್ರಮಾಣ ಪತ್ರ ವಿಚಾರಣೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ಮುಖಾಂತರ ಮುಸ್ಲಿಮರ ವಿವಾಹ ನೋಂದಣಿ ಪ್ರಮಾಣಪತ್ರ ವಿತರಿಸುವ ಅಧಿಕಾರದ ಬಗ್ಗೆ ಎಲ್ಲೂ ಕೇಳಿಲ್ಲವಲ್ಲ' ಎಂಬ ಮೌಖಿಕ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್,'ಯಾವ ಕಾನೂನಿನ ಅಧಿಕಾರವನ್ನು ಬಳಸಿ ಇಂತಹ ಆದೇಶ ಹೊರಡಿಸಲಾಗಿದೆ ಎಂಬ ಬಗ್ಗೆ ಉತ್ತರಿಸಿ' ಎಂದು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ವಕ್ಫ್ ಮಂಡಳಿಗಳಿಗೆ ಮುಸ್ಲಿಂ ವಿವಾಹಗಳನ್ನು ಕಡ್ಡಾಯವಾಗಿ ನೋಂದಾಯಿಸುವ ಯಾವುದೇ ಶಾಸನಾತ್ಮಕ ಅಧಿಕಾರ ಇಲ್ಲ' ಎಂದು ಆಕ್ಷೇಪಿಸಿ ಆಲಂ ಪಾಷ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್‌.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, 'ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಎರಡು ವಾರ ಕಾಲಾವಕಾಶ ನೀಡಬೇಕು' ಎಂದು ಮನವಿ ಮಾಡಿದರು. ಆದರೆ, ಇದಕ್ಕೆ ಅಸಮ್ಮತಿ ವ್ಯಕ್ತಪಡಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿತು. ಅಂತೆಯೇ, 'ಮುಂದಿನ ವಿಚಾರಣೆ ವೇಳೆಗೆ ಲಿಖಿತ ರೂಪದಲ್ಲಿ ಆಕ್ಷೇಪಣೆ ಸಲ್ಲಿಸಬೇಕು' ಎಂದು ತಾಕೀತು ಮಾಡಿತು.

'ಮುಸ್ಲಿಂ ಮದುವೆಗಳ ನೋಂದಣಿ ಪ್ರಮಾಣ ಪತ್ರವನ್ನು ವಿತರಿಸುವಂತಹ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಬಹುದು ಎಂಬುದಕ್ಕೆ ವಕ್ಫ್ ಕಾಯ್ದೆ-1995ರ ಯಾವ ಕಲಂನಲ್ಲಿ ಅವಕಾಶ ನೀಡಲಾಗಿದೆ ಎಂಬುದನ್ನು ವಿಶದಪಡಿಸಿ' ಎಂದು ಮೌಖಿಕವಾಗಿ ನಿರ್ದೇಶಿಸಿತು.

ಕೋರಿಕೆ: 'ರಾಜ್ಯ ಸರ್ಕಾರದ ಅಲ್ಪಸಂಖ್ಯಾತ, ವಕ್ಫ್ ಮತ್ತು ಹಜ್ ಇಲಾಖೆ 2023ರ ಸೆಪ್ಟೆಂಬರ್ 30ರಂದು ಆದೇಶವೊಂದನ್ನು ಹೊರಡಿಸಿದೆ. ಇದರನ್ವಯ ಮುಸ್ಲಿಂ ಸಮುದಾಯದ ವಿವಾಹ ನೋಂದಣಿ ಪ್ರಮಾಣ ಪತ್ರಗಳನ್ನು ವಿತರಿಸುವ ಅಧಿಕಾರವನ್ನು ವಕ್ಫ್ ಮಂಡಳಿಗೆ ನೀಡಲಾಗಿದೆ. ಇದು ವಕ್ಫ್ ಕಾಯ್ದೆ-1995ರ ನಿಯಮಗಳಿಗೆ ವಿರುದ್ಧವಾಗಿದೆ. ಆದ್ದರಿಂದ, ಸರ್ಕಾರದ ಈ ಆದೇಶವನ್ನು ರದ್ದುಗೊಳಿಸಬೇಕು. ಈ ಮೊದಲಿದ್ದ ವ್ಯವಸ್ಥೆಯನ್ನೇ ಮುಂದುವರಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಶೋಧಕಾರ್ಯ ಮುಂದುವರಿಕೆ

ಇಂಫಾಲ್ (ಪಿಟಿಐ): ಶಸ್ತ್ರಸಜ್ಜಿತ ಬುಡಕಟ್ಟು ಉಗ್ರರು ಜಿರೀಬಾಮ್ ಜಿಲ್ಲೆಯಲ್ಲಿ ಮೂವರು ಮಹಿಳೆಯರು ಮತ್ತು ಮೂವರು ಮಕ್ಕಳನ್ನು ಅಪಹರಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳದಲ್ಲೇ ಬೀಡುಬಿಟ್ಟಿದ್ದು, ಶೋಧಕಾರ್ಯದ ನಿಗಾ ವಹಿಸಿದ್ದಾರೆ.

'ಮದ್ಯದಂಗಡಿ ಬಂದ್‌ಗೆ ಬೆಂಬಲವಿಲ್ಲ'

ಮೈಸೂರು: 'ಫೆಡರೇಷನ್ ಆಫ್ ವೈನ್ ಮರ್ಚೆಂಟ್ ಅಸೋಸಿಯೇಷನ್ ನ.20ರಂದು ಕರೆನೀಡಿರುವ 'ಮದ್ಯದಂಗಡಿ ಬಂದ್'ಗೆ ನಮ್ಮ ಬೆಂಬಲವಿಲ್ಲ' ಎಂದು ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ ಡೆವಲಪ್‌ಮೆಂಟ್ ಕೋ–ಅಪರೇಟಿವ್ ಸೊಸೈಟಿ ಅಧ್ಯಕ್ಷ ಎಸ್.ಚಂದ್ರಶೇಖರ್ ಶುಕ್ರವಾರ ಇಲ್ಲಿ ತಿಳಿಸಿದರು.

'ಮೈಸೂರು – ಚಾಮರಾಜನಗರ ಜಿಲ್ಲೆಯ ಸನ್ನದುದಾರರ ಸಭೆಯಲ್ಲಿ ಈ ತೀರ್ಮಾನ ಮಾಡಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'2002–2003ರಲ್ಲಿ ನೋಂದಣಿಯಾದ ಫೆಡರೇಷನ್ ಆಫ್ ವೈನ್ ಮರ್ಚೆಂಟ್‌ಅಸೋಸಿಯೇಷನ್‌ಸಂಘವು ಬಳಿಕ ನವೀಕರಣ ಮಾಡಿಕೊಂಡಿಲ್ಲ. ಹೀಗಾಗಿ ಅದು ಅಸ್ತಿತ್ವದಲ್ಲಿಲ್ಲ ಎಂದು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯೇ ದೃಢೀಕರಣ ಪತ್ರ ನೀಡಿದೆ. ಅದರ ಅಧ್ಯಕ್ಷ ಗುರುಸ್ವಾಮಿ ಮತ್ತು ಕಾರ್ಯದರ್ಶಿ ಬಿ.ಗೋವಿಂದರಾಜ್ ಹೆಗ್ಡೆ ಅವರ ವೈಯಕ್ತಿಕ ಲಾಭಕ್ಕಾಗಿ ಬಂದ್‌ಗೆ ಕರೆ ನೀಡಿದ್ದಾರೆ. ಈ ಬಗ್ಗೆ ಬೆಂಗಳೂರು ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದೇವೆ' ಎಂದರು.

ಹುಡುಕಿ ಕೊಲ್ಲುವ ಹೇಳಿಕೆ: ಈಶ್ವರಪ್ಪ ವಿರುದ್ಧ ಎಫ್‌ಐಆರ್

ಶಿವಮೊಗ್ಗ: 'ಮುಸ್ಲಿಮರ ಓಲೈಕೆ ಹೀಗೆಯೇ ಮುಂದುವರಿಸಿದರೆ ಜನರು ದಂಗೆ ಏಳುವ ಕಾಲ ದೂರವಿಲ್ಲ. ಕಾಂಗ್ರೆಸ್ಸಿಗರನ್ನು ಹುಡುಕಿ ಹೊಡೆದು ಕೊಲ್ಲುವಂತಹ ದಿನಗಳು ಬಂದರೂ ಆಶ್ಚರ್ಯವಿಲ್ಲ' ಎಂದು ಹೇಳಿದ್ದ ಮಾಜಿ ಉಪಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ವಿರುದ್ಧ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ.

ಇಲ್ಲಿನ ಜಯನಗರ ಠಾಣೆ ಪೊಲೀಸರು ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದಾರೆ. ಮಾಧ್ಯಮಗಳ ವರದಿ ಆಧರಿಸಿ, ಬೇರೆ ಧರ್ಮ ಹಾಗೂ ಪಕ್ಷದವರ ವಿರುದ್ಧ ಪ್ರಚೋದನಕಾರಿ ಹೇಳಿಕೆ ನೀಡಿರುವ ಕಾರಣ ಇನ್‌ಸ್ಪೆಕ್ಟರ್ ಎಚ್.ಎಂ. ಸಿದ್ಧೇಗೌಡ ಅವರು ಈಶ್ವರಪ್ಪ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

ಈಚೆಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಕೆ.ಎಸ್.ಈಶ್ವರಪ್ಪ, 'ಕಾಂಗ್ರೆಸ್ ಸರ್ಕಾರ ಇಸ್ಲಾಮೀಕರಣಕ್ಕೆ ಬೆಂಬಲ ನೀಡುತ್ತಾ ಬಂದಿದೆ. ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ 4ರಷ್ಟು ಮೀಸಲಾತಿ ಘೋಷಣೆ ಮಾಡಲು ಸಿದ್ದರಾಮಯ್ಯ ಹೊರಟಿದ್ದಾರೆ' ಎಂದಿದ್ದರು

ಈಶ್ವರಪ್ಪ ಹೇಳಿಕೆ ಖಂಡಿಸಿ ಕಾಂಗ್ರೆಸ್‌ನಿಂದ ಶುಕ್ರವಾರ ಸಂಜೆ ಶಿವಮೊಗ್ಗದಲ್ಲಿ ಪ್ರತಿಭಟನೆಯೂ ನಡೆಯಿತು.

ಕಣದಲ್ಲಿ ಟೀಕೆಗಳದ್ದೇ ಪಾರುಪತ್ಯ

ಮಹಾರಾಷ್ಟ್ರ: ಉಪಮೆಗಳ ಮೂಲಕ ವಾಗ್ದಾಳಿ ನಡೆಸುತ್ತಿರುವ ಮೈತ್ರಿಕೂಟಗಳ ಮುಖಂಡರು

• ಮೃತ್ಯುಂಜಯ ಬೋಸ್

ಮುಂಬೈ: ಮಹಾರಾಷ್ಟ್ರದಲ್ಲಿ ಈಗ ವಿಧಾನಸಭೆ ಚುನಾವಣೆ ಪ್ರಚಾರದ ಅಬ್ಬರ ತಾರಕಕ್ಕೇರಿದೆ. ಅಲ್ಲೀಗ ಟೀಕೆಗಳದ್ದೇ ಪಾರುಪತ್ಯ. ಅಧಿಕಾರಕ್ಕಾಗಿ ಹಣಾಹಣಿ ನಡೆಸುತ್ತಿರುವ ಮಹಾಯುತಿ ಮತ್ತು ಮಹಾವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟಗಳು ಈಗ ಟೀಕೆಗಳನ್ನು ಮೊಳಗಿಸುವುದರಲ್ಲಿಯೂ ಸ್ಪರ್ಧೆಗೆ ಬಿದ್ದಿವೆ.

'ಸಂವಿಧಾನ ಉಳಿಸಿ', 'ಏಕ್ ಹೈ ತೊ ಸೇಫ್ ಹೈ'(ಒಟ್ಟಾಗಿದ್ದರೆ ಸುರಕ್ಷೆ), 'ಬಟೇಂಗೆ ತೋ ಕಾಟೇಂಗೆ' (ಒಗ್ಗಟ್ಟು ಇಲ್ಲದಿರುವುದು ವಿನಾಶಕ್ಕೆ ಕಾರಣ), 'ನಫ್ರತ್ ಕೆ ಬಜಾರ್ ಮೇ ಮೊಹಬ್ಬತ್ ಕಿ ದುಖಾನ್' (ದ್ವೇಷದ ಬಜಾರಿನಲ್ಲಿ ಪ್ರೀತಿಯ ಅಂಗಡಿ), 'ಪಾಕಿಸ್ತಾನಿ ಅಜೆಂಡಾ', 'ಕರೆಕ್ಟ್ ಕಾರ್ಯಕ್ರಮ್', 'ವೋಟ್ ಜಿಹಾದ್', 'ಧರ್ಮಯುದ್ಧ್', 'ಗದ್ದಾರ್', 'ಭೋಂಗೆ ಬಂದ್ ಕರಾ' (ಸುಳ್ಳು ಹೇಳುವುದನ್ನು ನಿಲ್ಲಿಸಿ), 'ಝೂಟೋಂ ಕಾ ಸರ್ದಾರ್' (ಸುಳ್ಳುಗಳ ಸರದಾರ)...



ಮುಂಬೈನಲ್ಲಿ ಗುರುವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಏಕನಾಥ ಶಿಂದೆ ಅವರೊಂದಿಗೆ ಚರ್ಚೆಯಲ್ಲಿ ತೊಡಗಿದ್ದರು ಪಿಟಿಐ ಚಿತ್ರ

ಇವು, ಪ್ರಚಾರದ ಅಂಗಳದಲ್ಲಿ ಕೇಳಿಬರುತ್ತಿರುವ ಪ್ರಮುಖ ಘೋಷಣೆಗಳು, ವಾಗ್ಯುದ್ಧಕ್ಕೆ ಬಳಸಲಾಗುತ್ತಿರುವ ಮಾತುಗಳು. ನವೆಂಬರ್ 20ರಂದು ಚುನಾವಣೆ ನಡೆಯಲಿದೆ. ಬಿಜೆಪಿ ನೇತೃತ್ವದ ಮಹಾಯುತಿ ಮೈತ್ರಿಯಲ್ಲಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ಇವೆ. ಹಾಗೆಯೇ, ಕಾಂಗ್ರೆಸ್ ನೇತೃತ್ವದ ಎಂವಿಎ ಮೈತ್ರಿಕೂಟಲ್ಲಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ, ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಇವೆ.

ಕಾಂಗ್ರೆಸ್ ಪಕ್ಷವು 'ಸಂವಿಧಾನ ಉಳಿಸಿ', 'ಮೀಸಲಾತಿ ಉಳಿಸಿ' ಘೋಷಣೆಗಳಿಗೆ ಹೆಚ್ಚು ಒತ್ತು ನೀಡಿದೆ. ಈ ಮೂಲಕ ರಾಹುಲ್ ಗಾಂಧಿ ನೇತೃತ್ವದಲ್ಲಿ ದಲಿತ, ಮುಸ್ಲಿಂ ವೋಟುಗಳತ್ತ ಪಕ್ಷ ಕಣ್ಣಿಟ್ಟಿದೆ. ಇನ್ನೊಂದೆಡೆ, ಪ್ರಧಾನಿ ನರೇಂದ್ರ ಮೋದಿ ಅವರ 'ಏಕ್ ಹೈ ತೋ ಸೇಫ್ ಹೈ' ಎಂಬ ಘೋಷಣೆಯನ್ನು ಬಿಜೆಪಿ ನೆಚ್ಚಿಕೊಂಡಿದೆ. ಇದರ ಜೊತೆಗೆ ಅಮಿತ್ ಶಾ ಅವರ 'ಮುಸ್ಲಿಂ ಕೋಟಾ ಇಲ್ಲ' ಮತ್ತು ಯೋಗಿ ಆದಿತ್ಯನಾಥ ಅವರ 'ಬಟೇಂಗೆ ತೋ ಕಾಟೇಂಗೆ' ಘೋಷಣೆಗಳು ಚರ್ಚೆಗೆ ಗ್ರಾಸವಾಗಿವೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೋದಿ ಅವರನ್ನು 'ಝೂಟೋಂ ಕಾ ಸರ್ದಾರ್' ಎಂದು ಕರೆದಿದ್ದು, 'ಭಾಯಿಯೊ ಔರ್ ಬೆಹನೊ...' ಎಂದು ಕಳೆದ 10 ವರ್ಷಗಳಿಂದ ಅವರು ನೀಡಿದ ಘೋಷಣೆಗಳು ಸಾಕಾರಗೊಂಡಿಲ್ಲ ಎಂದು ಟೀಕಿಸಿದ್ದಾರೆ.

ಶಿವಸೇನಾದ ವಿಭಜನೆಯನ್ನು ಸಮರ್ಥಿಸಿಕೊಳ್ಳುತ್ತಾ ಮುಖ್ಯಮಂತ್ರಿ ಏಕನಾಥ್ ಶಿಂದೆ ಅವರು, 'ಕರೆಕ್ಟ್ ಕಾರ್ಯಕ್ರಮ್ ಕಿಯಾ' ಎಂದು ಹೇಳಿದರೆ, ಪ್ರತಿಯಾಗಿ ಮತ್ತೊಂದು ಬಣದ ಮುಖ್ಯಸ್ಥ, ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಮತ್ತು ಅವರ ಪುತ್ರ ಆದಿತ್ಯ ಠಾಕ್ರೆ ಅವರು 'ಪನ್ನಾಸ್ ಖೋಕೆ' ಎಂಬ ವ್ಯಾಖ್ಯಾನವನ್ನು ಬಳಸುತ್ತಿದ್ದಾರೆ.

ಮೋದಿ –ಶಾ ಅವರು 'ಔರಂಗ್‌ಜೇಬ್ ಫ್ಯಾನ್ ಕ್ಲಬ್' ಎಂದು ಬಣ್ಣಿಸಿರುವುದಕ್ಕೆ ಪ್ರತಿಯಾಗಿ, ಉದ್ಧವ್ ಠಾಕ್ರೆ ಅವರು 'ಜಿನ್ನಾ ಫ್ಯಾನ್ ಕ್ಲಬ್' ಎಂದು ತಿರುಗೇಟು ನೀಡಿದ್ದಾರೆ.

ಪ್ರಚಾರದ ಅಬ್ಬರ ಹೆಚ್ಚಿದಂತೆ ಹೊಸ ಹೊಸ ಘೋಷಣೆಗಳು ಕೇಳಿಬರುತ್ತಿವೆ. ಘೋಷಣೆ, ಟೀಕೆ ಮಾಡುವುದರಲ್ಲೂ ಹೊಸ ಸ್ಪರ್ಧೆ ಏರ್ಪಟ್ಟಂತಿದೆ. ಈ ಪಟ್ಟಿಗೆ ಹೊಸ ಸೇರ್ಪಡೆ ಎಂಬಂತೆ ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ನಾನಾ ಪಟೋಲೆ ಅವರು, 'ಬಿಜೆಪಿಯನ್ನು ನಾಯಿಯಾಗಿಸುವ ಕಾಲ ಬಂದಿದೆ' ಎಂದು ಟೀಕಿಸಿದ್ದಾರೆ. ಇದಕ್ಕೆ ತೀವ್ರ ಟೀಕೆ ವ್ಯಕ್ತವಾಗಿದ್ದು, ಬಿಸಿ ಬಿಸಿ ಚರ್ಚೆ ನಡೆದಿದೆ.

ರೈತರಿಗೆ ನೆರವು ರಾಹುಲ್ ಭರವಸೆ

ಪ್ರಜಾವಾಣಿ ವಾರ್ತೆ

ಮುಂಬೈ: ಸೋಯಾಬೀನ್, ಹತ್ತಿ ಮತ್ತು ಈರುಳ್ಳಿ ಬೆಳೆಯುವ ರೈತರ ಸಮಸ್ಯೆ ಗಳನ್ನು ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟವು ಬಗೆಹರಿಸಲಿದೆ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದರು.

'ಎಂವಿಎ ಅಧಿಕಾರಕ್ಕೆ ಬಂದರೆ ಐತಿಹಾಸಿಕ ನಿರ್ಧಾರಗಳನ್ನು ತೆಗೆದುಕೊಳ್ಳಲಿದೆ. ಸೋಯಾಬೀನ್‌ಗೆ ಕನಿಷ್ಠ ಬೆಂಬಲ ಬೆಲೆ ಮತ್ತು ಬೋನಸ್ ಸೇರಿದಂತೆ ಪ್ರತಿ ಕ್ವಿಂಟಲ್‌ಗೆ ₹7,000 ನೀಡಲಿದೆ. ಈರುಳ್ಳಿಗೆ ನ್ಯಾಯಯುತ ಬೆಲೆ ನಿಗದಿಗೆ ಸಮಿತಿ ರಚಿಸಲಿದೆ ಮತ್ತು ಹತ್ತಿಗೂ ಸೂಕ್ತ ಎಂಎಸ್‌ಪಿ ನಿಗದಿ ಮಾಡಲಿದೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಪ್ರತಿ ಕ್ವಿಂಟಲ್ ಸೋಯಾಬೀನ್‌ಗೆ ₹6,000 ಎಂಎಸ್‌ಪಿ ನಿಗದಿ ಮಾಡುವ ಭರವಸೆಯನ್ನು ಬಿಜೆಪಿಯು ಕಳೆದ ಮೂರು ಚುನಾವಣೆಗಳಿಂದ ನೀಡುತ್ತಾ ಬಂದಿದೆ. ಆದರೆ ಕಷ್ಟಪಟ್ಟು ಬೆಳೆದ ಸೋಯಾಬೀನ್‌ಅನ್ನು ಕ್ವಿಂಟಲ್‌ಗೆ ₹3,000– ₹4,000ಕ್ಕೆ ಮಾರಾಟ ಮಾಡುವ ಅನಿವಾರ್ಯತೆಗೆ ರೈತರು ಸಿಲುಕಿದ್ದಾರೆ' ಎಂದಿದ್ದಾರೆ.

'ಸಮಾಜ ವಿಭಜಿಸುತ್ತಿರುವ ಪ್ರಧಾನಿ'

ಪುಣೆ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯ ಪ್ರಚಾರ ಸಭೆಗಳಲ್ಲಿ ಸುಳ್ಳುಗಳನ್ನು ಹೇಳಿ ಸಮಾಜ ಒಡೆಯುವ ಕೆಲಸದಲ್ಲಿ ನಿರತರಾಗಿದ್ದಾರೆ ಎಂದು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಆರೋಪಿಸಿದ್ದಾರೆ.



'ವಿರೋಧ ಪಕ್ಷಗಳ ಮೈತ್ರಿಕೂಟವು ಸಮಾಜವನ್ನು ಒಡೆಯುತ್ತಿದೆ ಎಂದು ಮೋದಿ ಅರೋಪಿಸುತ್ತಿದ್ದಾರೆ. ಆದರೆ, ಸಮಾಜ ಒಡೆಯುವ ಕೆಲಸವನ್ನು ಅವರೇ ಮಾಡುತ್ತಿದ್ದಾರೆ. ಕಳೆದ ಕೆಲವು ದಿನಗಳಲ್ಲಿ ಪ್ರಧಾನಿ ಮಾಡಿರುವ ಭಾಷಣಗಳು ಮತ್ತು ರಾಜಕೀಯ ಹಿತಾಸಕ್ತಿಗಾಗಿ ಅವರು ಎತ್ತುತ್ತಿರುವ ವಿಷಯಗಳನ್ನು ಗಮನಿಸಿದಾಗ ನಿಮಗೆ ಇದು ಅರ್ಥ ಆಗಬಹುದು' ಎಂದು 'ಪಿಟಿಐ'ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

ಕಾಂಗ್ರೆಸ್, ಶಿವಸೇನಾ (ಯುಬಿಟಿ) ಮತ್ತು ಎನ್‌ಸಿಪಿ (ಎಸ್‌ಪಿ) ಮೈತ್ರಿಕೂಟವು ಸಮಾಜವನ್ನು ವಿಭಜಿಸುವ ಉದ್ದೇಶದಿಂದ ತುಷ್ಟೀಕರಣ ರಾಜಕಾರಣ ಮಾಡುತ್ತಿವೆ ಎಂದು ಪ್ರಧಾನಿ ಆರೋಪಿಸಿದ್ದರಲ್ಲದೆ, 'ಏಕ್ ಹೈ ತೊ ಸೇಫ್ ಹೈ' (ಒಗ್ಗಟ್ಟಿನಿಂದ ಇದ್ದರೆ ನಾವು ಸುರಕ್ಷಿತವಾಗಿರುತ್ತೇವೆ) ಎಂದು ಕರೆ ನೀಡಿದ್ದರು.

ಅಜಿತ್ ಪವಾರ್ ಜತೆ ಹೋದ 'ದ್ರೋಹಿ'ಗಳಿಗೆ ಜನರು ನವೆಂಬರ್ 20ರಂದು ತಕ್ಕ ಪಾಠ ಕಲಿಸಲಿದ್ದಾರೆ ಎಂದರು. ಅಜಿತ್ ಪವಾರ್ ಅವರು 2023ರಲ್ಲಿ ಕೆಲವು ಶಾಸಕರೊಂದಿಗೆ ಬಿಜೆಪಿ ಜತೆ ಕೈಜೋಡಿಸಿದ್ದರು.

'ಯೋಗಿ ಅವರಿಗೆ ಪ್ರಾಮುಖ್ಯ ಏಕೆ?'

'ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಕೋಮುದ್ವೇಷ ಹರಡುವಲ್ಲಿ ಹೆಸರುವಾಸಿಯಾಗಿದ್ದಾರೆ. ಅವರಿಗೆ ಏಕೆ ಪ್ರಾಮುಖ್ಯ ನೀಡಬೇಕು? ಅವರ ಬಗ್ಗೆ ಒಂದು ವಾಕ್ಯ ಹೇಳುವುದೂ ನನಗೆ ಇಷ್ಟವಿಲ್ಲ. ಕೇಸರಿ ಬಟ್ಟೆ ಧರಿಸಿಕೊಂಡು ಕೋಮುವಾದ ಹರಡುವ ಅಂತಹ ಜನರು ದೇಶಕ್ಕೆ ಕೇಡು ಉಂಟುಮಾಡುತ್ತಿದ್ದಾರೆ' ಎಂದು ಶರದ್ ಪವಾರ್ ವಾಗ್ದಾಳಿ ನಡೆಸಿದರು.

ಮಹಾರಾಷ್ಟ್ರ: ಯೆವಲಾ ಕ್ಷೇತ್ರದಲ್ಲಿ ಕಣಕ್ಕಿಳಿದಿರುವ ಒಬಿಸಿಯ ನಾಯಕ

ಛಗನ್ ಭುಜಬಲ್‌ಗೆ ಅಗ್ನಿ ಪರೀಕ್ಷೆ


ಛಗನ್ ಭುಜಬಲ್ ಈ ಬಾರಿಯ ಚುನಾವಣೆಯಲ್ಲಿ ಮರಾಠ ಸಮುದಾಯದ ತೀವ್ರ ವಿರೋಧ ಎದುರಿಸುತ್ತಿದ್ದಾರೆ. ಭುಜಬಲ್ ಅವರನ್ನು ಸೋಲಿಸಲೇಬೇಕು ಎಂದು ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಅವರು ನಾಸಿಕ್ ಜಿಲ್ಲೆಯ ಮರಾಠರಿಗೆ ಮನವಿ ಮಾಡಿದ್ದಾರೆ

ಪ್ರಜಾವಾಣಿ ವಾರ್ತೆ

ನಾಸಿಕ್ (ಮಹಾರಾಷ್ಟ್ರ): ಹಿಂದುಳಿದ ವರ್ಗಗಳ ನಾಯಕರಾಗಿರುವ ಛಗನ್ ಭುಜಬಲ್ ಅವರು ತವರು ಜಿಲ್ಲೆ ನಾಸಿಕ್‌ನಲ್ಲಿ ಬಹುಶಃ ಜೀವನದ ಅತಿದೊಡ್ಡ ರಾಜಕೀಯ ಸವಾಲನ್ನು ಎದುರಿಸುತ್ತಿದ್ದಾರೆ.

ಐದು ಬಾರಿ ಶಾಸಕರು ಮತ್ತು ಒಂದು ಅವಧಿಗೆ ಎಂಎಲ್‌ಸಿ ಆಗಿದ್ದ 77 ವರ್ಷದ ಭುಜಬಲ್, ಈಗ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಯ ಭಾಗವಾಗಿದ್ದಾರೆ. ಅವರು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ನಾಸಿಕ್ ಜಿಲ್ಲೆಯ ಯೆವಲಾ ಕ್ಷೇತ್ರದಿಂದ ಕಣಕ್ಕಿಳಿದಿದ್ದಾರೆ.

ಭುಜಬಲ್ ಅವರು ತಮ್ಮ ಬಣ ತೊರೆದು, ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟ ಸೇರಿದ್ದನ್ನು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು 'ವೈಯಕ್ತಿಕ'ವಾಗಿ ತೆಗೆದುಕೊಂಡಿದ್ದರು. ಆದ್ದರಿಂದ ಭುಜಬಲ್ ಅವರನ್ನು ಮಣಿಸಲು ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದ್ದಾರೆ. ಮರಾಠ ಸಮುದಾಯದ ಮುಖಂಡ, ಮಾಣಿಕ್ ರಾವ್ ಶಿಂದೆ ಅವರು ಭುಜಬಲ್ ವಿರುದ್ಧ ಸ್ಪರ್ಧೆಗೆ ಇಳಿದಿದ್ದಾರೆ. ಮಾಣಿಕ್‌ರಾವ್, ಮಾಜಿ ಶಾಸಕ ಮಧುಕರರಾವ್ ಶಿಂದೆ ಅವರ ಮಗ.



ಛಗನ್ ಭುಜಬಲ್

2023ರ ಜೂನ್– ಜುಲೈನಲ್ಲಿ ಎನ್‌ಸಿಪಿ ವಿಭಜನೆಯಾದ ಬಳಿಕ ಯೆವಲಾದಲ್ಲಿ ತಮ್ಮ ಮೊದಲ ಸಾರ್ವಜನಿಕ ಸಭೆಯಲ್ಲಿ ಮಾತನಾಡುವಾಗ ಶರದ್ ಪವಾರ್ ಅವರು, 'ನಾನು ಕೆಲವು ಜನರನ್ನು ನಂಬಿ ತಪ್ಪು ಮಾಡಿದ್ದೇನೆ. ಆದರೆ ಆ ತಪ್ಪನ್ನು ಪುನರಾವರ್ತಿಸುವುದಿಲ್ಲ. ನೀವು ನನ್ನ ಮೇಲೆ ನಂಬಿಕೆಯಿಟ್ಟು ನಮ್ಮ ಪಕ್ಷಕ್ಕೆ ಮತ ಹಾಕಿದ್ದೀರಿ.

ಆದರೆ ನನ್ನ ಲೆಕ್ಕಾಚಾರ ತಪ್ಪಾಯಿತು, ಅದಕ್ಕಾಗಿ ಕ್ಷಮೆಯಾಚಿಸುತ್ತೇನೆ' ಎಂದು ಹೇಳಿದ್ದರು.

ಈ ವಾರದ ಆರಂಭದಲ್ಲಿ ನಡೆದ ಚುನಾವಣಾ ರ್‍ಯಾಲಿಯೊಂದರಲ್ಲಿ ಭುಜಬಲ್ ವಿರುದ್ಧ ವಾಗ್ದಾಳಿ ನಡೆಸಿ, 'ಅವರಿಗೆ ಸಿದ್ಧಾಂತದಲ್ಲಿ ನಂಬಿಕೆಯಿಲ್ಲ. ಅವರು ಪಕ್ಷ, ನಾಯಕತ್ವ ಮತ್ತು ಜನರಿಗೆ ದ್ರೋಹ ಮಾಡಿದ್ದಾರೆ. ಹಲವು ವರ್ಷ ಬೆಂಬಲ ನೀಡಿದ ಯೆವಲಾ ಕ್ಷೇತ್ರಕ್ಕೆ ಅವಮಾನ ಮಾಡಿದ್ದಾರೆ. ಆದ್ದರಿಂದ, ಅವರಿಗೆ ಪಾಠ ಕಲಿಸುವ ಸಮಯ ಈಗ ಕೂಡಿಬಂದಿದೆ. ಅವರನ್ನು ಮಣಿಸಲು ನಾನು ನಿಮಗೆ ಪೂರ್ಣ ಬೆಂಬಲ ನೀಡುತ್ತೇನೆ' ಎಂದಿದ್ದಾರೆ.

ಶರದ್ ಪವಾರ್ ಅವರ ಹೇಳಿಕೆಗೆ ಭುಜಬಲ್, 'ಶರದ್ ಪವಾರ್ ಸ್ಥಾಪಿಸಿರುವ ಎನ್‌ಸಿಪಿಯ ಸಿದ್ಧಾಂತ ಯಾವುದು? ವಿಜಯಸಿನ್ಹ ಮೋಹಿತೆ ಪಾಟೀಲ್, ಪದ್ಮಸಿನ್ಹ ಪಾಟೀಲ್, ಜಯಂತ್ ಪಾಟೀಲ್, ಮಧುಕರ್ ಪಿಚಡ್ ಮತ್ತು ಛಗನ್ ಭುಜಬಲ್ ಅವರಂತಹ ನಾಯಕರ ಗುಂಪು ಸೇರಿಕೊಂಡು ಎನ್‌ಸಿಪಿ ಪಕ್ಷ ಸ್ಥಾಪಿಸಿದೆ' ಎಂದು ತಿರುಗೇಟು ನೀಡಿದ್ದಾರೆ.

ಸುದ್ದಿ 2 ನಿಮಿಷ

'ಗ್ಯಾರಂಟಿ' ಯಶಸ್ವಿ ಜಾರಿ

ಮುಂಬೈ: 'ಕರ್ನಾಟಕದಲ್ಲಿ ಚುನಾವಣೆ ಸಂದರ್ಭದಲ್ಲಿ ನೀಡಿದ್ದ ಎಲ್ಲ ಐದು ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗಿದೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದ್ದಾರೆ.



'ಕರ್ನಾಟಕದ ಕಾಂಗ್ರೆಸ್ ಸರ್ಕಾರ ಗ್ಯಾರಂಟಿಗಳನ್ನು ಜಾರಿಗೊಳಿಸಲು ವಿಫಲವಾಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಒಳಗೊಂಡಂತೆ ಬಿಜೆಪಿ ನಾಯಕರು ಮಾಡಿರುವ ಆರೋಪಗಳನ್ನು ಅವರು ಅಲ್ಲಗಳೆದರು.

'ಗ್ಯಾರಂಟಿಗಳ ಅನುಷ್ಠಾನವನ್ನು ಪರಿಶೀಲಿಸಲು ಕರ್ನಾಟಕಕ್ಕೆ ಬರುವಂತೆ ಬಿಜೆಪಿ ನಾಯಕರನ್ನು ಸ್ವಾಗತಿಸುತ್ತೇನೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಗ್ಯಾರಂಟಿಗಳಿಗಾಗಿ ಬಜೆಟ್‌ನಲ್ಲೇ ₹56,000 ಕೋಟಿ ಮೀಸಲಿಟ್ಟಿರುವುದರಿಂದ ಯೋಜನೆಗಳ ಅನುಷ್ಠಾನಕ್ಕೆ ಸಾಕಷ್ಟು ಹಣವಿದೆ' ಎಂದರು.

ರಾಹುಲ್ ಹೆಲಿಕಾಪ್ಟರ್ ಟೇಕ್ ಆಫ್‌ಗೆ ಸಿಗದ ಅನುಮತಿ

ನವದೆಹಲಿ: ಜಾರ್ಖಂಡ್‌ನ ಗೊಡ್ಡಾದಲ್ಲಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಹೆಲಿಕಾಪ್ಟರ್‌ಗೆ ಟೇಕ್ ಆಫ್ ಮಾಡಲು ಮತ್ತು ದೇವಘರ್‌ನಲ್ಲಿ ಇಳಿಯಲು ಅನುಮತಿ ನಿರಾಕರಿಸಲಾಯಿತು.

ಜಾರ್ಖಂಡ್‌ನ ದೇವಘರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ವಿಮಾನದಲ್ಲಿ ತಾಂತ್ರಿಕ ದೋಷ ಕಂಡು ಬಂದಿದ್ದರಿಂದ ಸುಮಾರು ಎರಡು ಗಂಟೆ ಅವರು ಅಲ್ಲಿಯೇ ಇರಬೇಕಾಯಿತು. ಭದ್ರತಾ ಕಾರಣಗಳಿಂದ 'ಹಾರಾಟ ನಿಷೇಧ ವಲಯ'ವನ್ನಾಗಿ (ನೋ ಫ್ಲೈಯಿಂಗ್ ಝೋನ್) ಘೋಷಿಸಿದ್ದರಿಂದ ರಾಹುಲ್ ಗಾಂಧಿ ಅವರ ಪ್ರಯಾಣದಲ್ಲೂ ವ್ಯತ್ಯಯವಾಯಿತು.

ಇದರ ಪರಿಣಾಮ ರಾಹುಲ್ ಅವರ ಪ್ರಚಾರ ಕಾರ್ಯಗಳು ವಿಳಂಬವಾದವು ಎಂದು ವಿರೋಧ ಪಕ್ಷವಾದ ಕಾಂಗ್ರೆಸ್ ಕಿಡಿಕಾರಿದೆ.

ವಿಮಾನದಲ್ಲಿ ತಾಂತ್ರಿಕ ದೋಷ ಸರಿಪಡಿಸಲು ಸಾಧ್ಯವಾಗದ ಕಾರಣ, ಪ್ರಧಾನಿ ಮೋದಿ ಅವರು ಎರಡು ಗಂಟೆಗಳ ಬಳಿಕ ಮತ್ತೊಂದು ವಿಮಾನದಲ್ಲಿ ದೆಹಲಿಗೆ ಮರಳಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಹುಲ್ ಅವರ ಹೆಲಿಕಾಪ್ಟರ್‌ನ ಟೇಕ್ ಆಫ್‌ಗೆ ಅನುಮತಿ ದೊರೆಯದಿದ್ದಕ್ಕೆ ಬೇಸರ ವ್ಯಕ್ತಪಡಿಸಿರುವ ಕಾಂಗ್ರೆಸ್ ಚುನಾವಣಾ ಆಯೋಗಕ್ಕೆ ಪತ್ರ ಬರೆದು, ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ಆಗ್ರಹಿಸಿದೆ. ಅಲ್ಲದೆ ಚುನಾವಣೆಯಲ್ಲಿ ಸಮನಾದ ಸ್ಪರ್ಧೆಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂದೂ ಒತ್ತಾಯಿಸಿದೆ.

ಮೋದಿ ಹೊರಟಿದ್ದ ವಿಮಾನದಲ್ಲಿ ದೋಷ

ರಾಂಚಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ವಿಶೇಷ ವಿಮಾನದಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡ ಕಾರಣ ಜಾರ್ಖಂಡ್‌ನ ದೇವಘರ್ ವಿಮಾನ ನಿಲ್ದಾಣದಲ್ಲಿ ಅವರು ಸುಮಾರು ಎರಡು ಗಂಟೆ ಕಾಯಬೇಕಾಯಿತು.

ದೇವಘರ್‌ನಿಂದ 80 ಕಿ.ಮೀ ದೂರದಲ್ಲಿರುವ ಬಿಹಾರದ ಜಮುಯಿ ಎಂಬಲ್ಲಿ ಬಿರ್ಸಾ ಮುಂಡಾ ಅವರ 150ನೇ ಜಯಂತಿ ಅಂಗವಾಗಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮೋದಿ ಭಾಗಿಯಾಗಿದ್ದರು.

ದುಡ್ಡಿನ ಮದ ಬಂದಿದೆ; ನಿಯತ್ತಾಗಿ ಬಸ್ ಓಡಿಸಿ ಬಂದ ದುಡ್ಡಾ ಅದು?

'ಜಮೀರ್ ಅವರನ್ನು ನಾನೆಂದೂ ಕುಳ್ಳ ಎಂದಿಲ್ಲ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸಚಿವ ಜಮೀರ್ ಅವರನ್ನು ಕುಳ್ಳ ಎಂದು ನಾನೆಂದೂ ಕರೆದಿಲ್ಲ. ನಮ್ಮ ಸ್ನೇಹವಿದ್ದದ್ದು ರಾಜಕೀಯವಾಗಷ್ಟೆ. ಈಗ ದುಡ್ಡಿನ ಮದದಿಂದ ಆ ರೀತಿ ಮಾತಾಡುತ್ತಿದ್ದಾರೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಟೀಕಿಸಿದರು.

ಇಲ್ಲಿನ ಚಾಮುಂಡಿ ಬೆಟ್ಟದಲ್ಲಿ ಶುಕ್ರವಾರ ಪೂಜೆ ಸಲ್ಲಿಸಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿ, 'ಚಾಮುಂಡೇಶ್ವರಿ ಮುಂದೆ ನಿಂತು ಹೇಳುತ್ತಿದ್ದೇನೆ. ಬಸವರಾಜ ಹೊರಟ್ಟಿ ಆವತ್ತು ಒಮ್ಮೆ ನನ್ನನ್ನು ಕುಮಾರ ಎಂದಾಗ ಅವರನ್ನು ಹೊಡೆಯಲು ಹೋಗಿದ್ದ ಗಿರಾಕಿ ಇವರು. ಬೇಕಿದ್ದರೆ ಹೊರಟ್ಟಿ ಅವರನ್ನೇ ಕೇಳಿ. ಕರಿಯ, ಕುಳ್ಳ ಎಂದು ಮಾತಾಡಿಸಿಕೊಳ್ಳುವ ಸಂಸ್ಕೃತಿಯವನಾ ನಾನು? ಮಾತುಗಳು ಅವರ ಸಂಸ್ಕೃತಿ ತೋರಿಸುತ್ತವೆ' ಎಂದರು.



ಎಚ್‌.ಡಿ. ಕುಮಾರಸ್ವಾಮಿ

'ಜಮೀರ್ ಮತ್ತು ಆ ನಾಲ್ವರೊಂದಿಗೆ ಇದ್ದದ್ದು ನನ್ನ ಜೀವನದ ಅತ್ಯಂತ ಕರಾಳ ದಿನಗಳು. ಅವನ್ನು ಈಗ ಕೊಚ್ಚೆ ಎಂದು ದೂರವಿಟ್ಟಿದ್ದೇನೆ. ಕೊಚ್ಚೆಗಳ ಬಗ್ಗೆ ಪದೇ ಪದೇ ಯಾಕೆ ಮಾತನಾಡಿಸುತ್ತೀರಾ? ನಿಮಗೆ ಮೋಸ ಮಾಡಿದ ದಿನ ನಾನು ಏನಾಗುತ್ತೀನಿ ಎಂದು ಜಮೀರ್ ನೂರು ಬಾರಿ ನನಗೆ ಹೇಳಿದ್ದಾನೆ. ಆ ಪದ ಯಾವುದು ಎಂಬುದನ್ನು ನನ್ನಿಂದ ಹೇಳಿಸಬೇಡಿ. ಅದು ಅತ್ಯಂತ ಕೆಟ್ಟ ಪದ. ಸಾರ್ವಜನಿಕವಾಗಿ ಬಳಸುವುದಿಲ್ಲ. ಮೆಕ್ಕಾಗೆ ಹೋಗುತ್ತಾರಲ್ಲ ಅಲ್ಲಿ ಆ ಪದವನ್ನು ಜ್ಞಾಪಿಸಿಕೊಳ್ಳಲಿ' ಎಂದರು.

'ಮುಸ್ಲಿಮರು ಪಂಚರ್, ಗುಜರಿ ಅಂಗಡಿಗಳಲ್ಲಿ ದುಡಿದು ಆ ಹಣದಲ್ಲಿ ದೇವೇಗೌಡರನ್ನು ಕೊಂಡುಕೊಳ್ಳುತ್ತಾರಾ? ಜಮೀರ್‌ಗೆ ದುಡ್ಡಿನ ಮದ ಬಂದಿದೆ. ನಿಯತ್ತಾಗಿ ಬಸ್ ಓಡಿಸಿ ಬಂದ ದುಡ್ಡಾ ಅದು? ಇದನ್ನೆಲ್ಲಾ ಮುಂದಿನ ದಿನದಲ್ಲಿ ಮಾತನಾಡುತ್ತೇನೆ' ಎಂದರು.

'ಕುಮಾರಸ್ವಾಮಿ ಹಾಗೂ ಜೆಡಿಎಸ್ ಕಥೆ ಮುಗಿದೇ ಹೋಯಿತೆಂದು ಭಾವಿಸಿದ್ದರು. ಈಗ ನಮಗೆ ಮತ್ತೆ ಶಕ್ತಿ ಬಂದಿರುವುದನ್ನು ತಡೆದುಕೊಳ್ಳಲಾಗದೆ ಈ ರೀತಿ ಮಾತನಾಡುತ್ತಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಜಮೀರ್ ಮಾತುಗಳನ್ನು ಸಮರ್ಥಿಸಿಕೊಂಡಿದ್ದಾರೆ. ಇದು ನಾಗರಿಕ ಸರ್ಕಾರನಾ? ಇಂಥ ಮಾತು ಹೇಳಿದವರ ಮೇಲೆ ಎಷ್ಟು ಕೇಸ್ ಹಾಕಿ ಜೈಲಿಗೆ ಕಳುಹಿಸಿಲ್ಲ ಈ ಸರ್ಕಾರ? ಈಗೇಕೆ ಸುಮ್ಮನಿದೆ' ಎಂದು ಕೇಳಿದರು.

'ಮುಖ್ಯಮಂತ್ರಿಗೆ ಎಚ್.ಡಿ. ದೇವೇಗೌಡರು ಗರ್ವಭಂಗ ಮಾಡುತ್ತೇನೆ, ಸೊಕ್ಕು ಮುರಿಯುತ್ತೇನೆ ಎನ್ನುವುದು ಮಾನನಷ್ಟ ಹೇಳಿಕೆನಾ' ಎಂದು ಪ್ರಶ್ನಿಸಿದರು.

'ಚನ್ನಪಟ್ಟಣದಲ್ಲಿ ನಮಗೆ ಜನರ ಆಶೀರ್ವಾದವಾಗಿದೆ. ಅಲ್ಲಿ ಏನೇನೆಲ್ಲಾ ರಾಜಕೀಯ ನಡೆದಿದೆ ಎಂಬುದನ್ನು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ವಿಮರ್ಶೆ ಮಾಡಿದ್ದಾರೆ. ಜಮೀರ್ ಹೇಳಿಕೆಯಿಂದ ಏನೂ ವ್ಯತ್ಯಾಸವಾಗಿಲ್ಲ. ಅಲ್ಲಿ ಗೆಲ್ಲುತ್ತೇವೆ' ಎಂದರು.

> **ಸಚಿವರಾದ ಎಚ್.ಡಿ.ಕುಮಾರಸ್ವಾಮಿ ಮತ್ತು ಜಮೀರ್ ಮೊದಲಿನಿಂದಲೂ ಆತ್ಮೀಯ ಸ್ನೇಹಿತರು. ಹೀಗಾಗಿ ಜಮೀರ್ ಅವರ ಹೇಳಿಕೆ ಹಿಂದೆ ಕುಮಾರಸ್ವಾಮಿಯೇ ಇರಬಹುದೆನ್ನಿಸುತ್ತಿದೆ.**
> **ರಮೇಶ ಬಂಡಿಸಿದ್ದೇಗೌಡ,** ಶ್ರೀರಂಗಪಟ್ಟಣ ಶಾಸಕ



ಗೌರಿ ಹುಣ್ಣಿಮೆ ಗೌರಿ ಹುಣ್ಣಿಮೆ ಅಂಗವಾಗಿ ಕೊಪ್ಪಳ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಿ ದರ್ಶನ ಪಡೆಯಲು ಶುಕ್ರವಾರ ಅಪಾರ ಸಂಖ್ಯೆಯಲ್ಲಿ ಭಕ್ತರು ಸೇರಿದ್ದರು. ಪ್ರಜಾವಾಣಿ ಚಿತ್ರ

ವಕ್ಫ್ ಹೋರಾಟ: ಬಿಜೆಪಿ ಬಣ ಕಿತ್ತಾಟ

ನ.25 ರಿಂದ ಡಿ.25ರವರೆಗೆ ಜನಜಾಗೃತಿ: ಯತ್ನಾಳ

ಒಂದನೇ ಪುಟದಿಂದ..
ಅಭಿಯಾನದ ವೇಳೆ ಸಮಸ್ಯಾತ್ಮಕ ಹಳ್ಳಿಗಳಿಗೆ ಭೇಟಿ, ಚರ್ಚೆ, ಅಗತ್ಯವಿರುವ ಕಡೆಗಳಲ್ಲಿ ಸಭೆ ನಡೆಯುತ್ತದೆ. ಮೊದಲ ಹಂತದಲ್ಲಿ ನ.25ಕ್ಕೆ ಬೀದರ್‌ನಿಂದ ಆರಂಭವಾಗಿ ಡಿಸೆಂಬರ್ 1ಕ್ಕೆ ಬೆಳಗಾವಿಯಲ್ಲಿ ಮುಕ್ತಾಯವಾಗುತ್ತದೆ. ಈ ಅವಧಿಯ ಪ್ರಗತಿಯನ್ನು ಚರ್ಚಿಸಿ ಮುಂದಿನ ಹಂತದ ಅಭಿಯಾನದ ರೂಪು ರೇಷೆ ಅಂತಿಮಗೊಳಿಸಲಾಗುವುದು ಎಂದು ಹೇಳಿದರು.

ರಮೇಶ ಜಾರಕಿಹೊಳಿ, ಅರವಿಂದ ಲಿಂಬಾವಳಿ ಸುದ್ದಿಗೋಷ್ಠಿಯಲ್ಲಿ ಇದ್ದರು.

> **ಬಿಜೆಪಿ ರೈತರ ಪರ ಧ್ವನಿ ಎತ್ತಿದ ಪಕ್ಷ . ಯಡಿಯೂರಪ್ಪ ರೈತರ ಹೆಸರಿನಲ್ಲೇ ಪ್ರಮಾಣವಚನ ಸ್ವೀಕರಿಸಿ ಆಡಳಿತ ನಡೆಸಿದವರು. ಹಾಗಾಗಿ ರೈತರ ವಿಚಾರದ ಹೋರಾಟದಲ್ಲಿ ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ.**
> **ಬಿ.ವೈ.ವಿಜಯೇಂದ್ರ,** ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

> **ಹಿಂದೂಗಳ ಬಗ್ಗೆ ಕಾಳಜಿ ಇರುವವರೆಲ್ಲಾ ಬರಬಹುದು. ಅಧ್ಯಕ್ಷ ಬಿ.ವೈ. ವಿಜಯೇಂದ್ರ ಕೂಡ ಪಾಲ್ಗೊಳ್ಳಲಿ ಎಂದು ಮಾಧ್ಯಮದ ಮೂಲಕ ಕರೆಯುತ್ತೇವೆ. ಇದು ಬಿಜೆಪಿಯಿಂದ ನಡೆಯುತ್ತಿರುವ ಜಾಥಾ**
> **ಬಸನಗೌಡ ಪಾಟೀಲ ಯತ್ನಾಳ,** ಶಾಸಕ, ಬಿಜೆಪಿ

ಅಧ್ಯಕ್ಷರ ತೀರ್ಮಾನವೇ ಅಂತಿಮ: ರೇಣುಕಾಚಾರ್ಯ

'ವಕ್ಫ್ ವಿವಾದದ ವಿಚಾರದಲ್ಲಿ ಸರ್ಕಾರದ ವಿರುದ್ಧ ಹೋರಾಟ ಮಾಡುವ ಕುರಿತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ ಅವರ ತೀರ್ಮಾನವೇ ಅಂತಿಮ' ಎಂದು ಮಾಜಿ ಶಾಸಕ ಎಂ.ಪಿ.ರೇಣುಕಾಚಾರ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪಕ್ಷದ ರಾಜ್ಯ ಅಧ್ಯಕ್ಷರ ನೇತೃತ್ವದಲ್ಲಿಯೇ ಹೋರಾಟಗಳು, ಪ್ರತಿಭಟನೆಗಳು ನಡೆಯಬೇಕು. ವಿಜಯೇಂದ್ರ ಅವರು ಹೋರಾಟ ಆರಂಭಿಸಿದ ಬಳಿಕ ಸರ್ಕಾರ ನೋಟಿಸ್ ಹಿಂದಕ್ಕೆ ಪಡೆದಿದೆ. ಹೀಗಾಗಿ ಬೇರೆಯವರಿಗೆ ಪ್ರತ್ಯೇಕ ತಂಡ ಮಾಡಿ ಹೋರಾಟ ಮಾಡಲು ನೈತಿಕ ಅಧಿಕಾರವಿಲ್ಲ' ಎಂದು ಯತ್ನಾಳ ತಂಡದ ಹೆಸರು ಹೇಳದೇ ರೇಣುಕಾಚಾರ್ಯ ಕಿಡಿಕಾರಿದರು.

'ಬೇರೆಯವರಂತೆ ನಾನೂ ಕೂಡ ಒಂದು ತಂಡವನ್ನು ತೆಗೆದುಕೊಂಡು ಪ್ರವಾಸ ಮಾಡುತ್ತೇನೆ ಎಂದರೆ ಪಕ್ಷದ ವರಿಷ್ಠರು ಅವಕಾಶ ಕೊಡುತ್ತಾರಾ? ಯಾವುದೇ ಕಾರಣಕ್ಕೂ ಪಕ್ಷದ ಚಿಹ್ನೆ ಹೊರತುಪಡಿಸಿ ನಡೆಯುವ ಪ್ರವಾಸ, ಹೋರಾಟ, ಪ್ರತಿಭಟನೆಗಳಿಗೆ ಅವಕಾಶ ನೀಡಬಾರದು' ಎಂದರು.

'ಕಾಂಗ್ರೆಸ್ ಶಾಸಕರು ಸ್ವಾಭಿಮಾನಿಗಳು'

ಕಾಗವಾಡ: 'ಕಾಂಗ್ರೆಸ್ ಶಾಸಕರು ಮಾರಾಟಕ್ಕಿಲ್ಲ. ಅವರು ಸ್ವಾಭಿಮಾನಿಗಳು. ₹ 50 ಕೋಟಿ ಅಲ್ಲ, ₹ 100 ಕೋಟಿ ಕೊಟ್ಟರೂ ನಮ್ಮ ಶಾಸಕರು ಯಾರೂ ಮಾರಾಟಕ್ಕಿಲ್ಲ' ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಬಿಜೆಪಿಯವರು ಕಾಂಗ್ರೆಸ್ ಶಾಸಕರಿಗೆ ತಲಾ ₹ 50 ಕೋಟಿ ಆಮಿಷ ಒಡ್ಡಿರುವ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ನೀಡಿದ ಹೇಳಿಕೆಗೆ ಶುಕ್ರವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಮುಖ್ಯಮಂತ್ರಿಯವರು ಹೀಗೆ ಹೇಳಿದ್ದಾರೆಂದರೆ ಅವರ ಬಳಿ ಬಲವಾದ ಸಾಕ್ಷ್ಯ ಇರಬಹುದು. ಅದಕ್ಕೆ ಅವರು ಹೇಳಿರಬಹುದು' ಎಂದರು. 'ಏನೇ ಮಾಡಿದರೂ ಬಿಜೆಪಿಯವರ ಕನಸು ನನಸಾಗದು' ಎಂದು ಹೇಳಿದರು.



ಲಕ್ಷ್ಮಣ ಸವದಿ

'ಸಾವರ್ಕರ್, ಬಾಳಾ ಠಾಕ್ರೆ ಕುರಿತು ಒಳ್ಳೆಯ ಮಾತನಾಡಿಸಿ'

ಹಿಂಗೋಲಿ (ಪಿಟಿಐ): 'ಉದ್ಧವ್ ಅವರೇ, ನಿಮಗೆ ಧೈರ್ಯವಿದ್ದರೆ, ವೀರ ಸಾವರ್ಕರ್, ಬಾಳಾ ಸಾಹೇಬ್ ಠಾಕ್ರೆ ಕುರಿತು ರಾಹುಲ್ ಗಾಂಧಿಯಿಂದ ಎರಡು ಒಳ್ಳೆಯ ಮಾತಗಳನ್ನು ಆಡಿಸಿ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸವಾಲೆಸೆದಿದ್ದಾರೆ.



ಮಹಾರಾಷ್ಟ್ರದ ಹಿಂಗೋಲಿಯಲ್ಲಿ ಪಕ್ಷದ ಪರ ಚುನಾವಣಾ ರ್‍ಯಾಲಿ ಉದ್ದೇಶಿಸಿ ಶುಕ್ರವಾರ ಮಾತನಾಡಿದ ಅವರು, 'ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿಯಡಿ ವಿಶೇಷ ಸ್ಥಾನಮಾನವನ್ನು ಮರುಸ್ಥಾಪಿಸಲು ಕಾಂಗ್ರೆಸ್ ಬಯಸಿದೆ. ಸರಿಯಾಗಿ ಕೇಳಿಸಿಕೊಳ್ಳಿ, ನೀವು ಮಾತ್ರವಲ್ಲ, ನಿಮ್ಮ ನಾಲ್ಕನೇ ತಲೆಮಾರಿಗೂ ಕೂಡ ಅದನ್ನು ಮರುಸ್ಥಾಪಿಸಲು ಸಾಧ್ಯವಿಲ್ಲ' ಎಂದರು.

'ಹರಿಯಾಣ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಜಯಗಳಿಸಲಿದೆ ಎಂದು ರಾಹುಲ್ ಗಾಂಧಿ ಅವರು ಅಪರಿಮಿತ ವಿಶ್ವಾಸ ಹೊಂದಿದ್ದರು. ಫಲಿತಾಂಶ ಏನಾಯ್ತು ನೋಡಿ. ಕಾಂಗ್ರೆಸ್ ಪಕ್ಷವು ಹೀನಾಯವಾಗಿ ಸೋಲುಂಡು, ಬಿಜೆಪಿಯು ಅಲ್ಲಿ ಸರ್ಕಾರ ರಚಿಸಿತು' ಎಂದರು.

20 ಬಾರಿ ಪತನ: ಸೋನಿಯಾ ಗಾಂಧಿ ಅವರು ತಮ್ಮ ಮಗನನ್ನು 20 ಬಾರಿ ಮುಂಚೂಣಿಗೆ ತರಲು ಪ್ರಯತ್ನಿಸಿದರು. ಆದರೆ ಸಾಧ್ಯವಾಗಲಿಲ್ಲ. ಅವರ ಮಗನ 'ರಾಹುಲ್ ಗಾಂಧಿ ವಿಮಾನ'ವು ಮಹಾರಾಷ್ಟ್ರದಲ್ಲಿ 21ನೇ ಬಾರಿಯೂ ಪತನಗೊಳ್ಳಲಿದೆ' ಎಂದರು.

ಮಹಾಯುತಿ ಮೈತ್ರಿಕೂಟವು ಛತ್ರಪತಿ ಶಿವಾಜಿ ಮಹಾರಾಜ್, ವೀರ ಸಾವರ್ಕರ್ ಹಾದಿ ಅನುಸರಿಸುತ್ತಿದ್ದು, ಮಹಾ ವಿಕಾಸ್ ಆಘಾಡಿಯು 'ಔರಾಂಗಜೇಬ್ ಅಭಿಮಾನಿಗಳ ಸಂಘ'ವಾಗಿದೆ ಎಂದು ಟೀಕಿಸಿದರು.

ಚನ್ನಪಟ್ಟಣ ಉಪಚುನಾವಣೆ: ಯಾರಿಗೆ ಬೀಳಲಿದೆ ಮಾತಿನ ಏಟು?

ಅಂದಾಜಿಗೆ ಸಿಗದ ಸೋಲು, ಗೆಲುವಿನ ಲೆಕ್ಕಾಚಾರ

• ಓದೇಶ ಸಕಲೇಶಪುರ

ಚನ್ನಪಟ್ಟಣ (ರಾಮನಗರ): ರಾಜ್ಯದ ಗಮನ ಸೆಳೆದ ತುರುಸಿನ ಉಪ ಚುನಾವಣೆಗೆ ಮತದಾನ ಮುಗಿದ ಬೆನ್ನಲ್ಲೇ ಕ್ಷೇತ್ರದಲ್ಲಿ ಅಭ್ಯರ್ಥಿಗಳ ಸೋಲು, ಗೆಲುವಿನ ಲೆಕ್ಕಾಚಾರ ಶುರುವಾಗಿದೆ.

ಹಿಂದಿನ ಚುನಾವಣೆಗಳಲ್ಲಿ ಯಾರು ಗೆಲ್ಲಬಹುದೆಂಬ ಅಂದಾಜು ಸಿಗುತ್ತಿತ್ತು. ಆದರೆ, ಈ ಸಲ ಅಂದಾಜಿಗೆ ನಿಲುಕುತ್ತಿಲ್ಲ. ಇಬ್ಬರ ನಡುವೆ ತೀವ್ರ ಪೈಪೋಟಿ ಇದೆ.

ಯಾರೇ ಗೆದ್ದರೂ ಮತಗಳ ಅಂತರ ಕಡಿಮೆ ಇರಲಿದೆ ಎನ್ನುವ ಮಾತು ಕ್ಷೇತ್ರದಾದ್ಯಂತ ಕೇಳಿ ಬರುತ್ತಿದೆ. ಆದರೆ, ಯಾರಲ್ಲೂ ಇಂಥವರೇ ನಿರ್ದಿಷ್ಟವಾಗಿ ಗೆಲ್ಲುತ್ತಾರೆ ಎಂದು ಹೇಳುವ ಆತ್ಮವಿಶ್ವಾಸ ಕಾಣುತ್ತಿಲ್ಲ. ರಾಜಕೀಯ ಪಕ್ಷಗಳ ಕಾರ್ಯಕರ್ತರು, ಬೆಂಬಲಿಗರೂ ಇದಕ್ಕೆ ಹೊರತಾಗಿಲ್ಲ. ಮತದಾನಕ್ಕೂ ಮುನ್ನ ನಡೆದ ರಾಜಕೀಯ ನಾಯಕರ ಮಾತಿನ ಭರಾಟೆ ಫಲಿತಾಂಶದ ಮೇಲೆ ಖಂಡಿತವಾಗಿಯೂ ಪರಿಣಾಮ ಬೀರಲಿದೆ ಎಂಬ ಚರ್ಚೆಗಳು ನಡೆಯುತ್ತಿವೆ. ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್ ಖಾನ್ ಅವರು ಜೆಡಿಎಸ್ ನಾಯಕರಾದ ಎಚ್.ಡಿ. ದೇವೇಗೌಡ ಮತ್ತು ಎಚ್.ಡಿ. ಕುಮಾರಸ್ವಾಮಿ ಕುರಿತು ಆಡಿದ ಮಾತು ಕ್ಷೇತ್ರದ ಜಾತಿ ಮತ್ತು ಧರ್ಮಾಧಾರಿತ ಮತಗಳ ಸಮೀಕರಣ ಬದಲಿಸಿತು ಎಂಬ ಚರ್ಚೆಯೂ ನಡೆಯುತ್ತಿದೆ.

ಜಮೀರ್ ಮಾತು ಜೆಡಿಎಸ್–ಬಿಜೆಪಿ ಪಾಳಯಕ್ಕೆ ಕಡೆ ಗಳಿಗೆಯಲ್ಲಿ ವರವಾಗಿ ಪರಿಣಮಿಸಿತು. ಇದರಿಂದ ಒಂದಿಷ್ಟು ಒಕ್ಕಲಿಗ ಮತ್ತು ಹಿಂದೂ ಮತಗಳ ಕ್ರೋಡೀಕರಣ ಆಗಿರುವುದನ್ನು ಅಲ್ಲಗಳೆಯುವಂತಿಲ್ಲ. ಅದೇ ರೀತಿ, ಅಲ್ಪಸಂಖ್ಯಾತರ ಮತಗಳು 'ಕೈ' ಬಿಟ್ಟು ಚದುರದಂತೆ ತಡೆಯುವಲ್ಲಿ ಯಶಸ್ವಿಯಾಗಿದೆ ಎಂಬ ಮಾತು ಕೇಳಿ ಬರುತ್ತಿವೆ.

ಎರಡೂ ಪಕ್ಷಗಳ ಮುಖಂಡರು, ಕಾರ್ಯಕರ್ತರು ಮತ್ತು ಬೆಂಬಲಿಗರಷ್ಟೇ ಅಲ್ಲ, ಜನಸಾಮಾನ್ಯರು ಕೂಡ ಯಾರಿಗೆ ಎಷ್ಟು ಮತ ಬರುಬಹುದು, ಯಾವ ಸಮುದಾಯದ ಮತಗಳು ಯಾವ ಅಭ್ಯರ್ಥಿಗೆ ಎಷ್ಟು ಪ್ರಮಾಣದಲ್ಲಿ ಬಂದಿರಬಹುದು ಎಂಬ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.



ನಿಖಿಲ್ ಕುಮಾರಸ್ವಾಮಿ



ಸಿ.ಪಿ. ಯೋಗೇಶ್ವರ್

ಮಾತಿನ ಒಳಮರ್ಮ ಏನು?: ಚುನಾವಣಾ ಪ್ರಚಾರದ ವೇಳೆ ಜಮೀರ್ ಅಹಮದ್ ಅವರು ಗೌಡರ ಕುಟುಂಬದ ಕುರಿತು ಆಡಿದ ಮಾತು ಹಾಗೂ ಮತದಾನದ ಮಾರನೇಯ ದಿನವೇ ಮೌನ ಮುರಿದ ಯೋಗೇಶ್ವರ್ ಮಾತಿನ ಒಳಮರ್ಮವೇನು ಎಂಬ ಚರ್ಚೆಯೂ ಕ್ಷೇತ್ರದಲ್ಲಿ ಜೋರಾಗಿದೆ.

'ಜಮೀರ್ ಮಾತಿನ ಬಿಸಿ ಮತದಾನದ ಮೇಲೆ ತಟ್ಟಿದೆ. ಹಾಗಾಗಿಯೇ, ವಾಸ್ತವದ ನೆಲೆಗಟ್ಟಿನಲ್ಲಿ ಯೋಗೇಶ್ವರ್ ಆ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ' ಎಂದು ತಾಲ್ಲೂಕಿನ ಕೆಲ ರಾಜಕೀಯ ಮುಖಂಡರು ಅಭಿಪ್ರಾಯಪಟ್ಟಿದ್ದಾರೆ.

ಇನ್ನುಳಿದವರು, 'ಯೋಗೇಶ್ವರ್ ಹೇಳಿಕೆ ಕುರಿತು ಅಚ್ಚರಿಪಡಬೇಕಿಲ್ಲ. ಹಿಂದಿನ ಚುನಾವಣೆಗಳಲ್ಲೂ ಅವರು ಹೀಗೆಯೇ ಮಾತನಾಡಿದ್ದಾರೆ. ಬೆಟ್ಟಿಂಗ್ ಹಿನ್ನೆಲೆಯಲ್ಲೂ ಈ ರೀತಿ ಹೇಳಿರುವ ಸಾಧ್ಯತೆ ಅಲ್ಲಗಳೆಯುವಂತಿಲ್ಲ' ಎನ್ನುತ್ತಾರೆ ಎದುರಾಳಿ ಜೆಡಿಎಸ್ ಮತ್ತು ಬಿಜೆಪಿ ಮುಖಂಡರು.

'ಜಾತಿ, ಅಭಿವೃದ್ಧಿ, ಅಭಿಮಾನ, ಹಣ, ಗಿಫ್ಟ್ ಚುನಾವಣೆಯಲ್ಲಿ ಹೆಚ್ಚು ಸುದ್ದಿ ಮಾಡಿವೆ. ಇಷ್ಟೊಂದು ಹಣಾಹಣಿ ಹಾಗೂ ದುಬಾರಿ ಚುನಾವಣೆಯನ್ನು ನಾನೆಂದೂ ನೋಡಿಲ್ಲ' ಎಂದು ರೈತ ಸಂಘದ ಮುಖಂಡರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಬೆಟ್ಟಿಂಗ್ ಭರಾಟೆ

ಕ್ಷೇತ್ರದಲ್ಲಿ ಬೆಟ್ಟಿಂಗ್ ಭರಾಟೆ ಕೂಡ ಜೋರಾಗಿದೆ. ಆರಂಭದಲ್ಲಿ ಸಾವಿರ, ಲಕ್ಷ ರೂಪಾಯಿಗಳ ಆಸುಪಾಸಿನಲ್ಲಿದ್ದ ಬೆಟ್ಟಿಂಗ್, ಯೋಗೇಶ್ವರ್ ಗುರುವಾರ ನೀಡಿದ ಹೇಳಿಕೆ ಬಳಿಕ ತೀವ್ರಗೊಂಡಿದೆ. ಆಸ್ತಿ, ವಾಹನಗಳ ಜೊತೆ ಕೋಟಿಗಟ್ಟಲೇ ಹಣ ಪಣಕ್ಕಿಡುವ ಮಟ್ಟಿಗೆ ತಲುಪಿದರೂ ಆಶ್ಚರ್ಯವಿಲ್ಲ ಎನ್ನುತ್ತವೆ ಮೂಲಗಳು.

ಪಕ್ಷದ ತಾಲ್ಲೂಕು ಮತ್ತು ಬೂತ್ ಮಟ್ಟದ ಮುಖಂಡರು ಹಾಗೂ ಆಪ್ತರ ಜತೆ ಸರಣಿ ಸಭೆ ನಡೆಸಿರುವ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಮಾಹಿತಿ ಕಲೆ ಹಾಕುತ್ತಿದ್ದಾರೆ. ಆಪ್ತರ ಮೂಲಕ ಖಾಸಗಿಯಾಗಿಯೂ ವಾಸ್ತವ ಸ್ಥಿತಿಯನ್ನು ಅರಿಯುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಯಾವ ಪ್ರದೇಶದಲ್ಲಿ ಯಾರಿಗೆ ಎಷ್ಟು ಮತ ಬಂದಿವೆ. ಅಭ್ಯರ್ಥಿಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಅಂಶ ಏನು? ಮತದಾನದ ಹಿಂದಿನ ದಿನ ನಡೆದ ಬೆಳವಣಿಗೆ, ರಾಜಕೀಯ ಮುಖಂಡರ ಹೇಳಿಕೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬ ಬಗ್ಗೆ ಜೋರಾದ ವಿಶ್ಲೇಷಣೆ ನಡೆಯುತ್ತಿದೆ.

ಪಂಚಶೀಲ ಪಾದಯಾತ್ರೆಯಲ್ಲಿ ಭಂತೆ ಬೋಧಿದತ್ತ ಥೇರೋ ಒತ್ತಾಯ

'ಸನ್ನತಿಯಲ್ಲಿ ಉತ್ಖನನ ನಡೆಯಲಿ'

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): 'ಬೌದ್ಧ ನಿಧಿಯನ್ನು ತನ್ನ ಒಡಲಾಳದಲ್ಲಿ ಅಡಗಿಸಿ ಕೊಂಡಿರುವ ಸನ್ನತಿ ಗ್ರಾಮದಲ್ಲಿ ಉತ್ಖನನ ಹಾಗೂ ಸಂರಕ್ಷಣೆ ಸಮರೋಪಾದಿಯಲ್ಲಿ ನಡೆಯಬೇಕು. ಕೃಷ್ಣಾ ನದಿ ದಂಡೆಯಲ್ಲಿರುವ ನಾಗಾರ್ಜುನ ಸಾಗರದಲ್ಲಿ ತೆಲಂಗಾಣ ಸರ್ಕಾರ ನಿರ್ಮಿಸಿರುವ 'ಬುದ್ಧ ವನಂ' ಮಾದರಿಯಲ್ಲಿ ಬೌದ್ಧ ಪರಂಪರೆಯ ಥೀಮ್ ಪಾರ್ಕ್ ನಿರ್ಮಿಸಬೇಕು' ಎಂದು ಭಂತೆ ಬೋಧಿದತ್ತ ಥೇರೋ ಒತ್ತಾಯಿಸಿದರು.

ಸನ್ನತಿ ಗ್ರಾಮದ ಐತಿಹಾಸಿಕ ಬೌದ್ಧ ಸ್ಥಳ ಅಧೋಲೋಕ ಮಹಾಸ್ತೂಪದಿಂದ ವಿಧಾನಸೌಧದವರೆಗೆ ಹಮ್ಮಿಕೊಂಡಿರುವ 'ಪಂಚಶೀಲ ಪಾದಯಾತ್ರೆ' ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಅವರು ಮಾತನಾಡಿದರು.

'ಕನಿಷ್ಠ ₹500 ಕೋಟಿ ಅನುದಾನ ಬಿಡುಗಡೆ ಮಾಡಿ, 200 ಎಕರೆ ಪ್ರದೇಶದಲ್ಲಿ ಅಂತರರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿ ಮಾಡಬೇಕು. ಬೌದ್ಧ ಅಭಿವೃದ್ಧಿ ಪ್ರಾಧಿಕಾರ ರಚಿಸಿ ₹1,000 ಕೋಟಿ ಅನುದಾನ ಮೀಸಲಿಡಬೇಕು. ಬುದ್ಧ ಪೂರ್ಣಿಮೆಯ ದಿನವನ್ನು ರಾಷ್ಟ್ರೀಯ ರಜಾ ದಿನವಾಗಿ ಘೋಷಿಸಬೇಕು' ಎಂದು ಅವರು ಆಗ್ರಹಿಸಿದರು.

'ಕರ್ನಾಟಕದಲ್ಲಿ ದೊರೆತಿರುವ ಸಾಮ್ರಾಟ್ ಅಶೋಕನ ಶಾಸನಗಳನ್ನು ಸಂರಕ್ಷಿಸಬೇಕು. ಕಡಾಪುರದಲ್ಲಿ ಬುದ್ಧ ಮಲಗಿದ ಬೆಟ್ಟ ಅಭಿವೃದ್ಧಿಪಡಿಸಬೇಕು. 18 ವರ್ಷಗಳ ಹಿಂದೆ ಸನ್ನತಿ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದ್ದು, ಬೇರೆ ಪ್ರಾಧಿಕಾರಗಳ ರೀತಿಯಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳು ನಡೆದಿಲ್ಲ ಎನ್ನುವುದು ವಿಷಾದದ ಸಂಗತಿ' ಎಂದರು.

'ಇಂದಿನಿಂದ ನಿರಂತರ 70 ದಿನಗಳ ಕಾಲ ನಡೆಯುವ ಪಂಚಶೀಲ ಪಾದಯಾತ್ರೆ ಸುಮಾರು ಒಂದು ಸಾವಿರ ಕಿ.ಮೀ ಸಾಗಲಿದೆ. ಈ ಯಾತ್ರೆ ಸಾಮ್ರಾಟ್ ಅಶೋಕ್ ಚಕ್ರವರ್ತಿಯ ಒಂಬತ್ತು ಐತಿಹಾಸಿಕ ಸ್ಥಳಗಳ ಮೂಲಕ ಹಾದು ಹೋಗಲಿದೆ. ಜೊತೆಗೆ ದಾರಿಯುದ್ದಕ್ಕೂ ಹಲವು ಉಪಾಸಕರಿಗೆ ಬೌದ್ಧ ಧರ್ಮ ದೀಕ್ಷೆ ನೀಡಲಾಗುವುದು.



ಕಲಬುರಗಿ ಜಿಲ್ಲೆಯ ವಾಡಿ ಸಮೀಪದ ಸನ್ನತಿ ಗ್ರಾಮದಲ್ಲಿ ಐತಿಹಾಸಿಕ ಬೌದ್ಧ ಸ್ತೂಪ ಅಧೋಲೋಕ ಮಹಾಚೈತ್ಯದಿಂದ ವಿಧಾನಸೌಧದವರೆಗೆ ಹಮ್ಮಿಕೊಂಡಿರುವ ಪಂಚಶೀಲ ಪಾದಯಾತ್ರೆ ಕಾರ್ಯಕ್ರಮಕ್ಕೆ ಭಂತೆ ಬೋಧಿದತ್ತ ಮಹಾಥೇರೋ ಅವರು ಶುಕ್ರವಾರ ಚಾಲನೆ ನೀಡಿ ಮಾತನಾಡಿದರು

ನಾಡಿನ ಜನತೆಗೆ ಬೌದ್ಧ ಧಮ್ಮದ ಅರಿವು ಮೂಡಿಸುವ ಮಹದಾಸೆ ಪಂಚಶೀಲ ಪಾದಯಾತ್ರೆಯದಾಗಿದೆ' ಎಂದು ಹೇಳಿದರು.

ಅಣದೂರ (ಬೀದರ್) ಭಂತೆ ದಮ್ಮಾನಂದ ಮಹಾಥೇರೋ, ಭಂತೆ ಜ್ಞಾನಸಾಗರ ಥೇರೋ, ಭಂತೆ ವರಜ್ಯೋತಿ, ಭಂತೆ ಧಮ್ಮದೀಪ ಪಂಚಶೀಲ ಬೋಧಿಸಿದರು.

ದಸಂಸ ರಾಜ್ಯ ಸಂಘಟನಾ ಸಂಚಾಲಕ ಮರಿಯಪ್ಪ ಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಭಾರತೀಯ ಬೌದ್ಧ ಮಹಾಸಭಾದ ರಾಜ್ಯಾಧ್ಯಕ್ಷ ಸೂರ್ಯಕಾಂತ ನಿಂಬಾಳಕರ, ನೀಲಕಂಠ ಬಡಿಗೇರ, ಮರಿಯಪ್ಪ ಚಟ್ಟೇರ್ಕರ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಸವರಾಜ ಬೆಣ್ಣೂರಕರ ಮಾತನಾಡಿದರು.

ತಂದೆಯಿಂದ ಕಾಟ: ಬಾಲಕಿ ರಕ್ಷಿಸಿದ ಸಚಿವೆ ಲಕ್ಷ್ಮಿ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು, ಮದ್ಯವ್ಯಸನಿ ತಂದೆಯಿಂದ ತೊಂದರೆಗೆ ಒಳಗಾಗಿದ್ದ ಬಾಲಕಿಯೊಬ್ಬಳನ್ನು ಶುಕ್ರವಾರ ರಕ್ಷಿಸಿ, ಆಕೆಯ ಕಲಿಕೆಗೆ ಹಾಸ್ಟೆಲ್ ವ್ಯವಸ್ಥೆ ಮಾಡಿದರು.

ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ಅಂಗನವಾಡಿ ಕಟ್ಟಡದ ಭೂಮಿಪೂಜೆಯಲ್ಲಿ ಪಾಲ್ಗೊಂಡಿದ್ದ ಸಚಿವೆ ಹೆಬ್ಬಾಳಕರ ಅವರನ್ನು ಭೇಟಿಯಾದ 12 ವರ್ಷದ ಬಾಲಕಿ ಸಮಸ್ಯೆ ಹೇಳಿ ಕಣ್ಣೀರು ಹಾಕಿದಳು. ಬಾಲಕಿಯ ಜೊತೆಗೆ ಅವಳ ಅಜ್ಜಿಯೂ ಪರಿಸ್ಥಿತಿ ಮನವರಿಕೆ ಮಾಡಿದರು.

'ಅಪ್ಪ ಮದ್ಯವ್ಯಸನಿ ಆಗಿದ್ದು, ಅವ್ವನಿಗೆ ನಿತ್ಯವೂ ಹಿಂಸೆ ಕೊಡುತ್ತಿದ್ದ. ಬೇಸತ್ತ ತಾಯಿ ತವರು ಮನೆ ಸೇರಿದ್ದಾರೆ. ಹಿರೇಬಾಗೇವಾಡಿಯ ಖಾಸಗಿ ಶಾಲೆಯಲ್ಲಿ ನಾನು 6ನೇ ತರಗತಿ ಓದುತ್ತಿದ್ದೇನೆ. ಶಾಲೆ ಬಿಟ್ಟು ತಾಯಿ ಜತೆಗೆ ಹೋಗಲು ಆಗುತ್ತಿಲ್ಲ. ಎಲ್ಲಿಯಾದರೂ ಹಾಸ್ಟೆಲ್ ಸೌಲಭ್ಯ ಕಲ್ಪಿಸಿ' ಎಂದು ಬಾಲಕಿ ಮನವಿ ಮಾಡಿಕೊಂಡಳು.



ಲಕ್ಷ್ಮಿ ಹೆಬ್ಬಾಳಕರ

ಬಾಲಕಿಗೆ ಧೈರ್ಯ ಹೇಳಿದ ಲಕ್ಷ್ಮಿ ಹೆಬ್ಬಾಳಕರ ಅವರು ಮಹಿಳಾ ಮತ್ತು ಮಕ್ಕಳ ಇಲಾಖೆಯ ಉಪನಿರ್ದೇಶಕ ನಾಗರಾಜ ಹಾಗೂ ಮಕ್ಕಳ ರಕ್ಷಣಾಲಯದ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿದರು.

ಸವದತ್ತಿ ಬಾಲಕಿಯರ ವಸತಿ ನಿಲಯದಲ್ಲಿ ಬಾಲಕಿ ಉಳಿದುಕೊಳ್ಳಲು ಮತ್ತು ಶಿಕ್ಷಣ ಮುಂದುವರಿಸಲು ವ್ಯವಸ್ಥೆ ಮಾಡುವಂತೆ ಸೂಚಿಸಿದರು. ಬಾಲಕಿಗೆ ಅಗತ್ಯವಾದ ಬಟ್ಟೆ ಮತ್ತಿತರ ವಸ್ತುಗಳನ್ನು ಖರೀದಿಸಲು ಆರ್ಥಿಕ ನೆರವು ಒದಗಿಸಿದರು.

'ಬಾಲಕಿಯ ಶಿಕ್ಷಣ, ಊಟ, ವಸತಿಗೆ ಯಾವುದೇ ಕೊರತೆ ಆಗದ ರೀತಿಯಲ್ಲಿ ಎಚ್ಚರಿಕೆಯನ್ನು ವಹಿಸಬೇಕು' ಎಂದೂ ಸಚಿವೆ ಸೂಚನೆ ನೀಡಿದರು.

ರೈತರ ಮೇಲೆ ಲಾಠಿ ಪ್ರಹಾರ: ಅಶೋಕ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿರುವ ಜಮೀನಿನಲ್ಲಿ ಉಳುಮೆ ಮಾಡಲು ಮುಂದಾಗಿದ್ದ ರೈತರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿರುವುದು ಖಂಡನೀಯ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.



ಆರ್.ಅಶೋಕ

'ತನ್ನ ಓಲೈಕೆ ರಾಜಕಾರಣಕ್ಕೆ ರೈತರನ್ನು ಬಲಿಕೊಡಲು ಈ ಕಟುಕ ಕಾಂಗ್ರೆಸ್ ಸರ್ಕಾರ ಮುಂದಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಕಿಡಿಕಾರಿದ್ದಾರೆ.

'ರೈತರ ಜಮೀನಿನ ಮೇಲೆ ಕಬ್ಜಾ ಮಾಡುವುದೇ ಅಲ್ಲದೇ, ಅವರ ಮೇಲೆ ಲಾಠಿ ಪ್ರಹಾರ ಮಾಡಿ, ಟ್ರ್ಯಾಕ್ಟರ್ ವಶಕ್ಕೆ ಪಡೆದು ರೈತರ ವಿರುದ್ಧ ದೂರು ದಾಖಲಿಸಿಕೊಂಡಿದ್ದೀರಲ್ಲ, ನಿಮಗೆ ನಾಡಿನ ರೈತರಿಗಿಂತ ಓಲೈಕೆ ರಾಜಕಾರಣವೇ ಹೆಚ್ಚಾಯಿತೇ ' ಎಂದು ಅಶೋಕ ಪ್ರಶ್ನಿಸಿದ್ದಾರೆ.

'ಅನ್ನ ಹಾಕುವ ಕೈಗಳಿಗೆ ಕೋಳ ತೊಡಿಸುವ ಕಾಂಗ್ರೆಸ್ ಸರ್ಕಾರದ ಪಾಪದ ಕೊಡ ತುಂಬಿದೆ. ಅನ್ನದಾತರ ಶಾಪ ಈ ಸರ್ಕಾರವನ್ನು ಸುಡುವ ದಿನ ದೂರವಿಲ್ಲ' ಎಂದಿದ್ದಾರೆ.

ಬಾಲಕಿ ಮೇಲೆ ವೃದ್ಧನಿಂದ ಅತ್ಯಾಚಾರ

ಪ್ರಜಾವಾಣಿ ವಾರ್ತೆ

ಆಳಂದ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ನರೋಣಾ ಠಾಣೆ ವ್ಯಾಪ್ತಿಯ ಗ್ರಾಮವೊಂದರ ಶಾಲೆಯಲ್ಲಿ 8ನೇ ತರಗತಿ ಓದುತ್ತಿರುವ ಬಾಲಕಿ ಮೇಲೆ ವೃದ್ಧನೊಬ್ಬ ಅತ್ಯಾಚಾರ ನಡೆಸಿದ್ದಾನೆ.

ಈ ಸಂಬಂಧ ಬಾಲಕಿಯ ತಾಯಿ ನೀಡಿದ ದೂರು ಆಧರಿಸಿ, ಗೋರಕನಾಥ ಚವ್ಹಾಣ (63) ಎಂಬಾತನ್ನು ಪೊಲೀಸರು ಬಂಧಿಸಿದ್ದಾರೆ.

'ಬಾಲಕಿಯ ಪಕ್ಕದ ಮನೆಯಲ್ಲಿ ಆರೋಪಿ ವಾಸಿಸುತ್ತಿದ್ದ. ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಬಾಲಕಿಗೆ ಬೆದರಿಕೆ ಹಾಕಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಲಬುರಗಿ ಆಸ್ಪತ್ರೆಯಲ್ಲಿ ಬಾಲಕಿಗೆ ಚಿಕಿತ್ಸೆ ನೀಡಲಾಗುತ್ತಿದೆ. ನರೋಣಾ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಸುಧಾ, ಮಯೂರ ಓದಿರಿ

ತಿಮ್ಮಸಂದ್ರದಲ್ಲಿ ವಕ್ಫ್ ಜಮೀನು ಜಟಾಪಟಿ

ಒಂದನೇ ಪುಟದಿಂದ...

ತಹಶೀಲ್ದಾರ್ ಸುದರ್ಶನ ಯಾದವ್, ಡಿವೈಎಸ್‌ಪಿ ಮುರಳೀಧರ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಎರಡೂ ಗುಂಪುಗಳ ಜತೆ ಚರ್ಚಿಸಿ, ಪರಿಸ್ಥಿತಿ ತಿಳಿಗೊಳಿಸಿದರು. ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಈ ಬೆಳವಣಿಗೆ ಬಳಿಕ ಜಾಮಿಯಾ ಮಸೀದಿ ಕಾರ್ಯದರ್ಶಿ ಇನಾಯತ್ ಉಲ್ಲಾ ಚಿಂತಾಮಣಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದು, ರೈತರ ವಿರುದ್ಧ ಪ್ರಕರಣ ಸಹ ದಾಖಲಾಗಿದೆ.

ಏನಿದು ವಿವಾದ?: ಚಿಂತಾಮಣಿಯ ಹೊರವಲಯದಲ್ಲಿರುವ ತಿಮ್ಮಸಂದ್ರ ಗ್ರಾಮದ ಸರ್ವೆ ಸಂಖ್ಯೆ 13/1, 13/3 ಮತ್ತು 20ರಲ್ಲಿರುವ ಜಮೀನು ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನಮೂದಾಗಿದೆ. ಜೊತೆಗೆ ಈ ಜಮೀನಿನ ಸುತ್ತಲೂ ತಂತಿ ಬೇಲಿ ಹಾಕಲಾಗಿದೆ.

ರೈತರು ತಂತಿಬೇಲಿ ಕಿತ್ತು ಹಾಕಿ ಟ್ರ್ಯಾಕ್ಟರ್ ಮೂಲಕ ಶುಕ್ರವಾರ ಉಳುಮೆ ಮಾಡಿದ್ದಾರೆ. ಈ ವಿಷಯ ತಿಳಿದು ಸ್ಥಳಕ್ಕೆ ಬಂದ ಜಾಮಿಯಾ ಮಸೀದಿ ಸಮಿತಿ ಪದಾಧಿಕಾರಿಗಳು ತಡೆಯೊಡ್ಡಿದರು.

> **ಜಮೀನಿನ ವ್ಯಾಪ್ತಿಯಲ್ಲಿ 'ರಚ್ಚಕಟ್ಟೆ' ಇದೆ. ಜಿಲ್ಲಾಧಿಕಾರಿ, ಈ ಬಗ್ಗೆ ವರದಿ ನೀಡಿದ್ದಾರೆ. ಕೋರ್ಟ್‌ನಲ್ಲಿ ತಕರಾರು ಅರ್ಜಿ ಇದ್ದರೂ ತಂತಿಬೇಲಿ ಅಳವಡಿಸಿಕೊಂಡಿದ್ದಾರೆ**
> **ನಾಗೇಶ್, ಶ್ರೀರಾಮರೆಡ್ಡಿ**
> ರೈತರು

'ಇದು ವಕ್ಫ್ ಆಸ್ತಿ ಎಂದು ನ್ಯಾಯಾಲಯವೇ ಹೇಳಿದೆ. ಹಾಗಿದ್ದರೂ ಏಕೆ ಅತಿಕ್ರಮಣ ಮಾಡಿ ಉಳುಮೆ ಮಾಡಿದ್ದೀರಿ' ಎಂದು ಜಾಮಿಯಾ ಪದಾಧಿಕಾರಿಗಳು ರೈತರನ್ನು ಪ್ರಶ್ನಿಸಿದರು. ಈ ವೇಳೆ ಎರಡೂ ಗುಂಪುಗಳ ಮಧ್ಯೆ ಮಾತಿಗೆ ಮಾತು ಬೆಳೆದು ಜಟಾಪಟಿ ನಡೆಯಿತು.

ಸ್ಥಳಕ್ಕೆ ಬಂದ ಗ್ರಾಮಾಂತರ ಠಾಣೆಯ ಪೊಲೀಸರು ಜಮೀನಿಗೆ ಸಂಬಂಧಿಸಿದ ದಾಖಲೆ ತರುವಂತೆ ಎರಡೂ ಗುಂಪುಗಳಿಗೆ ಸೂಚಿಸಿದರು.

'ದಾಖಲೆ ಪರಿಶೀಲಿಸಿ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಕಂದಾಯ ಇಲಾಖೆಗೆ ಸೂಚಿಸಲಾಗುತ್ತದೆ. ಅನಗತ್ಯವಾಗಿ ಶಾಂತಿ ಕದಡುವ ಕೆಲಸಕ್ಕೆ ಯಾರೂ ಕೈಹಾಕಬಾರದು. ಕಾನೂನು ಪ್ರಕಾರ ಹೋರಾಟ ಮಾಡಿ. ಹೀಗೆ ಜಗಳ ಮಾಡುವುದು ಸರಿಯಲ್ಲ' ಎಂದು ಪೊಲೀಸರು ತಾಕೀತು ಮಾಡಿದರು.


ತಾತನ ಕಾಲದ ಜಮೀನಿಗೆ ವಕ್ಫ್ ಕಾಟ: ರೈತರು

'60–70 ವರ್ಷಗಳಿಂದ ಈ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಜೀವನ ಮಾಡುತ್ತಿದ್ದೇವೆ. ಪಹಣಿಯಲ್ಲಿ ವಕ್ಫ್ ಬೋರ್ಡ್ ಎಂದು ನಮೂದಾಗಿದೆ ಎಂದು ನಮ್ಮನ್ನು ಓಡಿಸಿ ಮುಳ್ಳುತಂತಿ ಬೇಲಿ ಹಾಕಿ ತೊಂದರೆ ಕೊಡುತ್ತಿದ್ದಾರೆ' ಎಂದು ರೈತರು ಆರೋಪ ಮಾಡಿದರು.

'ತಾತ, ಮುತ್ತಾತಂದಿರ ಕಾಲದಿಂದಲೂ ಉಳುಮೆ ಮಾಡಿಕೊಂಡು ಜೀವನ ಮಾಡುತ್ತಿದ್ದ ನಮ್ಮನ್ನು ನೂರಾರು ಜನರು ಮಾರಕಾಸ್ತ್ರಗಳಿಂದ ಬೆದರಿಸಿ ಒಕ್ಕಲೆಬ್ಬಿಸಿದ್ದಾರೆ' ಎಂದು ದೂರಿದರು.

'ಜಮೀನಿನಲ್ಲಿದ್ದ ಬೆಳೆ ಮತ್ತು ನೀರಾವರಿಗಾಗಿ ಅಳವಡಿಸಿದ್ದ ಪೈಪ್ ಕಿತ್ತು ಹಾಕಿದ್ದಾರೆ. ನಾವು ಬಡವರು, ಅಸಹಾಯಕರು, ಬೇರೆ ದಾರಿ ಕಾಣದೆ ಸಹಿಸಿಕೊಂಡಿದ್ದೆವು. ವಕ್ಫ್ ಹೆಸರಲ್ಲಿ ರೈತರನ್ನು ಒಕ್ಕಲೆಬ್ಬಿಸಬಾರದು ಎಂದು ಸರ್ಕಾರ ಹೇಳಿದೆ. ಹೀಗಾಗಿ ನಾವು ನಮ್ಮ ಜಮೀನಿನಲ್ಲಿ ಉಳುಮೆ ಮಾಡಲು ಮುಂದಾಗಿದ್ದೇವೆ' ಎಂದು ರೈತರು ಹೇಳಿದರು.


ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ಕೆಟ್ಟ ವ್ಯಕ್ತಿಯನ್ನು ಹುಡುಕುತ್ತಾ ಹೋದ ನನಗೆ ಕಂಡಿದ್ದು ನಾನೇ!
-ಕಬೀರ

ಮತ್ತೆ ಏರಿದ ಹಣದುಬ್ಬರ ರೆಪೊ ದರ ಇಳಿಕೆ ಸದ್ಯಕ್ಕಿಲ್ಲ

ಚಿಲ್ಲರೆ ಹಣದುಬ್ಬರ ದರವು ನಿಯಂತ್ರಣದಲ್ಲಿ ಇಲ್ಲ ಹಾಗೂ ಅದನ್ನು ನಿಯಂತ್ರಣಕ್ಕೆ ತರಲು ಹಲವು ತಿಂಗಳೇ ಬೇಕಾಗುತ್ತವೆ ಎಂಬುದು ಗೊತ್ತಿರುವ ಸಂಗತಿಯೇ ಆಗಿತ್ತು. ಅಲ್ಪಾವಧಿಯಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಹೆಚ್ಚಿನ ಮಟ್ಟದಲ್ಲಿಯೇ ಇರುತ್ತದೆ ಎಂಬ ಅಂದಾಜು ಭಾರತೀಯ ರಿಸರ್ವ್ ಬ್ಯಾಂಕ್‌ಗೆ (ಆರ್‌ಬಿಐ) ಕೂಡ ಇತ್ತು. ಆದರೆ ಅಕ್ಟೋಬರ್ ತಿಂಗಳಲ್ಲಿ ಚಿಲ್ಲರೆ ಹಣದುಬ್ಬರ ದರದ ಪ್ರಮಾಣವು ಶೇಕಡ 6.2ಕ್ಕೆ ಹೆಚ್ಚಳ ಕಂಡಿರುವುದು, ಅಂದರೆ 14 ತಿಂಗಳ ಗರಿಷ್ಠ ಮಟ್ಟವನ್ನು ಅದು ತಲುಪಿರುವುದು ಬಹಳ ಆಶ್ಚರ್ಯ ಮೂಡಿಸುವಂಥದ್ದು. ಚಿಲ್ಲರೆ ಹಣದುಬ್ಬರ ದರವು ಸೆಪ್ಟೆಂಬರ್ ತಿಂಗಳಿನಲ್ಲಿ ಶೇ 5.5ರಷ್ಟು ಇತ್ತು. ಅಕ್ಟೋಬರ್‌ನಲ್ಲಿ ದಾಖಲಾಗಿರುವ ಹಣದುಬ್ಬರ ಪ್ರಮಾಣವು ಆರ್‌ಬಿಐ ನಿಗದಿ ಮಾಡಿಕೊಂಡಿರುವ ಮಿತಿಗಿಂತ ಹೆಚ್ಚು. ಚಿಲ್ಲರೆ ಹಣದುಬ್ಬರ ದರವನ್ನು ಶೇ 4ರಿಂದ ಶೇ 6ರ ನಡುವೆ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ. ಆಹಾರ ವಸ್ತುಗಳ ಬೆಲೆ ಹೆಚ್ಚಳ, ಅದರಲ್ಲೂ ಮುಖ್ಯವಾಗಿ ತರಕಾರಿಗಳ ಬೆಲೆಯಲ್ಲಿನ ಏರಿಕೆ, ಚಿಲ್ಲರೆ ಹಣದುಬ್ಬರ ದರವು ಹೆಚ್ಚಾಗುವಂತೆ ಮಾಡಿದೆ. ಸೆಪ್ಟೆಂಬರ್ ತಿಂಗಳಲ್ಲಿ ತರಕಾರಿಗಳ ಬೆಲೆ ಏರಿಕೆ ಪ್ರಮಾಣ ಶೇ 36ರಷ್ಟು ಇತ್ತು, ಅಕ್ಟೋಬರ್ ತಿಂಗಳಲ್ಲಿ ಅದು ಶೇ 42ರಷ್ಟು ಆಗಿದೆ. ಏಕದಳ ಧಾನ್ಯಗಳ ಬೆಲೆಯಲ್ಲಿ ಶೇ 7ರಷ್ಟು ಹಾಗೂ ದ್ವಿದಳ ಧಾನ್ಯಗಳ ಬೆಲೆಯಲ್ಲಿ ಶೇ 8ರಷ್ಟು ಏರಿಕೆ ದಾಖಲಾಗಿದೆ. ಅಡುಗೆಯಲ್ಲಿ ಬಳಸುವ ವಿವಿಧ ಬಗೆಯ ಎಣ್ಣೆಗಳ ಬೆಲೆ ಕೂಡ ಏರಿಕೆ ಕಂಡಿದೆ.



ಚಿಲ್ಲರೆ ಹಣದುಬ್ಬರ ದರವನ್ನು ಶೇ 4ರಿಂದ ಶೇ 6ರ ನಡುವೆ ನಿಯಂತ್ರಿಸುವ ಹೊಣೆ ಆರ್‌ಬಿಐ ಮೇಲಿದೆ

ಮುಂದಿನ ತಿಂಗಳುಗಳಲ್ಲಿ ಆಹಾರ ವಸ್ತುಗಳ ಬೆಲೆಯಲ್ಲಿ ಇಳಿಕೆ ಕಂಡುಬರುವ ನಿರೀಕ್ಷೆ ಇದೆ. ಮುಂಗಾರು ಮಳೆಯು ಆಹಾರ ಬೆಳೆಗಳಿಗೆ ಅನುಕೂಲಕರವಾದ ರೀತಿಯಲ್ಲಿ ಚೆನ್ನಾಗಿ ಆಗಿದೆ. ಹೊಸದಾಗಿ ಕಟಾವು ಮಾಡಲಾದ ಬೆಳೆಗಳು ಮಾರುಕಟ್ಟೆಗೆ ಬಂದು, ಅವುಗಳ ಬೆಲೆಯಲ್ಲಿ ಒಂದಿಷ್ಟು ಇಳಿಕೆ ಕಂಡುಬರುವ ಸಾಧ್ಯತೆ ಇದೆ. ಹಿಂಗಾರು ಬೆಳೆ ಕೂಡ ಚೆನ್ನಾಗಿ ಆಗುವ ನಿರೀಕ್ಷೆ ಇದೆ. ಏಕದಳ ಧಾನ್ಯಗಳ ಸಂಗ್ರಹವು ಉತ್ತಮ ಮಟ್ಟದಲ್ಲಿ ಇರುವ ಕಾರಣ, ಅವುಗಳ ಬೆಲೆ ಏರಿಕೆಗೆ ಮಿತಿ ಇರುತ್ತದೆ. ಆದರೆ, ಅಕ್ಟೋಬರ್‌ನಲ್ಲಿ ದಾಖಲಾಗಿರುವ ಭಾರಿ ಪ್ರಮಾಣದ ಏರಿಕೆಯನ್ನು ಗಮನದಲ್ಲಿ ಇರಿಸಿಕೊಂಡು, ಪ್ರಸಕ್ತ ಹಣಕಾಸು ವರ್ಷದ ಮೂರನೆಯ ತ್ರೈಮಾಸಿಕದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣ ಶೇ 4.8ರಷ್ಟು, ನಾಲ್ಕನೆಯ ತ್ರೈಮಾಸಿಕದಲ್ಲಿ ಶೇ 4.2ರಷ್ಟು ಇರಬಹುದು ಎಂದು ಆರ್‌ಬಿಐ ಮಾಡಿದ್ದ ತನ್ನ ಈ ಮೊದಲಿನ ಅಂದಾಜನ್ನು ಈಗ ಪರಿಷ್ಕರಿಸಬಹುದು. ಜಾಗತಿಕ ಪ್ರಭಾವಗಳ ಕಾರಣದಿಂದಾಗಿ ತೈಲ ಬೆಲೆಯು ಹೆಚ್ಚಳ ಕಂಡರೆ, ಅದರಿಂದಲೂ ಹಣದುಬ್ಬರ ಪ್ರಮಾಣ ಇನ್ನಷ್ಟು ಜಾಸ್ತಿ ಆಗುವ ಸಾಧ್ಯತೆ ಇದೆ. ಇತ್ತ, ಅಮೆರಿಕದ ಡಾಲರ್ ಎದುರು ಭಾರತದ ರೂಪಾಯಿ ಮೌಲ್ಯ ದಿನೇದಿನೇ ಕುಸಿಯುತ್ತಿರುವುದು ನಕಾರಾತ್ಮಕ ಪರಿಣಾಮ ಉಂಟುಮಾಡಲಿದೆ. ಆಹಾರ ವಸ್ತುಗಳು ಹಾಗೂ ಇಂಧನ ಹೊರತುಪಡಿಸಿ ಇತರ ಸರಕುಗಳು ಮತ್ತು ಸೇವೆಗಳ ಬೆಲೆ ಏರಿಕೆ ಪ್ರಮಾಣ ಕೂಡ ಶೇ 3.7ಕ್ಕೆ ಹೆಚ್ಚಳ ಕಂಡಿದೆ. ಸಗಟು ಹಣದುಬ್ಬರ ದರವು ನಾಲ್ಕು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ. ಅರ್ಥವ್ಯವಸ್ಥೆಯ ಬೆಳವಣಿಗೆಯು ಮಂದವಾಗುವ ಸೂಚನೆಗಳು ಈಗಾಗಲೇ ಇವೆ. ಆರ್ಥಿಕ ವರ್ಷದ ಎರಡನೆಯ ತ್ರೈಮಾಸಿಕದಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ದರವು ಶೇ 7ರಷ್ಟು ಇರಲಿದೆ ಎಂಬುದು ಆರ್‌ಬಿಐ ಅಂದಾಜು. ಇಡೀ ವರ್ಷಕ್ಕೆ ಜಿಡಿಪಿ ಬೆಳವಣಿಗೆಯು ಶೇ 7.2ರಷ್ಟು ಇರಲಿದೆ ಎಂದು ಅದು ಅಂದಾಜು ಮಾಡಿದೆ. ಆದರೆ ಬೆಳವಣಿಗೆ ದರವು ಶೇ 7ಕ್ಕಿಂತ ಕಡಿಮೆ ಇರಲಿದೆ ಎಂಬ ಅಂದಾಜುಗಳೂ ಇವೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯು (ಎಂಪಿಸಿ) ಕಳೆದ ತಿಂಗಳು ನಡೆದ ಸಭೆಯಲ್ಲಿ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳುವ ತೀರ್ಮಾನ ಕೈಗೊಂಡಿತು. ಆದರೆ ತನ್ನ ಹಣಕಾಸು ನಿಲುವು 'ಹೊಂದಾಣಿಕೆಯನ್ನು ಹಿಂಪಡೆಯುವುದು' ಎಂದು ಇದ್ದಿದ್ದನ್ನು 'ತಟಸ್ಥ' ಎಂದು ಬದಲಾಯಿಸಿತು. ಚಿಲ್ಲರೆ ಹಣದುಬ್ಬರ ದರವನ್ನು ಶೇ 4ಕ್ಕೆ ಇಳಿಸುವುದು ತನ್ನ ಆದ್ಯತೆ ಎಂಬುದನ್ನು ಆರ್‌ಬಿಐ ಸ್ಪಷ್ಟಪಡಿಸಿದ್ದರೂ ಹಣಕಾಸಿನ ನಿಲುವಿನಲ್ಲಿ ಬದಲಾವಣೆ ತಂದಿರುವುದು ಮುಂದೆ ರೆಪೊ ದರ ಇಳಿಕೆ ಆಗುವುದರ ಸೂಚನೆ ಎಂದು ನಂಬಲಾಗಿತ್ತು. ಇತ್ತ ಬೇರೆ ಬೇರೆ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ರೆಪೊ ದರವನ್ನು ತಗ್ಗಿಸಿದ್ದುದು, ಡಿಸೆಂಬರ್‌ನಲ್ಲಿ ನಡೆಯುವ ಸಭೆಯಲ್ಲಿ ಆರ್‌ಬಿಐ ಕೂಡ ರೆಪೊ ದರ ಇಳಿಕೆಯ ತೀರ್ಮಾನ ಪ್ರಕಟಿಸಬಹುದು ಎಂಬ ನಿರೀಕ್ಷೆಗಳಿಗೆ ಕಾರಣವಾಗಿತ್ತು. ಆದರೆ, ಈಗ ಹಣದುಬ್ಬರವು ಮತ್ತೆ ಏರಿಕೆ ಆಗಿರುವ ಕಾರಣ, ಡಿಸೆಂಬರ್ ತಿಂಗಳ ಸಭೆಯಲ್ಲಿ ರೆಪೊ ದರವನ್ನು ಆರ್‌ಬಿಐ ತಗ್ಗಿಸುವುದಿಲ್ಲ ಎಂಬುದು ಖಾತರಿ ಆದಂತಾಗಿದೆ.

ಸರ್ಕಾರ ತೆಗೆಯುವವರೆಗೆ ವಿರಮಿಸುವುದಿಲ್ಲ ಎಂಬ ಮಾತು ಪ್ರಧಾನಿಯಾಗಿದ್ದವರಿಗೆ ಶೋಭಿಸದು

ಅಧಿಕಾರದ ಮೋಹ: ಬೀಳಿಸುವ ದಾಹ



ಗತಿಬಿಂಬ

ವೈ.ಗ. ಜಗದೀಶ್

'ಒಂದು ಕಾಲದಲ್ಲಿ ನಾನು ಮತ್ತು ಯಡಿಯೂರಪ್ಪ ಕಿತ್ತಾಡಿಕೊಂಡಿದ್ದೆವು. ನಾವಿಬ್ಬರೂ ಈಗ ಒಂದಾಗಿರುವುದು ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು. ಈ ಸರ್ಕಾರ ತೆಗೆಯುವವರೆಗೂ ವಿರಮಿಸುವ ಪ್ರಶ್ನೆಯೇ ಇಲ್ಲ...'

ಮುಖ್ಯಮಂತ್ರಿ, ಪ್ರಧಾನಮಂತ್ರಿಯಂತಹ ಉನ್ನತ ಹುದ್ದೆಗಳನ್ನು ನಿರ್ವಹಿಸಿದ ರಾಷ್ಟ್ರಮಟ್ಟದ ನಾಯಕ, ಸದ್ಯ 91 ವರ್ಷ ಪೂರ್ಣಗೊಳಿಸುತ್ತಿರುವ ಎಚ್.ಡಿ. ದೇವೇಗೌಡ ಅವರ ಬಾಯಿಂದ ಹೊರಬಿದ್ದ ಮಾತುಗಳಿವು. ಉನ್ನತ ಹುದ್ದೆಗೇರಿದ ಬಳಿಕ ಎಂತಹದೇ ವ್ಯಕ್ತಿಗಾದರೂ ಅನುಭವಜನ್ಯವಾಗಿ ಮುತ್ಸದ್ದಿತನವೆಂಬುದು ತನ್ನಿಂತಾನೇ ಪ್ರಾಪ್ತವಾಗಿ ಬಿಡುತ್ತದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ದೇಶದಲ್ಲೇ ಬಲುದೊಡ್ಡ ಸ್ಥಾನ ನಿರ್ವಹಿಸಿದವರು, ಪ್ರಜಾಪ್ರಭುತ್ವವನ್ನೇ ಬುಡಮೇಲು ಮಾಡುವಂತಹ ಮಾತು ಆಡುವುದು ಶೋಭೆಯಲ್ಲ. ಅದರಲ್ಲೂ 224 ಸದಸ್ಯ ಬಲದ ವಿಧಾನಸಭೆಯಲ್ಲಿ 135 ಸ್ಥಾನಗಳಲ್ಲಿ ಗೆದ್ದು, ಅಧಿಕಾರ ಹಿಡಿದಿರುವ ಪಕ್ಷವೊಂದರ ಸರ್ಕಾರವನ್ನು ಕೆಡವುವ ಪ್ರಸ್ತಾಪವೇ ಪ್ರಜಾತಂತ್ರಕ್ಕೆ ಮಾರಕ.

2018ರಲ್ಲಿ ಅಧಿಕಾರಕ್ಕೆ ಬಂದ ಎಚ್.ಡಿ. ಕುಮಾರಸ್ವಾಮಿ ನೇತೃತ್ವದ ಜೆಡಿಎಸ್-ಕಾಂಗ್ರೆಸ್ ಮೈತ್ರಿ ಸರ್ಕಾರದ ಅವಧಿಯುದ್ದಕ್ಕೂ ಕೆಡವುವ, ಉರುಳಿಸುವ ಮಾತುಗಳೇ ರಾಜಕೀಯ ವಲಯದಲ್ಲಿ ಮುನ್ನೆಲೆಯಲ್ಲಿದ್ದವು. ಕಾಂಗ್ರೆಸ್-ಜೆಡಿಎಸ್‌ನ ಶಾಸಕರನ್ನು 'ಆಪರೇಷನ್ ಕಮಲ'ದ ಬಲೆಯೊಳಗೆ ಸಿಲುಕಿಸಿ, ಕೊನೆಗೆ ಸರ್ಕಾರವನ್ನು ಉರುಳಿಸಲಾಯಿತು. ಆಗ, ಮೈತ್ರಿ ಸರ್ಕಾರದ ಸಮನ್ವಯ ಸಮಿತಿಯ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯನವರಿಗೂ ಕುಮಾರಸ್ವಾಮಿ ನೇತೃತ್ವದ ಸರ್ಕಾರ ಮುಂದುವರಿಯುವುದು ಬೇಕಿರಲಿಲ್ಲ. ಒಡಕಿನ ಮಾತುಗಳನ್ನು ಮೊದಲು ತೆಗೆದವರು ಸಿದ್ದರಾಮಯ್ಯ. ಮೈತ್ರಿ ಸರ್ಕಾರದಲ್ಲಿನ ಅಸಹನೆಯ ಕಿಡಿಗಳನ್ನು ಬಳಸಿ, ಸರ್ಕಾರಕ್ಕೆ ಬೆಂಕಿ ಇಟ್ಟದ್ದು ಬಿಜೆಪಿ ನಾಯಕರು. ಕೇಂದ್ರ ಸರ್ಕಾರದಲ್ಲಿ ಈಗಲೂ ಅತ್ಯಂತ ಪ್ರಭಾವಿಯಾಗಿರುವ ಸಚಿವರೊಬ್ಬರ ನಿರ್ದೇಶನದ ಅನುಸಾರ ಮೈತ್ರಿ ಸರ್ಕಾರಕ್ಕೆ ಹಿಡಿ ಮಣ್ಣು ಹಾಕುವ ಕೆಲಸ ನಡೆಯಿತು. ಸರ್ಕಾರ ಕೆಡವಲು ಬೇಕಾದ ಸೂತ್ರ ಹೆಣೆದು, ಅದನ್ನು ಜಾರಿಗೊಳಿಸಿದ್ದು ಬಿ.ಎಸ್. ಯಡಿಯೂರಪ್ಪನವರ ಸಂಬಂಧಿ, ಆಪ್ತರಾಗಿದ್ದ ಎನ್.ಆರ್. ಸಂತೋಷ್. ಅಧಿಕಾರ ಅನುಭವಿಸಿದ್ದು ಯಡಿಯೂರಪ್ಪ ಮತ್ತು ಅವರ ಮಗ ಬಿ.ವೈ. ವಿಜಯೇಂದ್ರ ಹಾಗೂ ಬಸವರಾಜ ಬೊಮ್ಮಾಯಿ.

2018ರ ವಿಧಾನಸಭೆ ಚುನಾವಣೆಯಲ್ಲಿ ಎದುರುಬದುರು ಸೆಣಸಿ, ಹೀನಾಮಾನ ಬೈದಾಡಿಕೊಂಡಿದ್ದ ಕಾಂಗ್ರೆಸ್-ಜೆಡಿಎಸ್ ನಾಯಕರು 'ಅಪವಿತ್ರ' ಮೈತ್ರಿ ಮಾಡಿಕೊಂಡಿದ್ದರು. ಅಂತಹ ಸರ್ಕಾರ ಕೆಡವಿದೆವು ಎಂಬ ಸಣ್ಣ ಸಮರ್ಥನೆಯಾದರೂ ಬಿಜೆಪಿ ನಾಯಕರಿಗೆ ಇತ್ತು. ಸರ್ಕಾರವನ್ನು ಬೀಳಿಸಿದ ಬಳಿಕ, ಚುನಾವಣೆ ಎದುರಿಸುವ ಬದಲು, 2019ರಲ್ಲಿ ಸರ್ಕಾರ ರಚಿಸಿದ್ದು ಮೂರನ್ನೂ ಬಿಟ್ಟು ಒಟ್ಟಾದ ಹೀನ 'ಕೂಡಿಕೆ'.

2023ರಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಉರುಳಿಸುವ ಮಾತುಗಳನ್ನು ವಿರೋಧ ಪಕ್ಷದ ನಾಯಕರು ಆಡಲು ಶುರು ಮಾಡಿದರು. ಅದರಲ್ಲೂ ಬಿಜೆಪಿ-ಜೆಡಿಎಸ್ ಮೈತ್ರಿಯಾದ ಬಳಿಕ, ಸರ್ಕಾರ ತೆಗೆಯುವ ಮಾತುಗಳಿಗೆ ಬಲ ಬಂದಿತು. ಲೋಕಸಭೆ ಚುನಾವಣೆ ಬಳಿಕ, ರಾಜ್ಯ ಸರ್ಕಾರ ಪತನ ಎಂದೂ ಕೆಲವು ನಾಯಕರು ಹೇಳಿದರು. ಅದರ ಜತೆಗೆ, ಮುಖ್ಯಮಂತ್ರಿ ಬದಲಾವಣೆಯ ವಿಷಯವನ್ನು ಕಾಂಗ್ರೆಸ್‌ನವರೇ ಹರಿಯಬಿಟ್ಟರು. ಒಂದು ವರ್ಷದಿಂದೀಚೆಗೆ ಅಭಿವೃದ್ಧಿ, ಜನಪರ ಕೆಲಸಗಳು ಸದ್ದು ಮಾಡಿದ್ದು ಕಡಿಮೆ. ನಾಯಕತ್ವ ಬದಲಾವಣೆ, ಸರ್ಕಾರ ಪತನದ ಸುದ್ದಿಗಳೇ ರಾರಾಜಿಸಿದವು.

ಈಗ ಮತ್ತೆ 'ಆಪರೇಷನ್ ಕಮಲ'ದ ವಿಷಯ ಮುನ್ನೆಲೆಗೆ ಬಂದಿದೆ. ತಲಾ ₹50 ಕೋಟಿ ಕೊಟ್ಟು 50 ಶಾಸಕರನ್ನು ಖರೀದಿಸುವ ಕೆಲಸಕ್ಕೆ ಬಿಜೆಪಿ ನಾಯಕರು ಕೈಹಾಕಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಅವರು ಹೇಳಿದ್ದನ್ನು ಸಾಬೀತುಪಡಿಸುವ ಸಾಕ್ಷ್ಯಗಳು ಅವರ ಬಳಿ ಇದ್ದರೆ, ಸರ್ಕಾರ ಬೀಳಿಸುವ ಸಂಚು ಹೂಡಿದವರ ವಿರುದ್ಧ ದೇಶದ್ರೋಹದ ಪ್ರಕರಣ ದಾಖಲಿಸುವ ಕೆಲಸವನ್ನು ಅವರು ಮಾಡಬೇಕಿತ್ತು. ಆದರೆ, ಸಿದ್ದರಾಮಯ್ಯನವರಿಗೆ ಕಾನೂನು ಕ್ರಮಕ್ಕಿಂತ, ತಮ್ಮ ಮಾತು ಎಬ್ಬಿಸಬಹುದಾದ ರಾಜಕೀಯ ಕಲ್ಲೋಲದ ಬಗೆಗೆ ಹೆಚ್ಚು ಆಸ್ಥೆ ಇದ್ದಂತಿದೆ.

ಸಿದ್ದರಾಮಯ್ಯನವರ ಮಾತು ರಾಜ್ಯ ರಾಜಕೀಯದಲ್ಲಿ ಕೋಲಾಹಲವನ್ನಂತೂ ಎಬ್ಬಿಸಿದೆ. 'ಸರ್ಕಾರ ತೆಗೆಯುವವರೆಗೆ ವಿರಮಿಸುವುದಿಲ್ಲ' ಎಂದು ದೇವೇಗೌಡರು ಹೇಳಿದ್ದರೆ, ಅವರ ಮಗ, ಕೇಂದ್ರ ಸಚಿವರೂ ಆಗಿರುವ ಎಚ್.ಡಿ. ಕುಮಾರಸ್ವಾಮಿ, 2028ರೊಳಗೆ ತಾನು ಮುಖ್ಯಮಂತ್ರಿಯಾಗುವೆ ಎಂಬ ಮಾತನ್ನು ಆಡಿದ್ದುಂಟು. ಎಲ್ಲದಕ್ಕೂ ಮಿಗಿಲಾಗಿ, ರಾಜಕೀಯ ಪಕ್ಷಗಳ ಮೊಗಸಾಲೆಯೊಳಗೆ ಕಿವಿಯಾನಿಸಿದರೆ, ಸರ್ಕಾರದ ಕಂಪನಕ್ಕೆ ಯತ್ನಗಳು ನಡೆಯುತ್ತಿರುವ ಸಾಕ್ಷ್ಯಗಳು ಸಿಗುತ್ತವೆ. ಹಿಂದೆ, ಕುಮಾರಸ್ವಾಮಿ ನೇತೃತ್ವದ ಸರ್ಕಾರವನ್ನು ಬೀಳಿಸಲು ತಂತ್ರಗಾರಿಕೆ ಹೆಣೆದಿದ್ದ ಪ್ರಭಾವಿ ಕೇಂದ್ರ ಸಚಿವರೇ ಈಗಲೂ ಸೂತ್ರಧಾರಿ. ದೆಹಲಿಯ ಅವರ ಕಚೇರಿಯಿಂದಲೇ ಕಾಂಗ್ರೆಸ್ ಶಾಸಕರಿಗೆ ಕರೆಗಳು ಬರುತ್ತಿದ್ದು, 'ನಂ.2'ಗೆ ನಿಮ್ಮನ್ನು ಭೇಟಿ ಮಾಡಿಸುತ್ತೇವೆ' ಎಂಬ ಸಂದೇಶಗಳು ರವಾನೆಯಾಗುತ್ತಿವೆ ಎಂಬ ಮಾಹಿತಿಗಳಿವೆ.

ಇದಕ್ಕೆ ಭಿನ್ನವಾಗಿ ಪ್ರತಿಕ್ರಿಯಿಸುತ್ತಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿಜಯೇಂದ್ರ, '₹50 ಕೋಟಿ ಆಮಿಷದ ಬಗ್ಗೆ ತನಿಖೆಗೆ ಆದೇಶಿಸಲಿ' ಎಂದು ಸವಾಲು ಎಸೆದಿದ್ದಾರೆ. ಆದರೆ, ಹಿಂದೆ ಆಪರೇಷನ್ ಕಮಲ ನಡೆಸಿದ ಫಲವಾಗಿ ತಮ್ಮ ತಂದೆ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದನ್ನು ಮರೆತೇಬಿಟ್ಟಿದ್ದಾರೆ. ಬಿಜೆಪಿಯ 'ಗರ್ಭಗುಡಿ'ಯ ನಿಖರ ಮಾಹಿತಿ ಪ್ರಕಾರ, ಸರ್ಕಾರ ತೆಗೆಯುವ ಯತ್ನಕ್ಕೆ ಚಾಲನೆ ಸಿಕ್ಕಿ ಆರು ತಿಂಗಳೇ ಕಳೆದಿದೆ. ಹೊಸ ಸರ್ಕಾರ ರಚನೆಯಾದರೆ, ಅದರಲ್ಲಿ ವಿಜಯೇಂದ್ರ ಇರಕೂಡದು ಎಂಬ ಷರತ್ತಿಗೆ ಒಳಪಟ್ಟು ಈ ಕಾರ್ಯಾಚರಣೆಗೆ ನೆರವು ನೀಡುತ್ತಿರುವ ಗುಂಪು, ಕಾಂಗ್ರೆಸ್ ಶಾಸಕರ ಸಂಪರ್ಕದಲ್ಲಿದೆ. 25 ಶಾಸಕರು ಸಹಮತ ವ್ಯಕ್ತಪಡಿಸಿದ್ದಾರೆ. ಸರ್ಕಾರ ಬೀಳಿಸಲು ಕನಿಷ್ಠ 70 ಶಾಸಕರಾದರೂ ಕಾಂಗ್ರೆಸ್ ತೊರೆದು, ಹೊರಬರಬೇಕು. ಇಲ್ಲವೆಂದರೆ ಮೂರನೇ ಎರಡರಷ್ಟು ಶಾಸಕರು ಪ್ರತ್ಯೇಕ ಗುಂಪಾಗಿ ಗುರುತಿಸಿಕೊಳ್ಳಬೇಕು. ಅಷ್ಟು ಸಂಖ್ಯೆ ಕೂಡಿ ಬರದೇ ಇರುವುದರಿಂದ ಆಪರೇಷನ್‌ಗೆ ಹಿನ್ನಡೆಯಾಗಿದೆ. ತಮ್ಮನ್ನು ಹೊರಗಿಟ್ಟು ನಡೆಸುತ್ತಿರುವ ಕಾರಣಕ್ಕೆ, ಆಪರೇಷನ್ ಕಮಲದ ಬಗ್ಗೆ ತನಿಖೆ ನಡೆಸಿ ಎಂದು ಮುಖ್ಯಮಂತ್ರಿಗೆ ವಿಜಯೇಂದ್ರ ಸವಾಲು ಹಾಕಿದ್ದಾರೆ ಎಂಬ ಮಾತುಗಳೂ ಪಕ್ಷದೊಳಗೆ ಇವೆ.



ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ ಮೈತ್ರಿಕೂಟ ಮತ್ತೆ ಗೆದ್ದು ಅಧಿಕಾರ ಹಿಡಿದರೆ, ಕರ್ನಾಟಕದಲ್ಲಿ 'ಆಪರೇಷನ್'ಗೆ ಚುರುಕು ಸಿಗಲಿದೆ. ಹಿಂದುಳಿದ ಸಮುದಾಯದ ಪ್ರಭಾವಿ ನಾಯಕರೊಬ್ಬರ ನೇತೃತ್ವದಲ್ಲೇ ದೊಡ್ಡ ಸಂಖ್ಯೆಯ ಶಾಸಕರನ್ನು ಸೆಳೆಯುವ ಯತ್ನ ನಿರಂತರವಾಗಿ ನಡೆದಿದೆ. ಅದಕ್ಕೆ ಪರ್ಯಾಯ ತಂತ್ರ ಹೆಣೆದಿರುವ ಕಾಂಗ್ರೆಸ್ ನಾಯಕರು, ಎದುರಾಳಿಗಳ ಬಲವನ್ನೇ ನಿಸ್ಸತ್ವಗೊಳಿಸುವ ತಯಾರಿಯಲ್ಲಿದ್ದಾರೆ. ಬಿಜೆಪಿ-ಜೆಡಿಎಸ್ ಶಾಸಕರಿಗೆ 'ಆಪರೇಷನ್' ನಡೆಸುವ ತಯಾರಿಯೂ ಜೋರಾಗಿಯೇ ನಡೆದಿದೆ. ಮಹಾರಾಷ್ಟ್ರ ಫಲಿತಾಂಶದ ಮೇಲೆ ಎಲ್ಲವೂ ನಿಂತಿದೆ.

ಕರ್ನಾಟಕದಲ್ಲಿ 2008ರಲ್ಲಿ ಯಡಿಯೂರಪ್ಪ ಶುರು ಮಾಡಿದ 'ಆಪರೇಷನ್ ಕಮಲ' ತಂತ್ರವನ್ನು ಬಿಜೆಪಿ ರಾಷ್ಟ್ರೀಯ ನಾಯಕರು ಹಲವು ರಾಜ್ಯಗಳಲ್ಲಿ ಬಳಸಿ ಯಶಸ್ವಿಯಾಗಿದ್ದಾರೆ. ಬಹುಕೋಟಿ ಹಣ ಸುರಿದು, ಹೀಗೆ ಹೀನ ಮಾರ್ಗದಲ್ಲಿ ಸರ್ಕಾರ ಬೀಳಿಸುವುದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವಯುತ ನಡೆಯಲ್ಲ. ಹಾಗಂತ, ಈಗಿನ ಕಾಂಗ್ರೆಸ್ ನೇತೃತ್ವದ ಸರ್ಕಾರ ಜನಪರವಾದ ಉತ್ತಮ ಪರಂಪರೆಯನ್ನು ಮುಂದುವರಿಸಿಲ್ಲ. ಭ್ರಷ್ಟಾಚಾರದ ಸಾಲು ಸಾಲು ಆರೋಪಗಳು, ಅಭಿವೃದ್ಧಿ ಶೂನ್ಯತೆ ಎದ್ದು ಕಾಣಿಸುತ್ತಿದೆ. ಸರ್ಕಾರ ಬೀಳುತ್ತದೆ; ಮುಖ್ಯಮಂತ್ರಿ ಬದಲಾಗುತ್ತಾರೆ ಎಂಬ ಹೇಳಿಕೆಗಳು ಸ್ಥಿರ ಸರ್ಕಾರಕ್ಕೆ ಗಾಸಿ ಮಾಡುತ್ತವೆ. ಅಸ್ಥಿರ ಸ್ಥಿತಿಯಲ್ಲಿ ಸರ್ಕಾರ ಇದ್ದಾಗ, ಅಧಿಕಾರಿಗಳು ನಿಷ್ಕ್ರಿಯರಾಗುತ್ತಾರೆ. ಇಂತಹ ಹೊತ್ತಿನಲ್ಲಿ, ಸರ್ಕಾರದ ಆಡಳಿತ ವೈಫಲ್ಯ, ಭ್ರಷ್ಟಾಚಾರದ ವಿರುದ್ಧ ಜನಾಂದೋಲನ ರೂಪಿಸಿ, ಮತದಾರರನ್ನು ಜಾಗೃತಗೊಳಿಸುವುದು ವಿರೋಧ ಪಕ್ಷದ ನೈಜ ಕರ್ತವ್ಯ. ಅಧಿಕಾರಾರೂಢ ಪಕ್ಷವಾಗಿದ್ದ ಬಿಜೆಪಿಯನ್ನು 66ಕ್ಕೆ ಇಳಿಸಿದ ರಾಜ್ಯದ ಮತದಾರರು, ಅವರಿಗೂ ಜವಾಬ್ದಾರಿ ಕೊಟ್ಟಿದ್ದಾರೆ. ಸರ್ಕಾರ ಬೀಳಿಸುವ ಕೆಲಸ ಮಾಡುವುದರ ಬದಲು, ಸರ್ಕಾರದ ವಿರುದ್ಧ ಜನಜಾಗೃತಿಗೆ ಪ್ರಾಮಾಣಿಕವಾಗಿ ಶ್ರಮಿಸಿದರೆ ಚಿನ್ನದ ತಟ್ಟೆಯಲ್ಲಿಟ್ಟೇ ಅಧಿಕಾರ ನೀಡುವಷ್ಟು ಜಾಣ್ಮೆ ಕನ್ನಡಿಗರಿಗೆ ಇದೆ.

ಒಂದು ಕಡೆ 'ಆಪರೇಷನ್ ಕಮಲ'ಕ್ಕೆ ಬಿಜೆಪಿ ವರಿಷ್ಠರ ಪಡೆ ತಂತ್ರ ಹೊಸೆಯುತ್ತಿದ್ದರೆ, ಆ ಪಕ್ಷದೊಳಗೆ ವರಿಷ್ಠರ ಕೃಪಾಶೀರ್ವಾದ ಇರುವ ಭಿನ್ನರ ಗುಂಪು, ವಿಜಯೇಂದ್ರ 'ಆಪರೇಷನ್'ಗೆ ಖೆಡ್ಡಾ ತೋಡಿದೆ. ಯಾರು ಯಾರನ್ನು ಹಣಿಯಲಿದ್ದಾರೆ, ಯಾರು ಯಾರಿಗೆ ಶತ್ರು-ಮಿತ್ರರಾಗಲಿದ್ದಾರೆ ಎಂಬ ರಾಜಕೀಯ ಕುತೂಹಲ ತಣಿಯಬೇಕಾದರೆ ಮಹಾರಾಷ್ಟ್ರ ಫಲಿತಾಂಶ ಹೊರಬೀಳಬೇಕಷ್ಟೆ.

ಚುರುಮುರಿ



ನಿಶ್ಶಕ್ತಿ ಯೋಜನೆ!

• ತುರುವೇಕೆರೆ ಪ್ರಸಾದ್

'ಲೇಯ್, ಪೇಪರ್ ನೋಡುದ್ರೇನೇ? ಇನ್ಮುಂದೆ ಗಂಡಸರಿಗೂ ಫ್ರೀ ಬಸ್ ಸೌಲಭ್ಯ ಕೊಡ್ತಾರಂತೆ' ಎಂದ ಪರ್ಮೇಶಿ.

'ಹೌದು, ಅದೊಂದು ಬೇರೆ ಕಮ್ಮಿಯಾಗಿತ್ತು. ಒಟ್ನಲ್ಲಿ ಹೆಂಗಸರು ಎಲ್ಲೂ ನೆಮ್ಮದಿಯಾಗಿ ಇರೋ ಹಾಗಿಲ್ಲ' ಗೊಣಗಿದರು ಪದ್ದಮ್ಮ.

'ಯಾಕೇ ಹೀಗಂತೀಯ? ನಮ್ಮನ್ನ ಮನೇಲಿ ಮುಸುರೆ, ಬಟ್ಟೆ ಅಂತ ಬಿಟ್ಟು ಊರೂರು ತಿರುಗ್ತಿದ್ರಿ. ನಾವೂ ಹಾಗ್ ತಿರುಗುದ್ರೆ ಏನ್ ಹೊಟ್ಟೆ ಉರಿನಾ?'

'ನೀವು ಗಂಡಸರು ಮುಂಚೆ ಹೆಂಗಸರನ್ನ ಮನೆ ಕೆಲಸದೋರ ತರ ಬಿಟ್ ತಿಪ್ಪೆ ಅಲೆಯಕ್ಕೆ ಹೋಗ್ತಿರ್ಲಿಲ್ವಾ? ಮಾಡಿದ್ದುಣ್ಣೋ ಮಹರಾಯ ಅಂತ ಅದು ನಿಮಗೆ ರಿವರ್ಸ್ ಆಗಿತ್ತು ಅಷ್ಟೇ'.

'ಅದು ತಪ್ಪು ಅಂತ ಸರ್ಕಾರಕ್ಕೆ ಅರ್ಥ ಆಗಿ, ಪುರುಷರಿಗೂ ಸಮಾನ ನ್ಯಾಯ ದೊರಕಿಸಿಕೊಡ್ತಿದಾರೆ'.

'ಹಾಗಂತ ಎಲ್ಲ ಗಂಡಸರಿಗೂ ಪುಕ್ಕಟೆ ಬಸ್ ಸೌಲಭ್ಯ ಸಿಗುತ್ತೆ ಅಂತ ಹಿರಿ ಹಿರಿ ಹಿಗ್ಗಬೇಡಿ. ವಯಸ್ಸಿನ ಆಧಾರದ ಮೇಲೆ ಕೊಡ್ತೀವಿ ಅಂತ ಹೇಳಿರೋದು. ಆದ್ರೂ ಏನ್ ಪ್ರಯೋಜನ? ಬಸ್ನಲ್ಲಿ ಲೇಡೀಸ್ ಫಸ್ಟ್ ಅಂತ ನಾವೇ ತುಂಬ್ಕೊಂಡಿರ್ತೀವಿ. ನಿಮಗೆ ಸ್ಟ್ಯಾಂಡಿಂಗೇ ಕಾಯಂ! ಈ ಸಂಪತ್ತಿಗೆ ಯಾಕ್ ಬೇಕು ಫ್ರೀ ಬಸ್ಸು?'

'ಅಂದ್ರೆ ನೀನು ಗಂಡಸರಿಗೆ ಬಸ್‌ನಲ್ಲಿ ಫ್ರೀ ಸೌಲಭ್ಯ ಕೊಡ್ಲೇಬಾರದು ಅಂತೀಯಾ?'

'ಅಯ್ಯೋ ನಾನ್ಯಾಕೆ ಹೇಳ್ಲಿ? ಒಬ್ರೇ ಲಗೇಜ್ ಹಿಡ್ಕೊಂಡ್ ಒದ್ದಾಡ್ತಿದ್ವಿ. ನೀವು ಲಗೇಜ್ ತಲೆ ಮೇಲೆ ಹೇರ್ಕಂಡು ಹರಕೆ ಹೊತ್ತೋರ ತರ ನಿಂತ್ಕೊತೀರ ಅಂದ್ರೆ ನಮಗೇನ್ ಕಷ್ಟ. ಮನೇಲಿ ಏನೇನು ಅಡಾವುಡಿ ಮಾಡ್ತೀರೊ ಅನ್ನೋ ಯೋಚನೇಲಿ ನಮಗೂ ನಿಮ್ಮನ್ನ ಒಬ್ಬೊಬ್ರನ್ನೇ ಮನೇಲಿ ಬಿಟ್ಟು ಹೋಗಕ್ಕೆ ಆತಂಕ ಆಗ್ತಿತ್ತು. ಗಂಡ, ಗಂಟು ಎರಡೂ ಒಟ್ಟಿಗೇ ಇರುತ್ವೆ ಅಂದ್ರೆ ಸಲೀಸಲ್ವಾ?' ನಕ್ಕರು ಪದ್ದಮ್ಮ.

'ಗಂಡಸರಿಗೆ ಫ್ರೀ ಬಸ್ ಸೌಲಭ್ಯ ಕೊಟ್ರೆ ಕಾಶಿ, ರಾಮೇಶ್ವರಕ್ಕೇ ಕೊಡ್ಬೇಕು. ಲೋಕಲ್‌ಗೆ ಲಾಯಕ್ಕಲ್ಲ ನಾವು. ನಮ್ಮದು ನಿಶ್ಶಕ್ತಿ ಯೋಜನೆ!' ಪರ್ಮೇಶಿ ಮುಖ ಹಿಂಡಿದ.

ದಿನದ ಟ್ವೀಟ್


ಮಕ್ಕಳ ಹಕ್ಕು: ಸ್ಪಷ್ಟ ಸಂದೇಶ



ಕೊಲಂಬಿಯಾವು ಮದುವೆಯ ಕನಿಷ್ಠ ವಯೋಮಿತಿಯನ್ನು 18ಕ್ಕೆ ಏರಿಸಿರುವುದು, ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಮೊದಲು, ಪೋಷಕರ ಅನುಮತಿಯೊಂದಿಗೆ 14 ವರ್ಷ ವಯಸ್ಸಿನ ಮಕ್ಕಳ ವಿವಾಹಕ್ಕೆ ಅವಕಾಶ ಇದ್ದುದು ಮಾನವ ಹಕ್ಕು ಪ್ರತಿಪಾದಕರ ಕಳವಳಕ್ಕೆ ಕಾರಣವಾಗಿತ್ತು... ಈ ಸುಧಾರಣೆಯು ಮಕ್ಕಳ ಹಕ್ಕುಗಳ ಸಂರಕ್ಷಣೆ ಕುರಿತಾದ ಕಾನೂನಿನ ಚೌಕಟ್ಟನ್ನು ಬಲಪಡಿಸುತ್ತದೆ...

ಹರಿಕಿಶನ್ ಜೋಷಿ

ಕಿಡಿನುಡಿ



ವೇಗವಾಗಿ ವಾಹನ ಚಲಾಯಿಸಿ ಎಂದು ಯಾರೋ ನಿಮಗೆ ಹೇಳಿದರು, ಮದ್ಯಪಾನ ಮಾಡಿದ ನಂತರ ಯಾರೋ ವಾಹನ ಚಲಾಯಿಸಿದರು, ಮಾದಕವಸ್ತು ಸೇವಿಸುವಂತೆ ಯಾರೋ ನಿಮ್ಮನ್ನು ಕೇಳಿದರು, ಮದ್ಯ ಸೇವಿಸುವಂತೆ ಯಾರೋ ನಿಮ್ಮನ್ನು ಒತ್ತಾಯಿಸಿದರು, ನಿಮ್ಮ ಮನಸ್ಸು ಒಪ್ಪದ ಕೆಲಸವನ್ನು ಮಾಡುವಂತೆ ಯಾರೋ ನಿಮ್ಮನ್ನು ಪುಸಲಾಯಿಸಿದರು. ಇಂತಹವರು ನಿಮ್ಮ ಸ್ನೇಹಿತರೇ ಅಲ್ಲ. ಎಷ್ಟು ಸಾಧ್ಯವೋ ಅಷ್ಟು ಬೇಗ ಅವರಿಂದ ದೂರವಾಗಿ. #DehradunCarAccident

(ಡೆಹ್ರಾಡೂನ್‌ನಲ್ಲಿ ಪಾರ್ಟಿ ಮುಗಿಸಿ ಹಿಂದಿರುಗುತ್ತಿದ್ದ, ಪಾನಮತ್ತರಾಗಿದ್ದರು ಎನ್ನಲಾದ ವಿದ್ಯಾರ್ಥಿಗಳಿದ್ದ ಕಾರೊಂದು ಲಾರಿಗೆ ಡಿಕ್ಕಿ ಹೊಡೆದು ಸಂಭವಿಸಿದ ಭೀಕರ ಅಪಘಾತದಲ್ಲಿ, ಕಾರಿನಲ್ಲಿದ್ದ 6 ಮಂದಿ ಸಾವಿಗೀಡಾಗಿ ಒಬ್ಬ ಯುವಕ ಗಂಭೀರವಾಗಿ ಗಾಯಗೊಂಡಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ಅರುಣ್ ಬೋತ್ರ, ಐಪಿಎಸ್ ಅಧಿಕಾರಿ

25 ವರ್ಷಗಳ ಹಿಂದೆ

ಮಂಗಳವಾರ, 16-11-1999

• **ಈರುಳ್ಳಿ ಬೆಲೆ ಸ್ಥಿರತೆಗೆ ರೂ. 20 ಕೋಟಿ 'ಆವರ್ತ ನಿಧಿ'**

ಹುಬ್ಬಳ್ಳಿ, ನ. 15– ಬೆಲೆ ಕುಸಿತದಿಂದ ತತ್ತರಿಸಿರುವ ರಾಜ್ಯದ ಈರುಳ್ಳಿ ಬೆಳೆಗಾರರ ರಕ್ಷಣೆ ಸಲುವಾಗಿ 20 ಕೋಟಿ ರೂಪಾಯಿಗಳ 'ಆವರ್ತ ನಿಧಿ' (ರಿವಾಲ್ವಿಂಗ್ ಫಂಡ್) ರಚಿಸಿ ಅದರ ಮೂಲಕ ಮಾರುಕಟ್ಟೆ ಬೆಲೆ ಸ್ಥಿರತೆಗೆ ಕ್ರಮ ಕೈಗೊಳ್ಳಲು ಸರ್ಕಾರ ಉದ್ದೇಶಿಸಿದ್ದು, ಒಂದೆರಡು ದಿನಗಳ ಒಳಗಾಗಿ ಈ ಯೋಜನೆಗೆ ಸ್ಪಷ್ಟ ಸ್ವರೂಪ ನೀಡಿ ಈ ಕುರಿತು ಅಂತಿಮ ನಿರ್ಣಯ ಕೈಗೊಳ್ಳಲಿದೆ.

ಹುಬ್ಬಳ್ಳಿಗೆ ಒಂದು ದಿನದ ಭೇಟಿ ನೀಡಿ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಬಂದ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವ ಎಚ್.ಕೆ. ಪಾಟೀಲ ಅವರು ಇಂದು ಇಲ್ಲಿ ಸುದ್ದಿಗಾರರಿಗೆ ಈ ವಿಚಾರ ತಿಳಿಸಿದರು.

'ಆವರ್ತ ನಿಧಿ' ಯೋಜನೆಯ ರೂಪುರೇಷೆ ತಯಾರಿಸಲಾಗುತ್ತಿದ್ದು ಒಂದೆರಡು ದಿನಗಳಲ್ಲಿ ಇದು ಪೂರ್ಣಗೊಳ್ಳಲಿದ್ದು, ಸಚಿವ ಸಂಪುಟ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದರು.

• **ಎಂಡಿಎನ್ ಅಮಾನತು, ಪುಟ್ಟಣ್ಣಯ್ಯ ಅಧ್ಯಕ್ಷ**

ಶಿವಮೊಗ್ಗ, ನ. 15– ಕರ್ನಾಟಕ ರಾಜ್ಯ ರೈತಸಂಘದ ರಾಜ್ಯ ಸಮಿತಿಯು ತನ್ನ ಅಧ್ಯಕ್ಷ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರನ್ನು ಅಮಾನತು ಮಾಡಿ, ಆ ಸ್ಥಾನಕ್ಕೆ ಮಾಜಿ ಶಾಸಕ ಕೆ.ಎಸ್. ಪುಟ್ಟಣ್ಣಯ್ಯ ಅವರನ್ನು ಹಂಗಾಮಿಯನ್ನಾಗಿ ಇಂದು ಆಯ್ಕೆ ಮಾಡಿದೆ.

ಶಿವಮೊಗ್ಗ ನಗರದ ಹೊರವಲಯದಲ್ಲಿರುವ, ರೈತಸಂಘದ ಸಂಸ್ಥಾಪಕರಲ್ಲಿ ಒಬ್ಬರಾದ ಎಚ್.ಎಸ್. ರುದ್ರಪ್ಪ ಅವರ ಸಮಾಧಿ ಬಳಿ ನಡೆದ ರಾಜ್ಯ ಸಮಿತಿಯ ಪೂರ್ಣ ಸಭೆಯು ಈ ಕುರಿತು ಒಮ್ಮತದ ನಿರ್ಣಯ ಕೈಗೊಂಡಿದೆ.

50 ವರ್ಷಗಳ ಹಿಂದೆ

ಶನಿವಾರ, 16-11-1974

• **ಗುಮಾಸ್ತರು, ರೆವಿನ್ಯೂ ಇನ್‌ಸ್ಪೆಕ್ಟರ್‌ಗಳ ತರಬೇತಿಗೆ ಶಾಲೆಗಳು**

ಬೆಂಗಳೂರು, ನ. 15– ಪ್ರಥಮ ದರ್ಜೆ, ದ್ವಿತೀಯ ದರ್ಜೆ ಗುಮಾಸ್ತರು ಹಾಗೂ ರೆವಿನ್ಯೂ ಇನ್‌ಸ್ಪೆಕ್ಟರ್‌ಗಳಂಥ ಸಿಬ್ಬಂದಿಯನ್ನು ಅವರ ಕೆಲಸದಲ್ಲಿ ಶಾಸ್ತ್ರೀಯ ರೀತಿಯಲ್ಲಿ ತರಬೇತಿಗೊಳಿಸುವ ಶಾಲೆಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ.

ಸಚಿವ ಸಂಪುಟ ಇಂದು ಕೈಗೊಂಡ ನಿರ್ಧಾರದ ಪ್ರಕಾರ, ಪ್ರಾರಂಭಿಕವಾಗಿ ಬೆಂಗಳೂರು, ಮೈಸೂರು, ಧಾರವಾಡ ಮತ್ತು ಕಲ್ಬುರ್ಗಿ ಜಿಲ್ಲೆಗಳಲ್ಲಿ ನಾಲ್ಕು ತರಬೇತಿ ಕೇಂದ್ರಗಳು ಆರಂಭವಾಗಲಿವೆ.

ಈ ಕಾರ್ಯಕ್ರಮಕ್ಕೆ ತಗಲುವ ಅಂದಾಜು ವೆಚ್ಚ ಸುಮಾರು 3.36 ಲಕ್ಷ ರೂಪಾಯಿಗಳು. ಅಂತಿಮವಾಗಿ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿಯೂ ಇಂಥ ಕೇಂದ್ರಗಳ ಸ್ಥಾಪನೆ ಸರ್ಕಾರದ ಉದ್ದೇಶ ಎಂದು ವಕ್ತಾರರು ವರದಿಗಾರರಿಗೆ ತಿಳಿಸಿದರು.

ಸಂಗತ

ಕಿರು ಸಾಲ, ಅಧಿಕ ಒತ್ತಡ

ರಾಜ್ಯದಲ್ಲಿ ಮೈಕ್ರೊಫೈನಾನ್ಸ್ ಸಂಸ್ಥೆಗಳ ಸಂಖ್ಯೆ ಹೆಚ್ಚಾದಂತೆಲ್ಲಾ ಅನಾರೋಗ್ಯಕರ ಸ್ಪರ್ಧೆ ಏರ್ಪಟ್ಟಿದ್ದು, ಸಾಲಗಾರರು ಕಿರುಕುಳ ಅನುಭವಿಸುವಂತೆ ಆಗಿದೆ

• ಅರುಣ್ ಜೋಳದಕೂಡ್ಲಿಗಿ

ಅಸೋಸಿಯೇಷನ್ ಆಫ್ ಕರ್ನಾಟಕ ಮೈಕ್ರೊಫೈನಾನ್ಸ್ ಇನ್‌ಸ್ಟಿಟ್ಯೂಷನ್ಸ್ (ಎಕೆಎಂಐ- ಅಕ್ಮಿ) 'ಕರ್ನಾಟಕದಲ್ಲಿ ಕಿರು ಹಣಕಾಸಿನ ಬೆಳವಣಿಗೆ' 2023ರ ವರದಿಯನ್ನು ಬಿಡುಗಡೆ ಮಾಡಿದೆ. ರಾಜ್ಯದಲ್ಲಿ ಶೇ 89ರಷ್ಟು ಜನ ಕಿರು ಹಣಕಾಸು ಸಂಸ್ಥೆಗಳಲ್ಲಿ (ಮೈಕ್ರೊ ಫೈನಾನ್ಸ್) ಸಾಲ ಪಡೆಯಲು ಇಚ್ಛಿಸುತ್ತಾರೆ ಎಂದು ವರದಿ ಹೇಳುತ್ತದೆ. ಈ ವರದಿಯು ಈ ಸಂಸ್ಥೆಗಳ ಸಾಹಸಗಾಥೆಯನ್ನು ಮಂಡಿಸುತ್ತದೆ. ಅಂತೆಯೇ ಈ ಸಂಸ್ಥೆಗಳಲ್ಲಿ ಸಾಲ ಪಡೆದು ಚಿಕ್ಕಪುಟ್ಟ ವ್ಯಾಪಾರ ಮಾಡಿ ಜೀವನವನ್ನು ಸುಧಾರಿಸಿಕೊಂಡವರೂ ಇದ್ದಾರೆ. ಆದರೆ ಮೈಕ್ರೊ ಫೈನಾನ್ಸ್ ಸಂಸ್ಥೆಗಳ ಸಂಖ್ಯೆ ಹೆಚ್ಚಾದಂತೆಲ್ಲಾ ಅನಾರೋಗ್ಯಕರ ಸ್ಪರ್ಧೆ ಏರ್ಪಟ್ಟಿದೆ.


ಹಿಂದಿನ ಒಂದು ದಶಕದ ಬೆಳವಣಿಗೆಗಳನ್ನು ಗಮನಿಸಿದರೆ, ಕಿರು ಹಣಕಾಸು ಸಂಸ್ಥೆಗಳು ಗ್ರಾಮೀಣ ಭಾಗದಲ್ಲಿ ಒಂದು ರೀತಿಯ ಆತಂಕ ಹುಟ್ಟಿಸಿವೆ. ಸಾಲದ ಕಂತುಗಳನ್ನು ಕಟ್ಟುವ ಒತ್ತಡಕ್ಕೆ ಒಳಗಾಗಿ ಎಷ್ಟೋ ಜನ ಊರು ತೊರೆದಿದ್ದಾರೆ. ಇನ್ನು ಕೆಲವರು ತೀವ್ರ ಮಾನಸಿಕ ಸಂಕಷ್ಟಕ್ಕೆ ಸಿಲುಕಿ ವಿಪರೀತದ ನಿರ್ಧಾರಗಳನ್ನು ಕೈಗೊಂಡಿದ್ದಾರೆ.

ಕಲಬುರಗಿ ನಗರದ ಸಿದ್ಧೇಶ್ವರ ಕಾಲೊನಿಯಲ್ಲಿ 38 ವರ್ಷದ ಮಹಿಳೆಯೊಬ್ಬರು ಆರು ಸಂಸ್ಥೆಗಳಿಂದ ಕಿರುಸಾಲ ಪಡೆದು, ಮರುಪಾವತಿ ಮಾಡಲಾಗದೆ ವಸೂಲಿಗಾರರ ಒತ್ತಡಕ್ಕೆ ಸಿಲುಕಿ ಸೆಪ್ಟೆಂಬರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡರು ಎನ್ನಲಾಗಿದೆ. ಅದೇ ತಿಂಗಳು ಮಂಡ್ಯ ತಾಲ್ಲೂಕಿನ ಹೊಳಲು ಗ್ರಾಮ ಪಂಚಾಯಿತಿ ಎದುರು 25 ಮಹಿಳೆಯರು ಇಂತಹ ಸಂಸ್ಥೆಗಳ ಕಿರುಕುಳ ತಡೆಯಲಾರದೆ, ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ನೇಣಿನ ಕುಣಿಕೆ ಹಿಡಿದು ಪ್ರತಿಭಟಿಸಿದ್ದರು. ಕಡೂರು ತಾಲ್ಲೂಕಿನ ತಂಗಲಿ ಗ್ರಾಮದ 64 ವರ್ಷ ವಯಸ್ಸಿನ ರೈತ ಮಹಿಳೆ ಕಡೂರಿನ ಸಂಸ್ಥೆಯೊಂದರಲ್ಲಿ ₹ 78,000 ಸಾಲ ಪಡೆದಿದ್ದರು. ಬೆಳೆ ಕೈಕೊಟ್ಟ ಕಾರಣಕ್ಕೆ ಸಾಲ ತೀರಿಸಲಾಗದೆ ಹೋದ ವರ್ಷ ಆತ್ಮಹತ್ಯೆ ಮಾಡಿಕೊಂಡರು ಎಂದು ವರದಿಯಾಗಿದೆ. ಸರಿಯಾಗಿ ಪರಿಶೀಲನೆ ಮಾಡಿದರೆ, ಹಿಂದಿನ ದಶಕದಲ್ಲಿ ಕಿರು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದು, ತೀವ್ರ ಕಿರುಕುಳ ಅನುಭವಿಸಿದವರ ಸಂಖ್ಯೆ ಏರಿಕೆಯಾಗುತ್ತಿರುವುದು ತಿಳಿಯುತ್ತದೆ.

ಕೆಲವು ಊರುಗಳನ್ನು ಹತ್ತಾರು ಕಿರು ಹಣಕಾಸು ಸಂಸ್ಥೆಗಳ ಪ್ರತಿನಿಧಿಗಳು ಸಂಪರ್ಕಿಸುತ್ತಾರೆ. ಸಾಲ ಪಡೆಯುವುದನ್ನು ಸಾಧ್ಯವಾದಷ್ಟೂ ಸರಳಗೊಳಿಸಲಾಗಿದೆ. ಬರೀ ಆಧಾರ್ ಕಾರ್ಡ್ ಮಾಹಿತಿ ಇಟ್ಟುಕೊಂಡು ಒಂದೆರಡು ದಿನಗಳಲ್ಲಿ ಸಾಲ ಕೊಡಲಾಗುತ್ತದೆ. ಒಬ್ಬರು ಏಕಕಾಲಕ್ಕೆ ಒಂದಕ್ಕಿಂತ ಹೆಚ್ಚಿನ ಸಂಸ್ಥೆಗಳಿಂದ ಸಾಲ ಪಡೆಯುತ್ತಾರೆ. ಒಂದು ಸಂಸ್ಥೆಯಲ್ಲಿ ಪಡೆದ ಸಾಲ ತೀರಿಸಲು ಮತ್ತೊಂದರಲ್ಲಿ ಸಾಲ, ಅದನ್ನು ತೀರಿಸಲು ಇನ್ನೊಂದರಲ್ಲಿ ಸಾಲ ಹೀಗೆ ಒಂದರೊಳಗೊಂದು ಬೆರೆತು, ಏಕಕಾಲಕ್ಕೆ ಹತ್ತಾರು ಸಂಸ್ಥೆಗಳ ಹಣ ಕಟ್ಟಬೇಕಾಗುತ್ತದೆ. ಬಡ್ಡಿ ದರವನ್ನು ಕೂಡ ಆಯಾ ಸಂಸ್ಥೆಗಳು ಒಂದೊಂದು ರೀತಿ ವಿಧಿಸುತ್ತಿವೆ.

ಗುಂಪು ಸಾಲದಲ್ಲಿ ಯಾರಾದರೂ ಒಬ್ಬರು ಸಾಲ ಪಡೆದರೆ ಆ ಗುಂಪಿನ ಎಲ್ಲರೂ ಅದಕ್ಕೆ ಹೊಣೆಯಾಗಬೇಕಾಗುತ್ತದೆ. ಹೀಗಾಗಿ, ತಾವು ಪಡೆದ ಸಾಲವನ್ನು ಕಟ್ಟುವುದು ಮಾತ್ರವಲ್ಲ, ಆಯಾ ಗುಂಪಿನಲ್ಲಿ ಸಾಲ ಪಡೆದವರ ಮರುಪಾವತಿಯನ್ನು ಸಹ ಮಾಡಿಸಿಕೊಡಬೇಕಾಗುತ್ತದೆ. ಹತ್ತು ಜನರ ಗುಂಪಿನಲ್ಲಿ, ಸಾಲ ಪಡೆದ ಒಬ್ಬರು ಮರುಪಾವತಿ ಮಾಡದಿದ್ದರೆ, ಉಳಿದ ಒಂಬತ್ತು ಜನ ಅವರ ಮನೆಯ ಮುಂದೆ ನಿಂತು ಸಾಲ ವಸೂಲಿ ಮಾಡಬೇಕಾಗುತ್ತದೆ. ಹೀಗೆ ಸಾಲ ಮರುಪಾವತಿ ಕಿರುಕುಳ ಶುರುವಾಗುತ್ತದೆ.

ಈ ಸಂಸ್ಥೆಗಳಿಂದ ನೇಮಕಗೊಂಡಿರುವ ವಸೂಲಿಗಾರರ ಕಿರುಕುಳ ಹಾಗೂ ದಾಳಿಯ ಕಾರಣಕ್ಕೆ ರಾಜ್ಯದಲ್ಲಿ ಹಲವು ನೆಲೆಯ ಹೋರಾಟಗಳು ಶುರುವಾಗಿವೆ. ಮೈಕ್ರೊಫೈನಾನ್ಸ್ ಹೆಸರಿನಲ್ಲಿ ಕೆಲವು ಬೃಹತ್ ಸಂಸ್ಥೆಗಳು ತಮ್ಮ ಕಪ್ಪುಹಣವನ್ನು ಬಿಳಿ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿವೆ ಎಂದು ಚಳವಳಿಗಾರರು ದೂರಿದ್ದಾರೆ. ಅಂತಹ ಹಲವು ಸಂಸ್ಥೆಗಳು ಮೈಕ್ರೊಫೈನಾನ್ಸ್ ಘಟಕಗಳನ್ನು ತೆರೆದು ಹಳ್ಳಿಗಳಿಗೆ ಲಗ್ಗೆ ಇಡುತ್ತಿವೆ ಎಂದು ಹೇಳಲಾಗಿದೆ.



ಅವಿಭಜಿತ ಆಂಧ್ರಪ್ರದೇಶದಲ್ಲಿ ಮೈಕ್ರೊಫೈನಾನ್ಸ್ ಸಂಸ್ಥೆಗಳ ಹಾವಳಿ ಮಿತಿಮೀರಿದ್ದರಿಂದ, 2010ರಲ್ಲಿ ಸುಗ್ರೀವಾಜ್ಞೆ ಮೂಲಕ ಮೈಕ್ರೊಫೈನಾನ್ಸ್ ಸಂಸ್ಥೆಗಳ ನಿಯಂತ್ರಣ ಕಾಯ್ದೆಯನ್ನು ಜಾರಿಗೆ ತರಲಾಯಿತು. ಈ ಕಾಯ್ದೆಯ ಕಟ್ಟುನಿಟ್ಟಿನ ಅನುಷ್ಠಾನದಿಂದಾಗಿ ಮೈಕ್ರೊಫೈನಾನ್ಸ್ ಸಂಸ್ಥೆಗಳು ಆಂಧ್ರದಿಂದ ಕಾಲ್ಕಿತ್ತವು. ಅಂತಹ ಅನೇಕ ಸಂಸ್ಥೆಗಳು ಕರ್ನಾಟಕದಲ್ಲಿ ತಮ್ಮ ಅಂಗಡಿಗಳನ್ನು ತೆರೆದಿವೆ. ಮುಂಬರುವ ದಿನಗಳಲ್ಲಿ ನಮ್ಮ ರಾಜ್ಯದಲ್ಲಿಯೂ ಮೈಕ್ರೊಫೈನಾನ್ಸ್ ಸಂಸ್ಥೆಗಳಿಂದ ಪಡೆದ ಸಾಲ ತೀರಿಸಲಾಗದೆ, ಸಾಲ ವಸೂಲಾತಿಯ ಕಟ್ಟುಪಾಡುಗಳಿಂದ ತೀವ್ರ ತೊಂದರೆ ಅನುಭವಿಸುವವರ ಸಂಖ್ಯೆ ಏರಿಕೆಯಾಗುವ ಸಾಧ್ಯತೆ ನಿಚ್ಚಳವಾಗಿದೆ. ಆಂಧ್ರ ಸರ್ಕಾರ ಜಾರಿಗೊಳಿಸಿದ ಮೈಕ್ರೊಫೈನಾನ್ಸ್ ನಿಯಂತ್ರಣ ಕಾಯ್ದೆಯ ಮಾದರಿಯಲ್ಲಿ ನಮ್ಮ ರಾಜ್ಯ ಸರ್ಕಾರವೂ ಈ ಫೈನಾನ್ಸ್ ಸಂಸ್ಥೆಗಳ ಚಟುವಟಿಕೆಗಳ ಮೇಲೆ ನಿಯಂತ್ರಣ ಹೇರಬೇಕಿದೆ.

ವಾಚಕರ ವಾಣಿ

ಸಂಚಾರ ಪೊಲೀಸರ ಮೇಲೆ ಹಲ್ಲೆ ಖಂಡನೀಯ

ಕರ್ತವ್ಯನಿರತ ಸಂಚಾರ ಪೊಲೀಸ್ ಕಾನ್‌ಸ್ಟೆಬಲ್ ಮೇಲೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಮಹಿಳೆಯೊಬ್ಬರು ಹಲ್ಲೆ ನಡೆಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಅ. 28). ಸಂಚಾರ ನಿಯಮ ಉಲ್ಲಂಘನೆ ಮಾಡಿದವರನ್ನು ಪ್ರಶ್ನಿಸುವುದು ಪೊಲೀಸರ ಕರ್ತವ್ಯ. ಆದರೆ ಈ ಮಹಿಳೆ ನಿಯಮ ಉಲ್ಲಂಘನೆ ಮಾಡಿದ್ದೂ ಅಲ್ಲದೆ ಸಂಚಾರ ಪೊಲೀಸರನ್ನೇ ಅವಾಚ್ಯ ಪದಗಳಿಂದ ನಿಂದಿಸಿದ್ದಾರೆ. ಅಲ್ಲದೆ ಕಾಲಿನಿಂದ ಒದ್ದು, ಅವರ ಕಾಲರ್ ಹಿಡಿದು ಕೂಗಾಡಿರುವುದು ಅಕ್ಷಮ್ಯ. ಈ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಇತರ ಇಬ್ಬರು ಪೊಲೀಸರು ಮತ್ತು ಹೊಯ್ಸಳ ವಾಹನದ ಸಿಬ್ಬಂದಿ ಮಹಿಳೆಯನ್ನು ತಡೆಯುವ ಪ್ರಯತ್ನವನ್ನು ಕೂಡ ಮಾಡಲಿಲ್ಲ. ಪೊಲೀಸರಿಂದ ಪೊಲೀಸರಿಗೇ ರಕ್ಷಣೆ ಇಲ್ಲವೆಂದಾದರೆ ಸಾಮಾನ್ಯ ಜನರ ಗತಿ ಏನು?

ಅದೇ ರೀತಿ ಶಿವಮೊಗ್ಗದಲ್ಲಿ ಕೂಡ ನಿಯಮ ಉಲ್ಲಂಘಿಸಿದ ಕಾರನ್ನು ತಡೆಯಲು ಯತ್ನಿಸಿದ ಕಾನ್‌ಸ್ಟೆಬಲ್ ಮೇಲೆ ಕಾರು ಚಲಾಯಿಸಲು ಮುಂದಾಗಿರುವುದು ನಡೆದಿದೆ. ಹೀಗಾದರೆ ಸಂಚಾರ ಪೊಲೀಸರು ಕರ್ತವ್ಯ ನಿರ್ವಹಿಸುವುದಾದರೂ ಹೇಗೆ? ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಿ, ಇಂತಹ ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳಬೇಕು.

ತಿಮ್ಮೇಶ್ ಎಚ್. ಗೌರಿಪುರ, ಜಗಳೂರು

ಕೃಷಿ ಜಮೀನು ಖರೀದಿ: ನಿಯಂತ್ರಣ ಅಗತ್ಯ

ರೈತರು ಬರೀ ಬೆಳೆಗಾರರಾದರಷ್ಟೇ ಸಾಲದು ಕೃಷಿ ಉದ್ದಿಮೆಗಳಲ್ಲಿಯೂ ಗುರುತಿಸಿಕೊಳ್ಳಬೇಕು ಎಂಬ ಚಿಂತನೆಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯುತ್ತಿರುವ ಕೃಷಿ ಮೇಳ ನಿದರ್ಶನವಾಗಿದೆ. ಜನಸಾಮಾನ್ಯರಿಗೆ ಕೈಗೆಟಕುವ ದರದಲ್ಲಿ ಗುಣಮಟ್ಟದ ಹಾಗೂ ತಾಜಾ ಆಹಾರ ಪೂರೈಕೆ ಮಾಡುವುದು ಕೃಷಿ ಹಾಗೂ ಕೃಷಿ ಉದ್ಯಮಕ್ಕೆ ಸವಾಲಾಗಿದೆ. ಹೀಗಿರುವಾಗ, ಫಲವತ್ತಾದ ಜಮೀನುಗಳನ್ನು ಕೈಗಾರಿಕೆ ಸ್ಥಾಪನೆಗೆ ಸರ್ಕಾರ ಸ್ವಾಧೀನಪಡಿಸಿಕೊಳ್ಳುವುದನ್ನು ಕೈಬಿಡಬೇಕು. ರೈತರಿಂದಲೇ 'ಕೃಷಿಗೆ ಪೂರಕವಾದ' ಉದ್ದಿಮೆಗಳನ್ನು ನಡೆಸಲು ಅನುವಾಗುವಂತಹ ವಾತಾವರಣವನ್ನು ಸೃಷ್ಟಿಸಿ ಪ್ರೋತ್ಸಾಹಿಸಿದರೆ ಅವರು ಸುಸ್ಥಿರ ಅಭಿವೃದ್ಧಿ ಸಾಧಿಸಲು ಹಾಗೂ ಆರ್ಥಿಕವಾಗಿ ಮುಂದುವರಿಯಲು ಸಾಧ್ಯವಾಗುತ್ತದೆ.

ಇತ್ತೀಚೆಗೆ, ಹಣವಂತರು ಹೂಡಿಕೆ ದೃಷ್ಟಿಯಿಂದ ಕೃಷಿ ಜಮೀನುಗಳನ್ನು ಖರೀದಿ ಮಾಡುತ್ತಿರುವುದು ಹೆಚ್ಚಾಗಿದೆ. ಇದರಿಂದ ದೀರ್ಘಾವಧಿಯಲ್ಲಿ ಬೇರೆ ಬೇರೆ ಬಗೆಯ ದುಷ್ಪರಿಣಾಮಗಳು ಎದುರಾಗುವ ಸಾಧ್ಯತೆ ಇದೆ. ನಿಯಂತ್ರಣದ ದಿಸೆಯಲ್ಲಿ ಸರ್ಕಾರ ಗಂಭೀರವಾಗಿ ಯೋಚಿಸಬೇಕು. ಸಣ್ಣ ಹಿಡುವಳಿದಾರರ ಹಿತರಕ್ಷಣೆಗೆ ಮಾರ್ಗೋಪಾಯಗಳನ್ನು ಶೋಧಿಸಬೇಕು.

ಜಿ.ಬೈರೇಗೌಡ, ಕೊಡಿಗೇಹಳ್ಳಿ, ನೆಲಮಂಗಲ

ಹೀಗೂ ಇರಬಹುದು ಜಾಹೀರಾತು!

'ಮದ್ಯ ಕುಡಿಯದ ಚಾಲಕರು ಬೇಕಾಗಿದ್ದಾರೆ' ಎಂದು, ಶಾಲಾ ವಾಹನ ಓಡಿಸುವ ಚಾಲಕರನ್ನು ಉದ್ದೇಶಿಸಿ ಜಾಹೀರಾತು ನೀಡಬೇಕಾದ ಅಗತ್ಯ ಬಂದಿದೆ ಎಂದು ಹೇಳಿರುವ ವ್ಯಂಗ್ಯಚಿತ್ರ 'ಚಿನಕುರುಳಿ'ಯಲ್ಲಿ (ಪ್ರ.ವಾ., ನ. 15) ಪ್ರಕಟವಾಗಿದೆ. ಮದ್ಯವ್ಯಸನ ಈಗ ಮಾಮೂಲಿ ಸಂಗತಿ ಎನ್ನುವಂತಾಗಿದೆ. ಅದರೊಂದಿಗೆ ಇದೀಗ ಮೊಬೈಲ್ ಫೋನ್‌ನಲ್ಲಿ ಮಾತನಾಡುತ್ತಾ ವಾಹನ ಚಲಾಯಿಸುವ ಮತ್ತೊಂದು ಗೀಳು ಕೆಲವರಿಗೆ ಅಂಟಿಕೊಂಡಿದೆ.

ಖಾಸಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳನ್ನು ಕರೆದೊಯ್ಯುವ ಕೆಲ ವಾಹನಗಳ ಹಿಂದೆ 'ಇದರಲ್ಲಿ ಅಮೂಲ್ಯ ರತ್ನಗಳಿವೆ' ಎಂದು ಬರೆಸಿರುತ್ತಾರೆ. ಅಪಘಾತಕ್ಕೆ ಆಸ್ಪದವಾಗದಿರಲಿ ಎನ್ನುವ ಆಶಯ ಇದರ ಹಿಂದೆ ಇರುತ್ತದೆ. ಆದರೆ ಆ ಎಲ್ಲ ರತ್ನಗಳನ್ನು ಜತನದಿಂದ ಸೇರಿಸಬೇಕಾದ ಜಾಗಕ್ಕೆ ಸೇರಿಸುವ ಹೊಣೆ ಹೊತ್ತ ಚಾಲಕರೇ ಮೊಬೈಲ್ ಫೋನ್ ಹಿಡಿದು ಮಾತನಾಡುತ್ತಾ ವಾಹನ ಚಲಾಯಿಸುವುದು ವಿಪರ್ಯಾಸ. ಹೀಗೆ ವಾಹನ ಚಲಾಯಿಸುವಾಗ ಅಪಘಾತ ಸಂಭವಿಸಿರುವ ಎಷ್ಟೋ ಉದಾಹರಣೆಗಳು ನಮ್ಮ ಮುಂದಿವೆ. ಆದರೂ ಈ ಬಗ್ಗೆ ಎಚ್ಚೆತ್ತುಕೊಳ್ಳದಿರುವುದು ವಿಪರ್ಯಾಸ. ಇದಕ್ಕೂ ಮದ್ದು ಕಂಡುಹಿಡಿಯಬೇಕಾದ ಅಥವಾ 'ಮೊಬೈಲ್ ಫೋನ್‌ನಲ್ಲಿ ಮಾತನಾಡದೇ ವಾಹನ ಓಡಿಸುವ ಚಾಲಕರು ಬೇಕಾಗಿದ್ದಾರೆ' ಎಂಬ ಜಾಹೀರಾತು ನೀಡಬೇಕಾದ ಅಗತ್ಯ ಬಂದಿದೆ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

ಫುಟ್‌ಪಾತ್ ಒತ್ತುವರಿ ಹಿಂದಿನ 'ಪ್ರಬಲ'ರು

ಪಾದಚಾರಿ ಮಾರ್ಗ ಒತ್ತುವರಿಗೆ ಪರಿಹಾರ ಕಷ್ಟಸಾಧ್ಯ ಎಂದಿದ್ದಾರೆ (ವಾ.ವಾ., ನ. 15) ಕಡೂರು ಫಣಿಶಂಕರ್. ಕೆಲವೆಡೆ ಪಾದಚಾರಿ ಮಾರ್ಗವನ್ನು ಬರೀ ಒತ್ತುವರಿಯಲ್ಲ, ಸಂಪೂರ್ಣವಾಗಿ ಆಕ್ರಮಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಮೈಸೂರು ನಗರದ ಮುಖ್ಯ ವಾಣಿಜ್ಯ ರಸ್ತೆಯಾದ ಸಯ್ಯಾಜಿರಾವ್ ರಸ್ತೆ ಇದಕ್ಕೊಂದು ಉದಾಹರಣೆ. ಜನಸಾಮಾನ್ಯರು ಓಡಾಡಲು ಇರುವ ಫುಟ್‌ಪಾತನ್ನು ಆಕ್ರಮಿಸಿಕೊಂಡು ವ್ಯಾಪಾರ ಮಾಡುವವರನ್ನು ಯಾವ ಪಕ್ಷದ ನೇತೃತ್ವದ ಸರ್ಕಾರ ಬಂದರೂ ಎತ್ತಂಗಡಿ ಮಾಡಿಸಲು ಸಾಧ್ಯವೇ ಆಗಿಲ್ಲ. ಮೈಸೂರಿನಲ್ಲಿ ರಸ್ತೆಬದಿ ವ್ಯಾಪಾರಿಗಳ ಸಂಘವೇ ಇದೆ. ಈ ಸಂಘ ಎಷ್ಟು ಪ್ರಬಲವಾಗಿದೆ ಎಂದರೆ, ರಸ್ತೆಬದಿಯ ಒಬ್ಬ ವ್ಯಾಪಾರಿಯನ್ನು ಪೊಲೀಸರು ಎತ್ತಂಗಡಿ ಮಾಡಿಸಿದರೂ ಅವರಿಗೆ ಯಾವುದೇ ರೀತಿಯ ತೊಂದರೆ ಕೊಡದಂತೆ ಎರಡೇ ನಿಮಿಷದಲ್ಲಿ ಜನಪ್ರತಿನಿಧಿಗಳಿಂದ ಪೊಲೀಸರಿಗೆ ಕರೆ ಬರುತ್ತದೆ! ಈ ಬಗ್ಗೆ ಜನಪ್ರತಿನಿಧಿಗಳಿಗೆ ಅಥವಾ ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಿದರೆ, 'ಆ ಬಡ ವ್ಯಾಪಾರಿಗಳ ಹೊಟ್ಟೆಯ ಮೇಲೆ ನೀವೇಕೆ ಹೊಡೆಯುತ್ತೀರಿ' ಎಂದವರು ಕೇಳುತ್ತಾರೆ. ಇದು ಎಲ್ಲ ನಗರ, ಪಟ್ಟಣಗಳ ಫುಟ್‌ಪಾತ್ ಸಮಸ್ಯೆಯಾಗಿದ್ದು, ಯಾರೇ ಬಂದರೂ ಇದನ್ನು ಬಗೆಹರಿಸಲು ಸಾಧ್ಯವಿಲ್ಲವೇನೋ ಎನಿಸುತ್ತದೆ.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಬುಲ್ಡೋಜರ್ ಬಳಸಿ ಕಟ್ಟಡ ಕೆಡವುವ ದಿಢೀರ್ ಶಿಕ್ಷೆಯ ಮಾದರಿ ಮತ್ತು ಸುಪ್ರೀಂ ಕೋರ್ಟ್ ತೀರ್ಪಿನ ವಿಶ್ಲೇಷಣೆಗಳು

ಮದೋನ್ಮತ್ತ ಅಧಿಕಾರದ ಕ್ರೌರ್ಯ

● ನಾರಾಯಣ ಎ



‘ಬುಲ್ಡೋಜರ್ ನ್ಯಾಯ’ ಎಂದು ಹೇಳುವಾಗ, ಬುಲ್ಡೋಜರ್ ಎಂಬ ಪದ ಪ್ರಯೋಗ ಸರಿಯಾಗಿಯೇ ಇದೆ. ಆದರೆ ಅದರ ಜತೆಗೆ ‘ನ್ಯಾಯ’ ಎನ್ನುವ ಪದವನ್ನು ಜೋಡಿಸುವುದು ವಿರೋಧಾಭಾಸಕರ ಮಾತ್ರವಲ್ಲ ಅನರ್ಥಕಾರಿ ಕೂಡಾ. ಯಾಕೆಂದರೆ ಬುಲ್ಡೋಜರ್ ನ್ಯಾಯ ಎಂದಾಗ ಬುಲ್ಡೋಜರ್ ಹರಿಸಿ ನ್ಯಾಯ ನೀಡಲಾಗಿದೆ ಎನ್ನುವ ಅರ್ಥ ಬರುತ್ತದೆ. ಬುಲ್ಡೋಜರ್ ಮೂಲಕ ದಾಳಿಗಳನ್ನು ನಡೆಸುವುದರಿಂದ ನೀಡಿದ್ದು ನ್ಯಾಯವನ್ನಲ್ಲ, ಅನ್ಯಾಯವನ್ನು, ಕ್ರೌರ್ಯವನ್ನು... ಸುಪ್ರೀಂ ಕೋರ್ಟ್ ಕೂಡಾ ಇದನ್ನೇ ಹೇಳಿದ್ದು.

ಅಪ್ರಬುದ್ಧ, ಅನಾಗರಿಕ ಮತ್ತು ಪಕ್ಷಪಾತಿ ರಾಜಕಾರಣ ಇದ್ದಲ್ಲಿ ಇಂತಹ ಅನ್ಯಾಯದ ಪರಂಪರೆಗಳೆಲ್ಲಾ ಹುಟ್ಟಿಕೊಳ್ಳುವುದು ಸಹಜ. ಆದರೆ ಅದನ್ನು ‘ನ್ಯಾಯ’ ಅಂತ ಅರಿತೋ ಅರಿಯದೆಯೋ ಕರೆಯುವುದು ಮತ್ತು ಅದರ ಹಿಂದಿರುವ ರಾಜಕೀಯದ ವಿರುದ್ಧ ವಿಸ್ತೃತ ಜನಸಮೂಹ ಹೇಸಿಗೆ ಪಡದೇ ಇರುವುದು ಇಡೀ ಸಮಾಜವೇ ಎಂತಹ ಸಂವೇದನಾ ಶೂನ್ಯ ಸ್ಥಿತಿಯಲ್ಲಿದೆ ಎನ್ನುವುದನ್ನು ತೋರಿಸುತ್ತದೆ ಮತ್ತು ಮಾಧ್ಯಮಗಳು ಎಷ್ಟು ವಿವೇಚನಾ ಶೂನ್ಯವಾಗಿ ಹೋಗಿವೆ ಎನ್ನುವುದನ್ನು ಸಾರುತ್ತದೆ. ಕೊನೆಗೂ ನ್ಯಾಯಾಂಗ ಹೇಳಬೇಕಾದದ್ದನ್ನು ಹೇಳಿದೆ, ಮಾಡಬೇಕಾದದ್ದನ್ನು ಮಾಡಿದೆ. ಅಂದರೆ, ಬುಲ್ಡೋಜರ್ ಅನ್ಯಾಯದ ಅಸಂಗತ ನಾಟಕದ ಸುದೀರ್ಘ ಒಂದನೇ ಅಂಕ ಮುಗಿದಿದೆ. ಹಾಗಂತ ಇಡೀ ನಾಟಕವೇ ಮುಗಿದಿದೆ ಅಂತ ಭಾವಿಸಿದರೆ ಆತುರದ ತೀರ್ಮಾನ ಆದೀತು.

ನ್ಯಾಯಾಂಗ ಹೇಳಿದ್ದು ಅಂತಿಮ ಎನ್ನುವ ಕಾಲವೊಂದಿತ್ತು. ಆ ಕಾಲದ ರಾಜಕೀಯ ಬೇರೆಯೇ ಇತ್ತು. ಈ ಕಾಲದ ರಾಜಕೀಯದಲ್ಲಿ ರಾಜಕೀಯದಲ್ಲಿದ್ದವರು ಮಾಡಿದ್ದೇ ಅಂತಿಮ. ನ್ಯಾಯಾಂಗವಲ್ಲ, ಸ್ವತಃ ಈ ವಿಶ್ವದ ನಿಯಾಮಕ ಶಕ್ತಿಯೇ ಧರೆಗಿಳಿದು ಬಂದು ವಿವೇಕವನ್ನು ಬೋಧಿಸಿದರೂ ಅದು ಅಂತಿಮವೆಂದೋ, ಅನುಷ್ಠಾನಗೊಳ್ಳುತ್ತದೆಯೆಂದೋ ಅರ್ಥವಲ್ಲ. ಹಾಗಾಗಿ, ಮುಂದಿನ ಅಂಕ ಹೇಗೆ ಅನಾವರಣಗೊಳ್ಳುವುದು ಎನ್ನುವ ಕುತೂಹಲವನ್ನು ಉಳಿಸಿಕೊಳ್ಳುತ್ತಲೇ ಈಗಾಗಲೇ ಸುಪ್ರೀಂ ಕೋರ್ಟ್‌ನ ತೀರ್ಪಿನೊಂದಿಗೆ ಅಂತ್ಯಗೊಂಡ ಮೊದಲ ಅಂಕದಲ್ಲಿ ನಡೆದುಹೋದ ಸಮಗ್ರ ಬೆಳವಣಿಗೆಗಳ ರಾಜಕೀಯ ಆಯಾಮಗಳನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಬಿಜೆಪಿಯ ಡಬಲ್ ಎಂಜಿನ್ ಸರ್ಕಾರಗಳು ಇರುವ ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಹರಿಯಾಣ ಮುಂತಾದೆಡೆಗಳಲ್ಲಿ ಪ್ರಮುಖವಾಗಿ ನಡೆದಿರುವ ಈ ಇಡೀ ಅನ್ಯಾಯದ ಕ್ರೂರ ಪ್ರಹಸನಕ್ಕೆ ನಾಲ್ಕೈದು ವರ್ಷಗಳ ಇತಿಹಾಸವಿದೆ. ಆರಂಭದಲ್ಲಿ ಕುಖ್ಯಾತ ಕ್ರಿಮಿನಲ್ ವ್ಯಕ್ತಿಗಳಿಗೆ ಸೇರಿದ ಕಟ್ಟಡಗಳನ್ನು ಕೆಡವಲಾಯಿತು. ಆ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟಲಾಗಿತ್ತು ಎನ್ನುವ ಸಮಜಾಯಿಷಿ ಬರುತ್ತಿತ್ತು. ಕ್ರಿಮಿನಲ್‌ಗಳ ವಿರುದ್ಧ ಕೊನೆಗೂ ಖಡಕ್ ಕ್ರಮ ಆಗುತ್ತಿದೆ ಅಂತ ಜನ ಸಮಾಧಾನ ಪಟ್ಟರು. ಜನರ ಮೆಚ್ಚುಗೆ ಮುಂದೆ ವೋಟುಗಳಾಗಲಿವೆ ಎಂದು ಆಳುವ ಪಕ್ಷ ಸಂಭ್ರಮಿಸಿತು. ಕೆಡವಿದ್ದು ಅಕ್ರಮ ಕಟ್ಟಡಗಳನ್ನು ಎಂದಾದರೆ ಅಕ್ರಮ ಕಟ್ಟಡ ತಲೆ ಎತ್ತಲು ಅವಕಾಶ ನೀಡಿದ್ದು ಯಾಕೆ ಎನ್ನುವ ಪ್ರಶ್ನೆ ಯಾರೂ ಕೇಳಲಿಲ್ಲ. ಅಕ್ರಮವಾಗಿ ಕಟ್ಟಿದ ಕಟ್ಟಡಗಳೇ ಆಗಿದ್ದರೂ, ಅವು ಕ್ರಿಮಿನಲ್‌ಗಳಿಗೆ ಸೇರಿದ್ದರೂ ಕಟ್ಟಡ ಕೆಡವುದಕ್ಕೆ ಅನುಸರಿಸಬೇಕಿರುವ ಕಾನೂನು ಕ್ರಮಗಳಿವೆ. ಅವುಗಳನ್ನು ಅನುಸರಿಸಲಾಗಿದೆಯೇ ಅಂತ ಯಾರೂ ಕೇಳಲಿಲ್ಲ. ಕ್ರಿಮಿನಲ್‌ಗಳಿಗೆ ಸೇರಿದ ಅಕ್ರಮ ಕಟ್ಟಡಗಳಾದರೆ ಅವುಗಳನ್ನು ಕೆಡಹುವುದು, ಕ್ರಿಮಿನಲ್‌ಗಳಲ್ಲದವರ ಅಕ್ರಮ ಕಟ್ಟಡಗಳಾದರೆ ಬಿಟ್ಟುಬಿಡುವುದು ಎನ್ನುವುದು ಯಾವ ನ್ಯಾಯ ಅಂತ ಯಾರೂ ಕೇಳಲಿಲ್ಲ. ಅಷ್ಟಕ್ಕೂ ಕ್ರಿಮಿನಲ್ ವ್ಯಕ್ತಿಗಳನ್ನು ಅವರ ಮನೆಗಳನ್ನು ಕೆಡವುದರ ಮೂಲಕ ಮಟ್ಟಹಾಕಬೇಕು ಎನ್ನುವ ಕಾನೂನು ಎಲ್ಲಿದೆ ಎಂದೂ ಯಾರೂ ಕೇಳಲಿಲ್ಲ. ‘ಪಾಪಿ ಮಕ್ಕಳಿಗೆ ಧರ್ಮಾತ್ಮರಾದ ತಂದೆ ತಾಯಂದಿರು, ಅಣ್ಣ-ತಮ್ಮಂದಿರು ಇರಬಹುದು - ಅವರನ್ನೂ ಅಕ್ಷರಶಃ ಬೀದಿಗೆ ತಳ್ಳುವುದು ಅನ್ಯಾಯ’ ಅಂತ ಸುಪ್ರೀಂ ಕೋರ್ಟ್ ಈಗ ಹೇಳಿದೆ. ಬಹಳ ತಡವಾಗಿ!

> ಹಗಲಲ್ಲೇ ಕೊಲೆ ಮಾಡಿದವರನ್ನು ಶಿಕ್ಷಿಸಲೂ ಸಾಕ್ಷಿ ದೊರಕದೆ ಹೋಗುವ ಈ ದೇಶದಲ್ಲಿ, ಯಾರೋ ಕಿಡಿಗೇಡಿಗಳು ಯಾವ ಪ್ರೇರಣೆಯಿಂದಲೋ ಅಥವಾ ದುರುದ್ದೇಶದಿಂದಲೋ ನಡೆಸುವ ದಾಂದಲೆಗಳಲ್ಲಿ ಯಾರನ್ನೋ ಸಂಶಯದಿಂದ ಬಂಧಿಸುವುದು, ತತ್ ಕ್ಷಣ ಅವರ ಮನೆಯನ್ನು ಬುಲ್ಡೋಜರ್ ಬಳಸಿ ನೆಲಸಮ ಮಾಡುವುದು ಅಧಿಕಾರದ ಮದೋನ್ಮತ್ತತೆಯ ಪರಾಕಾಷ್ಠೆ. ಇದು ತಪ್ಪು, ಇದನ್ನು ಈಗಿಂದೀಗಲೇ ನಿಲ್ಲಿಸಬೇಕು ಅಂತ ಹೇಳಲು ಈ ದೇಶದ ಸರ್ವಶಕ್ತ ನ್ಯಾಯಾಂಗಕ್ಕೆ ಇಷ್ಟು ಸಮಯ ಬೇಕಾಯಿತು ಎನ್ನುವುದೇ ಚೋದ್ಯ

ಕುಖ್ಯಾತ ಕ್ರಿಮಿನಲ್‌ಗಳಿಗೆ ಪಾಠ ಕಲಿಸಲು ಎಂದು ಪ್ರಾರಂಭ ಆದ ಬುಲ್ಡೋಜರ್ ಕ್ರೌರ್ಯ ಆ ನಂತರ ವಿಕಾರವಾದ ಕೋಮು ಆಯಾಮವನ್ನು ಪಡೆದುಕೊಳ್ಳುತ್ತದೆ ಮತ್ತು ಮುಸ್ಲಿಂ ಸಮುದಾಯದವರ ಮನೆಗಳು ಬುಲ್ಡೋಜರ್ ಕಾರ್ಯಾಚರಣೆಯ ಮುಖ್ಯ ಗುರಿಗಳಾಗುತ್ತವೆ. ‘ನಾವು ಯಾರಿಗೆ ಹೇಗೆ ಬುದ್ದಿ ಕಲಿಸುತಿದ್ದೇವೆ ನೋಡಿ, ನಾವು ಯಾರನ್ನು ಎಲ್ಲಿಡುತ್ತೇವೆ ನೋಡಿ’ ಎನ್ನುವ ಸಂದೇಶ ರವಾನಿಸಿ ಬಹುಸಂಖ್ಯಾತರ ಓಟುಗಳನ್ನು ಗಟ್ಟಿಮಾಡಿಕೊಳ್ಳುವ ರಾಜಕೀಯದ ಮುಖವಾಗಿ ಬುಲ್ಡೋಜರ್ ವಿಜ್ರಂಭಿಸುತ್ತದೆ. ಬುಲ್ಡೋಜರ್ ಅನ್ಯಾಯದ ಸಂತ್ರಸ್ತರು ಬಹುತೇಕ ಪ್ರಕರಣಗಳಲ್ಲಿ ಮುಸ್ಲಿಮರೇ ಆಗಿರುವುದನ್ನು ಗುರುತಿಸಿದ ಪಂಜಾಬ್--ಹರಿಯಾಣ ಹೈಕೋರ್ಟ್, ಒಂದು ಹಂತದಲ್ಲಿ ‘ಇದೇನಿದು, ಈ ದೇಶದಲ್ಲಿ ಜನಾಂಗೀಯ ಶುದ್ಧೀಕರಣಕ್ಕೆ ಹೊರಟಿದ್ದೀರಾ’ (ಅಂದರೆ ಒಂದು ಸಮುದಾಯದವರನ್ನು ಸಂಪೂರ್ಣ ನಾಶ ಮಾಡಬೇಕು ಅಂತ ಹೊರಟಿದ್ದೀರಾ) ಎಂದು ನೇರವಾಗಿ ಕೇಳಿದ್ದೂ ಆಯಿತು.

ಕೋಮುಗಲಭೆಗಳು ಸಂಭವಿಸುತ್ತವೆಯೇ ಅಥವಾ ಅವುಗಳನ್ನು ಸೃಷ್ಟಿಸಲಾಗುತ್ತಿದೆಯೇ ಎನ್ನುವ ಪ್ರಶ್ನೆ ಸ್ವಾತಂತ್ರ್ಯ ಪೂರ್ವದಿಂದಲೂ ಉತ್ತರವಿಲ್ಲದೆ ಉಳಿದಿದೆ. ಪೊಲೀಸರು ಇಂತಹ ಗಲಭೆಗಳಾದಾಗ ಹೇಗೆ ನಡೆದುಕೊಳ್ಳುತ್ತಾರೆ? ಯಾರ್ಯಾರ ಮೇಲೆ, ಹೇಗೆಲ್ಲಾ ಕೇಸು ದಾಖಲಿಸುತ್ತಾರೆ ಎನ್ನುವುದು ಎಲ್ಲರಿಗೂ ಗೊತ್ತು. ಹಾಡಹಗಲಲ್ಲೇ ಕೊಲೆ ಮಾಡಿದವರನ್ನು ಶಿಕ್ಷಿಸಲು ಕೂಡಾ ಸಾಕ್ಷಿ ದೊರಕದೆ ಹೋಗುವ ಈ ದೇಶದಲ್ಲಿ ಬಹಳಷ್ಟು ಜನ ಸೇರಿರುವಲ್ಲಿ ಯಾರೋ ಒಂದಷ್ಟು ಮಂದಿ ಕಿಡಿಗೇಡಿಗಳು ಯಾವ ಪ್ರೇರಣೆಯಿಂದಲೋ, ಯಾರ ಒತ್ತಾಸೆಯಿಂದಲೋ, ಯಾವ ಅಪಾರ್ಥ ಕಲ್ಪಿಸಿಕೊಂಡೋ ಅಥವಾ ಸ್ಪಷ್ಟ ಕ್ರಿಮಿನಲ್ ಉದ್ದೇಶಗಳಿಂದಲೋ ನಡೆಸುವ ದಾಂದಲೆಗಳಲ್ಲಿ ಯಾರನ್ನೋ ಸಂಶಯ ಮಾತ್ರದಿಂದ ಬಂಧಿಸುವುದು, ತತ್ ಕ್ಷಣ ಅಂಥವರ ಮನೆಯನ್ನು ಬುಲ್ಡೋಜರ್ ಬಳಸಿ ನೆಲಸಮ ಮಾಡುವುದು ರಾಜಕೀಯ ಅಧಿಕಾರದ ಮದೋನ್ಮತ್ತತೆಯ ಪರಾಕಾಷ್ಠೆ. ಇದು ತಪ್ಪು, ಇದನ್ನು ಈಗಿಂದೀಗಲೇ ನಿಲ್ಲಿಸಬೇಕು ಅಂತ ಸ್ಪಷ್ಟವಾಗಿ ಹೇಳಲು ಈ ದೇಶದ ಸರ್ವಶಕ್ತ ನ್ಯಾಯಾಂಗಕ್ಕೆ ಇಷ್ಟು ಸಮಯ ಬೇಕಾಯಿತು ಎನ್ನುವುದೇ ಒಂದು ಚೋದ್ಯ.

ರಾಜಕೀಯ ಪಕ್ಷಗಳು ಬೀದಿಗಿಳಿಯಬೇಕಿದ್ದ ವಿಚಾರ ಇದು. ಬದಲಿಗೆ, ಅದ್ಯಾವುದೋ ಚಾಳಿ ಮನೆ ಮಂದಿಗೆಲ್ಲಾ ಎಂಬಂತೆ ಮಧ್ಯಪ್ರದೇಶ ಮತ್ತು ರಾಜಸ್ಥಾನಗಳಲ್ಲಿ ಈ ಅವಧಿಯುದ್ದಕ್ಕೆ ಆಗಿ ಹೋದ ಕಾಂಗ್ರೆಸ್ ಸರ್ಕಾರಗಳೂ ಕೆಲ ಪ್ರಕರಣದಲ್ಲಿ ಬುಲ್ಡೋಜರ್ ದಾಳಿ ನಡೆಸಿ ಶೌರ್ಯ ಪ್ರದರ್ಶಿಸಿವೆ. ಈಗ ತೀರ್ಪು ಬಂದ ಮೇಲೆ ನ್ಯಾಯಾಲಯದ ನೆರಳಲ್ಲಿ ನಿಂತು ವಿರೋಧ ಪಕ್ಷದ ನಾಯಕರೆಲ್ಲಾ ಹಿಂದೆ ಆಗಿ ಹೋಗಿದ್ದನ್ನು ಖಂಡಿಸುತ್ತಿದ್ದಾರೆ. ಏನು ಪ್ರಯೋಜನ?

ಅನಧಿಕೃತ ಮತ್ತು ಅಕ್ರಮವಾಗಿ ಮನೆ ಅಥವಾ ಕಟ್ಟಡಗಳನ್ನು ನಿರ್ಮಿಸುವುದರ ವಿರುದ್ಧ, ಮತೀಯ ಗಲಭೆ ಸೃಷ್ಟಿಸುವವರ ವಿರುದ್ಧ, ಅದಕ್ಕೆ ಪ್ರಚೋದಿಸುವವರ ವಿರುದ್ಧ, ಅದರಲ್ಲಿ ಉದ್ದೇಶಪೂರ್ವಕ ಪಾಲ್ಗೊಳ್ಳುವವರ ವಿರುದ್ಧ ಕ್ರಮ ಕ್ರಮಕೈಗೊಳ್ಳಲೆಂದೇ ಸರ್ಕಾರಗಳು ಇರುವುದು. ಹಾಗೆಂದು ಕ್ರಮಕೈಗೊಳ್ಳುವ ನೆಪದಲ್ಲಿ ಚುನಾಯಿತ ಸರ್ಕಾರವೊಂದು ಅಕ್ಷರಶಃ ಉನ್ಮಾದ ಪ್ರದರ್ಶಿಸುವುದು, ಕಠಿಣ ಸಂದೇಶ ರವಾನಿಸುವ ಹೆಸರಲ್ಲಿ ಸಂದೇಹ ಮಾತ್ರದಿಂದ ಒಂದು ನಿರ್ದಿಷ್ಟ ಸಮುದಾಯಕ್ಕೆ ಸೇರಿದವರ ಮನೆಗಳನ್ನು ಎರ್ರಾಬಿರ್ರಿಯಾಗಿ ಕೆಡವಿ ಶೌರ್ಯ ಪ್ರದರ್ಶನ ಮಾಡುವುದು, ಕೆಡವುವ ಪ್ರಕ್ರಿಯೆಯಲ್ಲಿ ಬ್ಯಾಂಡು, ವಾದ್ಯ, ನಗಾರಿ ಬಾರಿಸಿ ಅದನ್ನೊಂದು ಜಾತ್ರೆಯಂತೆ ನಡೆಸುವುದು ಇವೆಲ್ಲವೂ ನಿಲ್ಲಬೇಕು ಎಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದರೆ ಇಂತಹದ್ದೆಲ್ಲಾ ನಮ್ಮ ಕಣ್ಣ ಮುಂದೆ ಇಷ್ಟು ಕಾಲ ಅವ್ಯಾಹತವಾಗಿ ನಡೆಯಲು ಸಾಧ್ಯವಾಯಿತು ಎನ್ನುವುದು ನಮ್ಮ ನಾಗರಿಕತೆಯ ಮಟ್ಟವನ್ನು ಜಗಜ್ಜಾಹೀರುಗೊಳಿಸಿದೆ.

ಲೇಖಕ: ರಾಜಕೀಯ ವಿಶ್ಲೇಷಕ

ಪ್ರಜಾವಾಣಿ ಚರ್ಚೆ

‘ವಿಳಂಬ ನ್ಯಾಯ’ದ ಭರವಸೆ ಬೆಳಕು

● ಕೆ.ವಿ. ಧನಂಜಯ್



ಬುಲ್ಡೋಜರೊಂದು ಮನೆಯತ್ತ ಬರುತ್ತಿದೆ ಎನ್ನುವುದೇ ದಿಗಿಲು ಹುಟ್ಟಿಸುತ್ತದೆ. ವರ್ಷಗಳ ಉಳಿತಾಯದಿಂದ ನಿರ್ಮಿಸಿದ, ಮಕ್ಕಳು ಬೆಳೆದ, ಹಬ್ಬಗಳನ್ನು ಆಚರಿಸಿದ, ನೋವುಗಳನ್ನು ಹಂಚಿಕೊಂಡ ನೆನಪುಗಳನ್ನು ಹೊಂದಿರುವ ಮನೆಯನ್ನು, ಕುಟುಂಬದ ಯಾರೋ ಒಬ್ಬರು ಅಪರಾಧವೊಂದರಲ್ಲಿ ಭಾಗಿಯಾದ ಆರೋಪ ಹೊತ್ತಿದ್ದಾರೆ ಎಂಬ ಕಾರಣಕ್ಕೆ ನೆಲಸಮ ಮಾಡಲು ನಿರ್ಧರಿಸಲಾಗಿದೆ ಎಂಬುದನ್ನು ಊಹಿಸಿಕೊಳ್ಳಿ. 2024ರ ನವೆಂಬರ್ 13ರಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡುವಲ್ಲಿವರೆಗೆ ಭಾರತದ ಹಲವು ಕುಟುಂಬಗಳು ಈ ಭೀತಿಯನ್ನು ಎದುರಿಸಿವೆ.

ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರು ಬರೆದ ತೀರ್ಪು ಪ್ರತಿಯೊಬ್ಬರಲ್ಲಿಯೂ ಇರುವ ಮನೆಯೊಂದನ್ನು ಹೊಂದುವ ಕನಸಿನ ಕುರಿತ ಕವಿತೆಯೊಂದರ ಮೂಲಕ ಆರಂಭವಾಗುತ್ತದೆ. ಯಾರು ಅಪರಾಧಿ ಮತ್ತು ಯಾವ ಶಿಕ್ಷೆ ವಿಧಿಸಬೇಕು ಎಂಬುದನ್ನು ನ್ಯಾಯಾಲಯಗಳು ಮಾತ್ರ ತೀರ್ಮಾನಿಸಲು ಸಾಧ್ಯ ಎಂಬ ಮೂಲಭೂತ ತತ್ವವನ್ನೇ ಉಲ್ಲಂಘಿಸಿ, ದಿಢೀರ್ ಶಿಕ್ಷೆಯ ಅಸ್ತ್ರವಾಗಿ ಬುಲ್ಡೋಜರ್‌ಗಳನ್ನು ಸರ್ಕಾರಗಳು ಬಳಸಲು ಆರಂಭಿಸಿದ ಬಳಿಕ ಹಲವು ಕುಟುಂಬಗಳಿಗೆ ಮನೆಯ ಕನಸು ದುಃಸ್ವಪ್ನದಂತೆ ಕಾಡಿದೆ. ನಮ್ಮ ಪ್ರಜಾಪ್ರಭುತ್ವದ ಮೂಲಭೂತ ತತ್ವವೊಂದನ್ನು ನ್ಯಾಯಾಲಯವು ಎತ್ತಿ ತೋರಿಸಿದೆ: ವ್ಯಕ್ತಿಯು ಎಸಗಿದ ಅಪರಾಧಕ್ಕೆ ಮಾತ್ರ ಶಿಕ್ಷೆ ವಿಧಿಸಬಹುದು ಮತ್ತು ಹಾಗೆ ಶಿಕ್ಷೆ ವಿಧಿಸಲು ನ್ಯಾಯಾಲಯಕ್ಕೆ ಮಾತ್ರ ಅವಕಾಶ ಇದೆ, ಕಾರ್ಯಾಂಗಕ್ಕೆ ಇಲ್ಲ. ಪ್ರಸ್ತುತ, ಈ ದೇಶದಲ್ಲಿ ಯಾವುದೇ ಅಪರಾಧ ಕೃತ್ಯದ ಆರೋಪಿಗೂ ಆತ ವಾಸಿಸುವ ಮನೆಯನ್ನು ಅಧಿಕಾರಿಗಳು ಕೆಡವಬಹುದು ಎಂಬ ಶಿಕ್ಷೆ ಇಲ್ಲ. ಹಾಗಾಗಿ, ಕೆಲವು ಅಪರಾಧ ಕೃತ್ಯಗಳ ಆರೋಪ ಹೊತ್ತ ಹಲವು ಆರೋಪಿಗಳ ಮನೆಗಳನ್ನು ವಿವಿಧ ರಾಜ್ಯಗಳಲ್ಲಿ ಧ್ವಂಸ ಮಾಡಿರುವುದು ಕಾನೂನುಬಾಹಿರ; ನ್ಯಾಯಾಲಯದಲ್ಲಿ ಅಪರಾಧವು ಸಾಬೀತಾಗುವ ಮುನ್ನವೇ ಈ ಶಿಕ್ಷೆಯನ್ನು ವಿಧಿಸಲಾಗಿದೆ. ಒಂದು ವೇಳೆ ಅಪರಾಧವು ಸಾಬೀತಾಗಿ, ಮೇಲ್ಮನವಿಯೂ ತಳ್ಳಿ ಹೋದರೂ ಅವರು ಎಸಗಿದ್ದ ಶಿಕ್ಷೆಗೆ ಕೆಲವು ವರ್ಷಗಳ ಸಜೆ ಮತ್ತು ದಂಡದ ಶಿಕ್ಷೆ ಮಾತ್ರ ಇತ್ತು.

ಹಾಗಿದ್ದರೆ, ಮನೆಯೊಂದನ್ನು ಅಕ್ರಮವಾಗಿ ನಿರ್ಮಿಸಿ, ಕೆಡವುವಿಕೆಯಿಂದ ಅದನ್ನು ರಕ್ಷಿಸಿಕೊಳ್ಳಬಹುದು ಎಂಬುದು ತೀರ್ಪಿನ ಅರ್ಥವೇ? ಇಲ್ಲ. ಮನೆಯನ್ನು ಅಕ್ರಮವಾಗಿ ನಿರ್ಮಿಸಿದ್ದರೆ, ಅಧಿಕಾರಿಗಳು ಈ ಕುರಿತು ಪರಿಶೀಲನೆ ನಡೆಸಿ, ಅಗತ್ಯ ಕ್ರಮ ಕೈಗೊಂಡು, ಮನೆ ನಿರ್ಮಿಸಿದ ವ್ಯಕ್ತಿಯ ವಾದವೇನು ಎಂಬುದನ್ನು ಆಲಿಸಿ, ಮೇಲ್ಮನವಿಗೆ ಬೇಕಾದಷ್ಟು ಸಮಯ ನೀಡಿ, ಮೇಲ್ಮನವಿಯೂ ವಜಾಗೊಂಡರೆ, ಅವರು ಬೇರೊಂದು ಮನೆಗೆ ಸ್ಥಳಾಂತರಗೊಳ್ಳಲು ಸಮಯ ನೀಡಿ ಮನೆಯನ್ನು ಧ್ವಂಸ ಮಾಡಬಹುದು. ಸುಪ್ರೀಂ ಕೋರ್ಟ್‌ನ ಮುಂದೆ ಇದ್ದದ್ದು ರಾತ್ರೋರಾತ್ರಿ ಕಟ್ಟಡಗಳನ್ನು ಧ್ವಂಸಗೊಳಿಸಿದ್ದ ಪ್ರಕರಣಗಳು.

> ನ್ಯಾಯದಾನ ಬಹಳ ವಿಳಂಬವಾಯಿತು ಎಂದು ಮನೆಯನ್ನು ಕಳೆದುಕೊಂಡವರಿಗೆ ಅನಿಸಬಹುದು. ತಮ್ಮದೇ ಆದ ಮನೆಯನ್ನು ಹೊಂದುವ ಕನಸಿಗೆ ಸಂವಿಧಾನ ಮತ್ತು ನ್ಯಾಯಾಲಯಗಳ ರಕ್ಷಣೆ ಇದೆ ಎಂದು ಇತರ ಲಕ್ಷಾಂತರ ಜನರಿಗೆ ಈ ತೀರ್ಪು ಖಾತರಿ ಕೊಟ್ಟಿದೆ. ದಿಢೀರ್ ನ್ಯಾಯದ ಅಸ್ತ್ರವಾಗಿ ಬುಲ್ಡೋಜರ್ ಇನ್ನು ಮುಂದೆ ಬಳಕೆಯಾಗದು. ಕೊನೆಯದಾಗಿ, ಭೀತಿ ಹುಟ್ಟಿಸುವ ಆಳ್ವಿಕೆಯಲ್ಲ, ಕಾನೂನಿನ ಆಳ್ವಿಕೆ ಉಳಿಯಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ನಮಗೆ ನೆನಪಿಸಿಕೊಟ್ಟಿದೆ

ಕಳವಳದ ವಿಚಾರ ಹೀಗಿದೆ: ಸುಪ್ರೀಂ ಕೋರ್ಟ್ ಕ್ರಮ ಕೈಗೊಳ್ಳಲು ಇಷ್ಟೊಂದು ದೀರ್ಘ ಸಮಯವನ್ನು ತೆಗೆದುಕೊಂಡದ್ದು ಏಕೆ? ಶಿಕ್ಷೆಯ ಭಾಗವಾಗಿ ಬುಲ್ಡೋಜರ್ ಬಳಕೆಯ ಮಾದರಿಯು ಕೆಲವು ವರ್ಷಗಳ ಹಿಂದೆಯೇ ಬಹಿರಂಗವಾಗಿತ್ತು. ಇನ್ನೂ ಹೆಚ್ಚು ಕಳವಳಕಾರಿ ಎಂದರೆ, ಇಂತಹ ಕೃತ್ಯಗಳು ನಡೆದ ರಾಜ್ಯಗಳ ಹೈಕೋರ್ಟ್‌ಗಳ ಮೌನ. ಕೆಲಸದಿಂದ ವಜಾಗೊಳಿಸುವುದಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಿಗೆ ಇರುವ ರಕ್ಷಣೆಯನ್ನೇ ಹೈಕೋರ್ಟ್‌ನ ನ್ಯಾಯಮೂರ್ತಿಗಳಿಗೂ ನಮ್ಮ ಸಂವಿಧಾನವು ನೀಡಿದೆ. ಹಾಗಾಗಿ, ಅವರು ಯಾವುದೇ ಭಯಕ್ಕೆ ಒಳಗಾಗದೆ ನಾಗರಿಕರ ಹಕ್ಕುಗಳನ್ನು ರಕ್ಷಿಸಬಹುದು. ಹಾಗಿದ್ದರೂ ನಾಗರಿಕರಿಗೆ ನೆರವು ಅಗತ್ಯವಾಗಿ ಬೇಕಿದ್ದಾಗ ಸಂಬಂಧಪಟ್ಟ ಹೈಕೋರ್ಟ್‌ಗಳು ಮನೆಗಳು ಕುಸಿದು ಬೀಳುತ್ತಿರುವುದನ್ನು ಮೌನವಾಗಿ ನೋಡುತ್ತಾ ನಿಂತವು.

‘ಅಕ್ರಮವಾಗಿ ನಿರ್ಮಾಣವಾದ ಕಟ್ಟಡಗಳು’ ಎಂಬ ಕಾರಣಕ್ಕೆ ಧ್ವಂಸ ಮಾಡಲಾಗಿದೆ ಎಂದು ಅಧಿಕಾರಿಗಳು ಹೇಳಿಕೊಂಡಿದ್ದಾರೆ. ನಿರ್ದಿಷ್ಟ ಮನೆಗಳನ್ನು ಮಾತ್ರ ಧ್ವಂಸ ಮಾಡಿ, ಸಮೀಪದಲ್ಲಿಯೇ ಇರುವ ಇದೇ ರೀತಿಯಲ್ಲಿ ನಿರ್ಮಾಣವಾದ ಕಟ್ಟಡಗಳನ್ನು ಮುಟ್ಟದೇ ಇರುವಾಗ ಅಕ್ರಮ ಕಟ್ಟಡ ಎಂಬ ನೆಪವು ಸಂದೇಹ ಮೂಡಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ತೀರ್ಪಿನಲ್ಲಿ ಹೀಗೆ ಹೇಳಲಾಗಿದೆ: ‘ಕೆಡವಲು ಕಟ್ಟಡವನ್ನು ದಿಢೀರ್ ಗುರುತಿಸಿ, ಅದೇ ರೀತಿಯಲ್ಲಿ ಮತ್ತು ಅದೇ ಪ್ರದೇಶದಲ್ಲಿ ನಿರ್ಮಾಣವಾದ ಇತರ ಕಟ್ಟಡಗಳನ್ನು ಮುಟ್ಟದೇ ಇರುವಾಗ ಇದು ದುರುದ್ದೇಶಪೂರಿತ ಎಂಬುದು ಎದ್ದು ಕಾಣುತ್ತದೆ’.

ನ್ಯಾಯಾಲಯವು ರೂಪಿಸಿರುವ ಹೊಸ ಮಾರ್ಗಸೂಚಿ ಸಮಗ್ರವಾಗಿದೆ. ನೋಟಿಸ್ ನೀಡದೆ ಯಾವುದನ್ನೂ ಕೆಡವುವಂತಿಲ್ಲ. ನೋಟಿಸ್ ನೀಡಿದ ಬಳಿಕ 15 ದಿನಗಳ ಗಡುವು ಇರಬೇಕು. ವ್ಯಕ್ತಿಯು ತಮ್ಮ ವಾದ ಮಂಡಿಸಲು ಅವಕಾಶ ಕೊಡುವುದು ಕಡ್ಡಾಯ. ಧ್ವಂಸಗೊಳಿಸುವ ಆದೇಶ ನೀಡಲು ವಿವರವಾದ ಕಾರಣಗಳು ಇರಬೇಕು. ಧ್ವಂಸಗೊಳಿಸುವ ಪ್ರಕ್ರಿಯೆಯ ವಿಡಿಯೊ ಚಿತ್ರೀಕರಣ ಮಾಡಬೇಕು. ಎಲ್ಲಕ್ಕಿಂತ ಮುಖ್ಯವಾಗಿ, ಅಕ್ರಮ ಕಟ್ಟಡಗಳ ಕೆಡವುವಿಕೆಗೆ ಅಧಿಕಾರಿಗಳೇ ವೈಯಕ್ತಿಕವಾಗಿ ಹೊಣೆಗಾರರು– ಕಟ್ಟಡ ಕೆಡವಿದ್ದು ಸರಿಯಲ್ಲ ಎಂದು ಸಾಬೀತಾದರೆ, ಮರುನಿರ್ಮಾಣದ ವೆಚ್ಚವನ್ನು ಅಧಿಕಾರಿಗಳು ತಮ್ಮ ಜೇಬಿನಿಂದಲೇ ಭರಿಸಬೇಕು.

ಆದರೆ, ಇನ್ನೂ ಪ್ರಶ್ನೆಗಳು ಇವೆ. ಪೊಲೀಸರು ಮತ್ತು ಸ್ಥಳೀಯಾಡಳಿತ ಸಂಸ್ಥೆಗಳು ‘ಅಕ್ರಮ’ ಕಟ್ಟಡಗಳನ್ನು ಹೇಗೆ ಗುರುತಿಸಬೇಕು ಎಂಬುದಕ್ಕೆ ತೀರ್ಪಿನಲ್ಲಿ ಸಮರ್ಪಕ ವಿವರಗಳು ಇಲ್ಲ. ಯಾವ ಮಾನದಂಡಗಳನ್ನು ಅವರು ಅನುಸರಿಸಬೇಕು? ನಿರ್ದಿಷ್ಟ ಮನೆಗಳನ್ನು ಅವರು ಹೇಗೆ ಗುರುತಿಸಬೇಕು? ಈ ವಿಚಾರಗಳ ಕುರಿತು ಇನ್ನೂ ಆಳವಾದ ಪರಿಶೀಲನೆ ಅಗತ್ಯ ಇದೆ.

ಮನೆಗಳನ್ನು ಬುಲ್ಡೋಜರ್‌ನಿಂದಾಗಿ ಈಗಾಗಲೇ ಕಳೆದುಕೊಂಡವರಿಗೆ ಈ ತೀರ್ಪು ತೀರಾ ವಿಳಂಬವಾಯಿತು. ಆದರೆ, ಭವಿಷ್ಯದಲ್ಲಿ, ನಿರ್ಣಾಯಕವಾದ ರಕ್ಷಣೆಯನ್ನು ತೀರ್ಪು ನೀಡಿದೆ. ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ವಸತಿಯು ಮೂಲಭೂತ ಹಕ್ಕು ಎಂದು ಹೇಳಿದೆ ಎಂಬುದನ್ನು ಕೋರ್ಟ್ ಪುನರುಚ್ಚರಿಸಿದೆ. ಮನೆ ಎಂದರೆ ಅದೊಂದು ಕಟ್ಟಡ ಮಾತ್ರವಲ್ಲ– ಅದು ವರ್ಷಗಳ ಉಳಿತಾಯ, ಕನಸುಗಳು ಮತ್ತು ಆಕಾಂಕ್ಷೆಗಳ ಪ್ರತೀಕವಾಗಿದೆ. ‘ಮನೆಯೊಂದನ್ನು ಹೊಂದಿರುವುದು ಅಥವಾ ತಲೆಯ ಮೇಲೆ ಸೂರು ಇರುವುದು ಯಾವುದೇ ವ್ಯಕ್ತಿಗೆ ನೆಮ್ಮದಿಯನ್ನು ನೀಡುತ್ತದೆ. ಇದು ಘನತೆಯ ಭಾವದ ಜೊತೆಗೆ ತಾನು ಇಲ್ಲಿಗೆ ಸೇರಿದವನು ಎಂಬ ಭಾವವನ್ನೂ ಉಂಟು ಮಾಡುತ್ತದೆ’ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಕೋರ್ಟ್ ನೀಡಿದ ಸಂದೇಶ ಸ್ಪಷ್ಟವಾಗಿದೆ: ನಮ್ಮದು ಸಾಂವಿಧಾನಿಕ ಪ್ರಜಾಪ್ರಭುತ್ವ. ಅತ್ಯಂತ ಪ್ರಭಾವಿ ವ್ಯಕ್ತಿ ಕೂಡ ಕಾನೂನಿನ ಮುಂದೆ ತಲೆ ಬಾಗಲೇಬೇಕು. ಎಷ್ಟೇ ಉನ್ನತ ಅಧಿಕಾರಿಯೇ ಆಗಿರಲಿ ಅವರು ನ್ಯಾಯತೀರ್ಮಾನಕಾರ, ನ್ಯಾಯಾಧೀಶ ಮತ್ತು ತೀರ್ಪು ಜಾರಿ ಮಾಡುವವನು ಆಗಲು ಸಾಧ್ಯವೇ ಇಲ್ಲ. ಲಾರ್ಡ್ ಡೆನಿಂಗ್ಸ್ ಅವರ ಪ್ರಸಿದ್ಧ ಮಾತುಗಳನ್ನು ತೀರ್ಪಿನಲ್ಲಿ ಉಲ್ಲೇಖಿಸಲಾಗಿದೆ:‘ಅತ್ಯಂತ ಕಡುಬಡವ ತನ್ನ ಗುಡಿಸಲಿನಲ್ಲಿ ಕುಳಿತು ಅರಸನ ಇಡೀ ಸೈನ್ಯಕ್ಕೆ ಸವಾಲು ಒಡ್ಡಬಹುದು’.

ನ್ಯಾಯದಾನ ಬಹಳ ವಿಳಂಬವಾಯಿತು ಎಂದು ಮನೆಯನ್ನು ಕಳೆದುಕೊಂಡವರಿಗೆ ಅನಿಸಬಹುದು. ತಮ್ಮದೇ ಆದ ಮನೆಯನ್ನು ಹೊಂದುವ ಕನಸಿಗೆ ಸಂವಿಧಾನ ಮತ್ತು ನ್ಯಾಯಾಲಯಗಳ ರಕ್ಷಣೆ ಇದೆ ಎಂದು ಇತರ ಲಕ್ಷಾಂತರ ಜನರಿಗೆ ಈ ತೀರ್ಪು ಖಾತರಿ ಕೊಟ್ಟಿದೆ. ದಿಢೀರ್ ನ್ಯಾಯದ ಅಸ್ತ್ರವಾಗಿ ಬುಲ್ಡೋಜರ್ ಇನ್ನು ಮುಂದೆ ಬಳಕೆಯಾಗದು. ಕೊನೆಯದಾಗಿ, ಭೀತಿ ಹುಟ್ಟಿಸುವ ಆಳ್ವಿಕೆಯಲ್ಲ, ಕಾನೂನಿನ ಆಳ್ವಿಕೆ ಉಳಿಯಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ನಮಗೆ ನೆನಪಿಸಿಕೊಟ್ಟಿದೆ.

ಲೇಖಕ: ಸುಪ್ರೀಂ ಕೋರ್ಟ್‌ನಲ್ಲಿ ವಕೀಲ

ಶಿವರಾಜ್‌ಕುಮಾರ್ ನಟನೆಯ ಗತ್ತು ಮೇಳೈಸಿದ ‘ರಣಗಲ್’

ನಾವು ನೋಡಿದ ಸಿನಿಮಾ

‘ನಾನು ಮಾಡದೇ ಇರೋ ಕೊಲೆಯ ಐ ವಿಟ್ನೆಸ್ ಅಂತೆ’ ಎನ್ನುತ್ತಾ ‘ಭೈರತಿ ರಣಗಲ್’ ಎರಡು ಕಣ್ಣುಗುಡ್ಡೆಗಳಿದ್ದ ಬಾಟಲಿಯೊಂದನ್ನು ಟೇಬಲ್ ಮೇಲೆ ಇಟ್ಟಾಗ ‘ಮಫ್ತಿ’ ಸಿನಿಮಾದಲ್ಲಿ ಟೇಬಲ್ ಮೇಲಿಟ್ಟ ಎರಡು ಕತ್ತರಿಸಿದ ಕೈಗಳು ನೆನಪಾಗುತ್ತವೆ. ‘ಭೈರತಿ ರಣಗಲ್’ ಡೈಲಾಗ್‌ನಲ್ಲಿ ಅದೇ ಧಾಟಿ, ಅದೇ ತೀಕ್ಷ್ಣ ಕಣ್ಣುಗಳು. ನರ್ತನ್ ಈ ರೀತಿ ‘ಭೈರತಿ ರಣಗಲ್’ ಒಳಗೆ ‘ಮಫ್ತಿ’ಯನ್ನು ಹೆಣೆದಿದ್ದಾರೆ. 2017ರಲ್ಲಿ ತೆರೆಕಂಡ ಶ್ರೀಮುರಳಿ ನಟನೆಯ ‘ಮಫ್ತಿ’ಯ ಪ್ರೀಕ್ವೆಲ್ ಆಗಿರುವ ‘ಭೈರತಿ ರಣಗಲ್’ ಊಹಿಸಬಹುದಾದ ಕಥೆಯನ್ನು ಹೇಳಿದೆಯಾದರೂ ಶಿವರಾಜ್‌ಕುಮಾರ್ ನಟನೆಯ ಗತ್ತನ್ನು ಮತ್ತೆ ಮೇಳೈಸಿದೆ.

‘ಮಫ್ತಿ’ಯಲ್ಲಿನ ‘ಭೈರತಿ ರಣಗಲ್’ ಎಂಬ ಪಾತ್ರದ ಹುಟ್ಟಿನ ಕಥೆಯನ್ನು ಈ ಸಿನಿಮಾ ಹೇಳಿದೆ. ರಮೇಶ್ ಅರವಿಂದ್ ಹಿನ್ನೆಲೆ ಧ್ವನಿಯಲ್ಲಿ ರೋಣಾಪುರ ಎಂಬ ಊರಿನಲ್ಲಿ 1985ರಲ್ಲಿ ಚಿತ್ರದ ಕಥೆ ಆರಂಭವಾಗುತ್ತದೆ. ಹನಿ ನೀರಿಗೂ ಒದ್ದಾಡುವ ಊರಿದು. ‘ಭೈರತಿ ರಣಗಲ್’ ಎಂಬ ಬಾಲಕ ಇದೇ ಊರಿನಾತ. ಆತನ ತಂದೆ ನೀರಿನ ಸೌಕರ್ಯ ಒದಗಿಸಲು ಸರ್ಕಾರಕ್ಕೆ ಪ್ರತಿನಿತ್ಯವೂ ಮನವಿ ಸಲ್ಲಿಸುತ್ತಿರುತ್ತಾನೆ. ಇದಕ್ಕೆ ಪ್ರತ್ಯುತ್ತರ ದೊರಕದಾಗ ‘ರಣಗಲ್’ ಒಂದು ದಿನ ಸರ್ಕಾರಿ ಕಚೇರಿಗೇ ಬಾಂಬ್ ಇಟ್ಟು ಆರು ಅಧಿಕಾರಿಗಳನ್ನು ಹತ್ಯೆ ಮಾಡುತ್ತಾನೆ. 21 ವರ್ಷದ ಶಿಕ್ಷೆ ಅನುಭವಿಸಿ ‘ರಣಗಲ್’(ಶಿವರಾಜ್‌ಕುಮಾರ್) ಹೊರಬಂದ ನಂತರ ಕಥೆಯ ಆರಂಭ. ವಕೀಲನಾಗಿದ್ದ ‘ಭೈರತಿ ರಣಗಲ್’ ಅದಿರು ಸಾಮ್ರಾಜ್ಯದ ‘ಪರಾಂಡೆ’(ರಾಹುಲ್ ಬೋಸ್) ಎಂಬಾತನನ್ನು ಎದುರು ಹಾಕಿಕೊಂಡಾಗ ಕಥೆಗೆ ತಿರುವು. ವಕೀಲನಾಗಿ ರಕ್ಷಕನಾಗಿದ್ದ ‘ಭೈರತಿ ರಣಗಲ್’ ಏಕೆ ರಾಕ್ಷಸನಾಗಿ ತನ್ನ ‘ರಣಗಲ್ ಸಾಮ್ರಾಜ್ಯ’ವನ್ನು ವಿಸ್ತರಿಸಿದ ಎನ್ನುವುದೇ ಉಳಿದ ಕಥೆ.

‘ಮಫ್ತಿ’ಯಲ್ಲಿ ‘ಭೈರತಿ ರಣಗಲ್’ ಪಾತ್ರವನ್ನು ನರ್ತನ್ ಸೆಳೆಯುವಂತೆ ಕೆತ್ತಿದ್ದರು. ಈ ಸಿನಿಮಾದಲ್ಲಿ ಆ ಪಾತ್ರವನ್ನೇ ಕೇಂದ್ರವಾಗಿಟ್ಟುಕೊಂಡು ಕಥೆ ವಿಸ್ತರಿಸಿದ್ದಾರೆ. ಚಿತ್ರದ ಮೊದಲಾರ್ಧದ ಚಿತ್ರಕಥೆಗೆ ವೇಗವಿಲ್ಲ. ರಕ್ಷಕ ‘ಭೈರತಿ ರಣಗಲ್’ ಪ್ರವೇಶಕ್ಕೆ ಯಾವುದೇ ಅಬ್ಬರವಿಲ್ಲ. ಇದನ್ನು ಬಹಳ ಎಚ್ಚರಿಕೆಯಿಂದಲೇ ನಿರ್ದೇಶಕರು ನಿಭಾಯಿಸಿದ್ದಾರೆ. ನೇರವಾಗಿ ಶಿವರಾಜ್‌ಕುಮಾರ್ ಪರಿಚಯವಿದೆ. ದ್ವಿತೀಯಾರ್ಧಕ್ಕೆ ವೇದಿಕೆ ಹಾಕಿಕೊಡುವುದಕ್ಕೆ ನಿರ್ದೇಶಕರು ಇದನ್ನು ಬಳಸಿಕೊಂಡಿದ್ದಾರೆ. ಮಧ್ಯಂತರ ಆಗಮಿಸುತ್ತಿದ್ದಂತೆ ರಾಕ್ಷಸ ‘ಭೈರತಿ ರಣಗಲ್’ ತೆರೆಗೆ ಬಂದಾಗ ಆ ಪಾತ್ರದ ಗತ್ತು ಬದಲಾಗುತ್ತದೆ. ‘ಮಫ್ತಿ’ಯ ಶಿವರಾಜ್‌ಕುಮಾರ್ ಮತ್ತೆ ತೆರೆ ಮೇಲೆ ಮೇಳೈಸಿದ್ದಾರೆ.



ಟ್ರೇಲರ್, ಪೋಸ್ಟರ್‌ನಲ್ಲೇ ಶಿವರಾಜ್‌ಕುಮಾರ್ ಕಣ್ಣುಗಳಲ್ಲೇ ನಟಿಸಿದ್ದಾರೆ. ಸಾಹಸ ದೃಶ್ಯಗಳಲ್ಲಿ ಅವರ ವಯಸ್ಸು ಮರೆಯಾಗಿದೆ. ಭಾವನೆಗಳಲ್ಲಿ ಮಿಂದಿದ್ದಾರೆ. ಪಂಚ್ ಲೈನ್‌ಗಳಿಂದ ಕೂಡಿದ, ಅಭಿಮಾನಿಗಳನ್ನು ರೋಮಾಂಚನಗೊಳಿಸುವ, ಶಿಳ್ಳೆ–ಚಪ್ಪಾಳೆಯ ಸುರಿಮಳೆಗೈಯುವ ಹಲವು ದೃಶ್ಯಗಳು ದ್ವಿತೀಯಾರ್ಧದಲ್ಲಿವೆ.

ತಾಂತ್ರಿಕವಾಗಿ ಈ ಸಿನಿಮಾ ತುಂಬಾ ಚೆನ್ನಾಗಿದೆ. ವಕೀಲರ ಪಾತ್ರಕ್ಕೆ ಬಣ್ಣಹಚ್ಚಿರುವುದು ತಿಳಿದ ಕಾರಣ, ಜೈಲಿನೊಳಗೆ ಹೋದ ‘ರಣಗಲ್’ ಏನಾಗುತ್ತಾನೆ ಎನ್ನುವುದನ್ನು ಸಸ್ಪೆನ್ಸ್ ಆಗಿ ಉಳಿಸಿಕೊಳ್ಳಲು ಚಿತ್ರಕಥೆಗೆ ಸಾಧ್ಯವಾಗಿಲ್ಲ. ಜೊತೆಗೆ ತಂಗಿಯ ಗಂಡ ಕಟುಕ, ಆತನನ್ನು ‘ಭೈರತಿ ರಣಗಲ್’ ಕೊಲ್ಲುತ್ತಾನೆ ಎನ್ನುವುದು ಮೊದಲೇ ತಿಳಿದಿತ್ತು. ಹೀಗಾಗಿ ಆ ಪಾತ್ರದ ಜೊತೆಗೆ ವರದ (ಗೋಪಾಲಕೃಷ್ಣ ದೇಶಪಾಂಡೆ) ಎಂಬ ಪಾತ್ರವನ್ನು ಸೂಕ್ಷ್ಮವಾಗಿ ಹೆಣೆದಿದ್ದಾರೆ ನರ್ತನ್. ‘ಮಫ್ತಿ’ಯಂತೆ ಈ ಸಿನಿಮಾದಲ್ಲಿ ಸೀಟಿನಂಚಿನಲ್ಲಿ ಕೂರಿಸುವಂಥ ಕಥೆಯಿಲ್ಲ. ‘ಭೈರತಿ ರಣಗಲ್’ ಪಾತ್ರಕ್ಕೇ ಒತ್ತುನೀಡಿ ಕಥೆ ಹೆಣೆಯಲಾಗಿದೆ. ತಂಗಿ ಹಾಗೂ ನಾಯಕಿಯ ಪಾತ್ರದ ಬರವಣಿಗೆಯನ್ನು ಗಟ್ಟಿಗೊಳಿಸಬಹುದಿತ್ತು. ಉಳಿದ ನಟರು ತಮ್ಮ ಪಾತ್ರಗಳಿಗೆ ನ್ಯಾಯ ಒದಗಿಸಿದ್ದಾರೆ. ಹಾಸ್ಯದ ಅಂಶವೇ ಇಲ್ಲ. ಬಾಲಕನ ಶಿಕ್ಷೆಯ ಅವಧಿ, ‘ರಣಗಲ್’ಗೆ ಬಾಂಬುಗಳು ಎಲ್ಲಿ ಸಿಕ್ಕವು ಎನ್ನುವುದು ಮುಂತಾದ ಕೆಲ ದೃಶ್ಯಗಳು ಪ್ರಶ್ನೆಯಾಗಿಯೇ ಉಳಿಯುತ್ತವೆ.

ಭೈರತಿ ರಣಗಲ್ (ಕನ್ನಡ)

- ನಿರ್ಮಾಣ: ಗೀತಾ ಶಿವರಾಜ್‌ಕುಮಾರ್
- ನಿರ್ದೇಶನ: ನರ್ತನ್
- ತಾರಾಗಣ: ಶಿವರಾಜ್‌ಕುಮಾರ್, ರುಕ್ಮಿಣಿ ವಸಂತ್, ರಾಹುಲ್ ಬೋಸ್, ಗೋಪಾಲಕೃಷ್ಣ ದೇಶಪಾಂಡೆ, ಅವಿನಾಶ್, ಛಾಯಾ ಸಿಂಗ್, ಮಧು ಗುರುಸ್ವಾಮಿ, ಬಾಬು ಹಿರಣ್ಣಯ್ಯ

ನವೀನ್ ಕುಮಾರ್ ಛಾಯಾಚಿತ್ರಗ್ರಹಣ ಮತ್ತು ರವಿ ಬಸ್ರೂರು ಸಂಗೀತ, ಗುಣ ಕಲಾನಿರ್ದೇಶನ, ಚೇತನ್ ಡಿಸೋಜಾ ಸಾಹಸ ನಿರ್ದೇಶನ ಚಿತ್ರಕ್ಕೆ ಹೊಸ ರೂಪವನ್ನೇ ನೀಡಿದೆ. ‘ಕಾವಲಿಗ’ ಹಾಡು ನೆನಪಿನಲ್ಲುಳಿಯುವಂಥದ್ದು. ‘ಭೈರತಿ ರಣಗಲ್’ಗಿಂತ ‘ಮಫ್ತಿ’ ಕಥೆಯಲ್ಲಿ, ಚಿತ್ರಕಥೆಯಲ್ಲಿ ಒಂದು ಹೆಜ್ಜೆ ಮುಂದಿತ್ತು ಎನ್ನಬಹುದು. ‘ಭೈರತಿ ರಣಗಲ್’ ಸೀಕ್ವೆಲ್‌ನ ಕುರುಹು ಬಿಟ್ಟುಕೊಟ್ಟಿಲ್ಲ.

– ಅಭಿಲಾಷ್ ಪಿ.ಎಸ್.

ಪದಬಂಧ 5863


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕಾಲುನಡಿಗೆಯಿಂದ ಸಾಗುವವನು (4)
3.ಎದೆಯ ತಳಮಳ (4)
5.ಗುಜರಿ ಸೇರುವಷ್ಟು ಭಗ್ನಗೊಂಡಿರುವುದು(4)
7.ಒಳ್ಳೆಯ ವಾಸನೆ (3)
8.ಸೂರ್ಯನು ಮಕರರಾಶಿಗೆ ಹೋಗುವ ದಿನದಂದು ಆಚರಿಸುವ ಹಬ್ಬ (7)
12.ತಿರುಗಿ ನೋಡಿದರೂ ಇದು ದುರಸ್ತಿ (3)
13.ಪಣ ಕಟ್ಟಿ ಮಾಡಿದ ಅಳತೆ ಹಿಂದುಮುಂದಾಗಿದೆ (4)
17.ಕೊನೆಗೆ ಪ್ರಾಣವಿಟ್ಟು ಒತ್ತಿ ಉಚ್ಚರಿಸುವ ಅಕ್ಷರ (4)
18.ಈ ಪರಿ ಮಾಡಿದ ತಿದ್ದುಪಡಿ (4)

ಮೇಲಿಂದ ಕೆಳಕ್ಕೆ

1.ದ್ರವರೂಪದಲ್ಲೇ ಕಾಣಿಸುವ ಲೋಹ (3)
2.ಊಳಿಗವನ್ನು ಹೀಗೆನ್ನಿ (3)
3.ಮರಗಿಡಗಳ ಪತ್ರ (2)
4.ಎಲ್ಲಾ ಕಡೆಯಿಂದ ಉಂಟಾದ ನಿರ್ಬಂಧ(4)
6.ತವರ ಊರಿನಲ್ಲಿರುವ ಲೋಹ (3)
7.ಕೊನೆಗೆ ತಿರುಗಿದ ಮಗನಿಗೆ ಇದು ಸಲೀಸು(3)
9.ಕನ್ನಡ ಭಾಷೆಯು ಈ ಸುಗಂಧದ್ರವ್ಯದಂತೆ(3)
10.ಹಂತ ಹಂತವಾಗಿ ಎಂದು ಹೀಗೆನ್ನಿ (3)
11.ಈ ಪರಿ ಶ್ರಮ ಹಾಕಿದಾಗ ಆಗಿರುವ ಬಳಲಿಕೆ (4)
14.ಅನುಕರಣೆಗೆ ಯೋಗ್ಯವಾದುದು (3)
15.ಉತ್ತರದವರ ವೇತನ (3)
16.ಎಮ್ಮೆಯ ಜಾತಿಯಲ್ಲಿ ಗಂಡು (2)



5862ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಿರಿದುರ್ಗ 2.ಮಲಯಜ
4.ಆವರೋಹ 7.ಪ್ರತಿಫಲ
9.ನವಯೌವನ 12.ಸ್ವಾಭಿಮಾನ
13.ರುಜುವಾತು
15.ನಗೆಗೇಡು 16.ಅಚ್ಛಾದನ

ಮೇಲಿಂದ ಕೆಳಕ್ಕೆ:
1.ಗಿಧ್ರಾಂಅ 3.ಜಟಿಲ
5.ವರ್ಜ್ಯ 6.ಹಯವದನ
7.ಪ್ರಭಾವಬೀರು 8.ಫಲ
10.ನಾಭಿ 11.ಮವಾ
12.ಸ್ವಾಧೀನ 14.ತುಹಿನ

ಸುಡೊಕು 6248

9		3		6				2
	4						5	
	1			5		6		4
	8			1		4		3
3		4	2		7		8	
	9		4		3			6
6		5					2	
				7		3		1
1		8	9		6		4	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6247 ಸುಡೊಕು

7	8	4	2	5	3	9	6	1
1	9	2	6	8	4	5	7	3
6	5	3	1	7	9	8	2	4
5	3	8	9	2	7	4	1	6
9	1	6	4	3	8	7	5	2
4	2	7	5	1	6	3	8	9
2	4	5	7	9	1	6	3	8
8	6	1	3	4	5	2	9	7
3	7	9	8	6	2	1	4	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 16, 2024

ಶ್ರೀಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣಪ್ರತಿಪದ್ ಗಂ. 23-51 ನಕ್ಷತ್ರ: ಕೃತ್ತಿಕಾ ಗಂ. 19-28 ಯೋಗ: ಪರಿಘ ಗಂ. 23-48 ಕರಣ: ಬಾಲವ ಗಂ. 13-22, ತುಲಾ ಮಾಸದ 30 ನೇ ದಿನ, ಮಳೆನಕ್ಷತ್ರ: ವಿಶಾಖ 3.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-34 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 13 ಜುಮಾದುಲ್ಲಾವಲ್
ದಿನ ವಿಶೇಷ : ಕಾರ್ತಿಕ ಪೂಜೆ,ಅದೃಷ್ಟ ಸಂಖ್ಯೆ : 11, 5

ಮೇಷ: ಸಮೀಪವರ್ತಿಗಳ ದುರ್ಬುದ್ಧಿಯಿಂದ ವ್ಯಾಪಾರ ವಹಿವಾಟುಗಳಲ್ಲಿ ವಂಚನೆ ನಡೆದಾವು. ಹಾಗಾಗಿ ಅತಿಯಾಗಿ ನಂಬದಿರಿ. ಆಭರಣವು ಉಡುಗೊರೆಯಾಗಿ ದೊರೆಯಬಹುದು.

ವೃಷಭ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆ ಹಂತಹಂತವಾಗಿ ಚೇತರಿಕೆ ಕಾಣಲಿದೆ. ಕುಟುಂಬದ ಹಿರಿಯರಿಂದ ಹಿತೋಪದೇಶಗಳನ್ನು ಕೇಳುವಿರಿ. ರೇಡಿಯೊದಲ್ಲಿ ಕಾರ್ಯಕ್ರಮಕ್ಕೆ ಕರೆ ಬರುವುದು.

ಮಿಥುನ : ಸಿಬ್ಬಂದಿ ವರ್ಗದವರಿಂದ ಹೆಚ್ಚಿನ ಸಹಕಾರ ನಿರೀಕ್ಷಿಸಬೇಡಿ. ಕಾರ್ಯದ ಒತ್ತಡದಿಂದ ಭೋಜನದ ಸಮಯದಲ್ಲಿ ವ್ಯತ್ಯಯಗಳು ಸಂಭವಿಸಬಹುದು. ಆರೋಗ್ಯ ನಿರ್ಲಕ್ಷಿಸುವುದು ತರವಲ್ಲ.

ಕರ್ಕಾಟಕ: ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ಹೆಜ್ಜೆ ಇಡುವುದು ಸೂಕ್ತ. ದಲ್ಲಾಳಿಗಳಿಗೆ ಈ ದಿನ ಅಧಿಕ ಲಾಭ. ಸ್ನೇಹಪರ ಮನೋಭಾವದಿಂದಾಗಿ ವೈಯಕ್ತಿಕ ಸ್ಥಾನಮಾನಗಳು ಲಭಿಸುವುದು.

ಸಿಂಹ: ಹಲವು ದಿನದ ಬಿಡುವಿಲ್ಲದ ಕೆಲಸದಿಂದ ಬಳಲಿರುವ ನೀವು ವಿಶ್ರಾಂತಿಗಾಗಿ ಸ್ವಲ್ಪ ಸಮಯ ಮೀಸಲಿಡಿ. ಪತ್ನಿಯ ಸಹಕಾರದಿಂದ ಕೆಲಸಗಳು ಅಚ್ಚುಕಟ್ಟಾಗಿ ಮುಗಿಯುವುದು.

ಕನ್ಯಾ: ಕೇವಲ ಸುಖ, ಹಣ ಸಂಪಾದನೆಯಲ್ಲ, ಮನುಷ್ಯತ್ವದ ಬಗ್ಗೆಯೂ ಆಲೋಚನೆ, ಮನಸ್ಥಿತಿ ಇರಲಿ. ಉತ್ತಮ ಸಂಧಾನಕಾರರಾಗಿರುವ ನಿಮಗೆ ಇಂದಿನ ಸಮಸ್ಯೆಯು ಕಬ್ಬಿಣದ ಕಡಲೆ ಆಗಬಹುದು.

ತುಲಾ: ಅಚ್ಚರಿಯೆನಿಸುವ ಸುದ್ದಿಯೊಂದು ಅನ್ಯರ ಮೂಲಕ ತಿಳಿಯಲಿದೆ. ಅದನ್ನು ಯಾರಲ್ಲೂ ಹೇಳಿಕೊಳ್ಳದೇ ಇರುವುದು ಉತ್ತಮ. ಕುಟುಂಬವರ್ಗದವರ ಆರೋಗ್ಯ ಸುಧಾರಿಸಲಿದೆ. ಆಸೆ ನಿರಾಸೆಯಾಗುವ ಲಕ್ಷಣಗಳಿವೆ.

ವೃಶ್ಚಿಕ: ಕೆಲವೊಂದು ಸಮಸ್ಯೆಗಳಿಗೆ ಪೊಲೀಸರಿಂದ ಪರಿಹಾರ ತೆಗೆದುಕೊಳ್ಳುವುದು ಉತ್ತಮ . ಹಿರಿಯರ ಮಾರ್ಗದರ್ಶನ ಪಡೆಯುವುದು ಉತ್ತಮ. ಹೊಸ ವಾಹನ ಕೊಳ್ಳುವವರಿಗೆ ಸಕಾಲ.

ಧನು: ಜಟಿಲವಾದ ಸಮಸ್ಯೆ ಬಗೆಹರಿಸಿಕೊಳ್ಳಲು ಸೂಕ್ತ ಸಲಹೆಯನ್ನು ಮಾರ್ಗದರ್ಶಕರಲ್ಲಿ ಕೇಳಿ ತಿಳಿಯಿರಿ. ರಾಸಾಯನಿಕ ಪದಾರ್ಥಗಳ ಮಾರಾಟಗಳಿಂದ ಆದಾಯ ಸಂಬಂಧಿತ ಸಮಸ್ಯೆ ಎದುರಾಗಬಹುದು.

ಮಕರ: ಮದುವೆಗೆ ಇರುವ ಅಡಚಣೆಗಳನ್ನು ಬಗೆಹರಿಸಿಕೊಳ್ಳುವ ಬಗ್ಗೆ ಗಮನಹರಿಸಿ. ಕೆಲಸದ ಮೇಲಿನ ತರಬೇತಿ ಪಡೆದುಕೊಳ್ಳುವುದು ಅನಿವಾರ್ಯ. ಖರ್ಚು ವೆಚ್ಚಗಳಲ್ಲಿ ಮಿತ ವ್ಯಯ ಸಾಧಿಸಲು ಪ್ರಯತ್ನಿಸಿ.

ಕುಂಭ: ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿ. ಕಟ್ಟಡದ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಸಂತೃಪ್ತಿಯ ಜೀವನವನ್ನು ಮುನ್ನಡೆಸುವಿರಿ.

ಮೀನ: ದೃಷ್ಟಿಯಲ್ಲಿ ಬದಲಾವಣೆ ಆಗಲೇ ಬೇಕಿರುವ ನಿರ್ಧಾರವನ್ನು ಸ್ಪಷ್ಟ ಮಾತುಗಳಲ್ಲಿ ಅಥವಾ ಬರಹದಲ್ಲಿ ಇತರರಿಗೆ ತಿಳಿಯಪಡಿಸಿ. ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುವ ಮನಸ್ಥಿತಿ ಉಂಟಾಗುತ್ತದೆ.

ವಿನಿಮಯ ದರ

$ ಡಾಲರ್	84.44
£ ಪೌಂಡ್	106.73
€ ಯೂರೊ	89.06
¥ ಯೆನ್ (100ಕ್ಕೆ)	54

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹12100-15151
ತುರುವೇಕೆರೆ	₹15000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹585
12 ಕ್ಕೆ	₹75
ಮೈಸೂರು	
100ಕ್ಕೆ	₹587

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕಿ)	₹377-588
ದ್ವಿತಳಿ (ಬಿ.ವಿ)	₹440-795

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹178
ಆರ್‌ಎಸ್‌ಎಸ್-5	₹172
ಕಟ್ ಲಾಟ್	₹168

(ಪ್ರತಿ ಕೆ.ಜಿಗೆ)

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1550 (1560)
ಸೋಯಾ (ರಿಫೈನ್ಡ್)	₹1350 (1350)
ಸೂರ್ಯಕಾಂತಿ (ರಿಫೈನ್ಡ್)	₹1400 (1400)
ಪಾಮೋಲಿನ್	₹1380 (1360)

‘ಜಿಡಿಪಿ ಶೇ 7.2ರಷ್ಟು ಪ್ರಗತಿ’

ನವದೆಹಲಿ (ಪಿಟಿಐ): 2024ರಲ್ಲಿ ಭಾರತದ ಒಟ್ಟು ಆಂತರಿಕ ಉತ್ಪನ್ನವು (ಜಿಡಿಪಿ) ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಮೂಡೀಸ್ ರೇಟಿಂಗ್ಸ್ ಸಂಸ್ಥೆ ಅಂದಾಜಿಸಿದೆ.

ಆದರೆ, ಅಕ್ಟೋಬರ್‌ನಲ್ಲಿ ಚಿಲ್ಲರೆ ಹಣದುಬ್ಬರವು ಏರಿಕೆಯಾಗಿದೆ. ಹಾಗಾಗಿ, ಈ ವರ್ಷದಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ರೆಪೊ ದರವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ನಿರೀಕ್ಷೆಯಿದೆ ಎಂದು ಹೇಳಿದೆ.

ಭಾರತದ ಆರ್ಥಿಕತೆ ಬೆಳವಣಿಗೆಯು ಸದೃಢವಾಗಿದೆ. ಹಣದುಬ್ಬರವು ಇಳಿಕೆಯ ಹಾದಿಯಲ್ಲಿದೆ. 2025ರಲ್ಲಿ ದೇಶದ ಜಿಡಿಪಿಯು ಶೇ 6.6ರಷ್ಟು ಮತ್ತು 2026ರಲ್ಲಿ ಶೇ 6.5ರಷ್ಟು ಪ್ರಗತಿ ಕಾಣಲಿದೆ ಎಂದು ಶುಕ್ರವಾರ ಬಿಡುಗಡೆಯಾಗಿರುವ ಜಾಗತಿಕ ಆರ್ಥಿಕ ಮುನ್ನೋಟದ ವರದಿ ವಿವರಿಸಿದೆ.

ಹಿಂಗಾರು ಅವಧಿಯಲ್ಲಿ ಬಿತ್ತನೆ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರಿಂದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಏರಿಕೆಯಾಗಲಿದ್ದು, ಮುಂಬರುವ ತಿಂಗಳುಗಳಲ್ಲಿ ಆಹಾರ ಪದಾರ್ಥಗಳ ಬೆಲೆ ಇಳಿಕೆಯಾಗಲಿದೆ. ಆಗ ಚಿಲ್ಲರೆ ಹಣದುಬ್ಬರ ದರವು ಆರ್‌ಬಿಐನ ನಿಗದಿತ ಗುರಿಗಿಂತಲೂ ಕಡಿಮೆ ದಾಖಲಾಗಲಿದೆ ಎಂದು ಹೇಳಿದೆ.

ರಾಜ್ಯ, ಜಿಲ್ಲಾ ಆಯೋಗಗಳಲ್ಲಿ 663 ಹುದ್ದೆ ಖಾಲಿ: ಕೇಂದ್ರ ಕಳವಳ

ಗ್ರಾಹಕರ ಹಕ್ಕು ರಕ್ಷಣೆಗೆ ನಿರ್ಲಕ್ಷ್ಯ



ನವದೆಹಲಿ (ಪಿಟಿಐ): ದೇಶದಾದ್ಯಂತ ರಾಜ್ಯ ಹಾಗೂ ಜಿಲ್ಲಾ ಗ್ರಾಹಕರ ಆಯೋಗಗಳಲ್ಲಿ 663 ಹುದ್ದೆಗಳು ಖಾಲಿ ಉಳಿದಿದ್ದು, ಗ್ರಾಹಕರ ಹಕ್ಕುಗಳ ರಕ್ಷಣೆಗೆ ತೊಂದರೆಯಾಗಿದೆ ಎಂದು ಕೇಂದ್ರ ಸರ್ಕಾರ ಕಳವಳ ವ್ಯಕ್ತಪಡಿಸಿದೆ.

ಗ್ರಾಹಕರ ಹಿತಾಸಕ್ತಿ ಕಾಪಾಡುವ ಉದ್ದೇಶದಿಂದ ತ್ವರಿತವಾಗಿ ಈ ಹುದ್ದೆಗಳ ಭರ್ತಿಗೆ ಕ್ರಮಕೈಗೊಳ್ಳಬೇಕು ಎಂದು ಎಲ್ಲಾ ರಾಜ್ಯಗಳಿಗೆ ಸೂಚನೆ ನೀಡಿದೆ.

ಗ್ರಾಹಕರ ಆಯೋಗಗಳ ಸ್ಥಿತಿಗತಿ ಬಗ್ಗೆ ಪರಾಮರ್ಶೆ ನಡೆಸಿರುವ ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ಅವರು, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಳವಾಗಿರುವ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಸಚಿವಾಲಯದ ಮಾಹಿತಿ ಪ್ರಕಾರ ಅಕ್ಟೋಬರ್ ಅಂತ್ಯಕ್ಕೆ ರಾಜ್ಯ ಆಯೋಗಗಳಲ್ಲಿ 18 ಅಧ್ಯಕ್ಷರ ಹಾಗೂ 56 ಸದಸ್ಯರ ಹುದ್ದೆಗಳು ಖಾಲಿ ಉಳಿದಿವೆ. ಜಿಲ್ಲಾಮಟ್ಟದಲ್ಲಿ 162 ಅಧ್ಯಕ್ಷರು ಹಾಗೂ 427 ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಿಲ್ಲ ಎಂದು ತಿಳಿಸಿದೆ.

ಗ್ರಾಹಕರ ವ್ಯಾಜ್ಯಗಳು/ದೂರುಗಳನ್ನು ಪರಿಣಾಮಕಾರಿಯಾಗಿ ಇತ್ಯರ್ಥಪಡಿಸುವ ಸಂಬಂಧ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕಿದೆ ಎಂದು ನಿಧಿ ಖರೆ ಸೂಚಿಸಿದ್ದಾರೆ.

ರಾಜ್ಯಗಳು ಹುದ್ದೆಗಳ ಭರ್ತಿಗೆ ಕ್ರಮ ವಹಿಸಬೇಕು. ಈ ಮೂಲಕ ಗ್ರಾಹಕರ ಹಕ್ಕುಗಳ ರಕ್ಷಣೆಗೆ ಆಯೋಗಗಳು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಸಹಕರಿಸಬೇಕು ಎಂದು ಹೇಳಿದ್ದಾರೆ.

ಗ್ರಾಹಕ ರಕ್ಷಣೆ ಕಾಯ್ದೆ 2019ರ ಸೆಕ್ಷನ್ 32ರ ಅನ್ವಯ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷ ಹುದ್ದೆ ಖಾಲಿ ಇದ್ದರೆ, ಇತರೆ ಜಿಲ್ಲೆಯ ಅಧ್ಯಕ್ಷರಿಗೆ ಈ ಹುದ್ದೆಯ ಹೆಚ್ಚುವರಿ ಜವಾಬ್ದಾರಿ ನೀಡಬೇಕಿದೆ. ಇದರಿಂದ ವ್ಯಾಜ್ಯಗಳ ಪರಿಹಾರದಲ್ಲಿನ ವಿಳಂಬ ತಡೆಯಲು ನೆರವಾಗಲಿದೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕಬ್ಬು ಅರೆಯುವಿಕೆ ವಿಳಂಬ: ಸಕ್ಕರೆ ಉತ್ಪಾದನೆ ಶೇ 44ರಷ್ಟು ಕುಸಿತ?

ನವದೆಹಲಿ (ಪಿಟಿಐ): ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಅರೆಯುವಿಕೆ ಪ್ರಕ್ರಿಯೆ ವಿಳಂಬವಾಗಿದೆ. ಹಾಗಾಗಿ, 2024-25ನೇ ಮಾರುಕಟ್ಟೆ ಋತುವಿನ (ಅಕ್ಟೋಬರ್–ಸೆಪ್ಟೆಂಬರ್) ಮೊದಲ ಆರು ವಾರದಲ್ಲಿ ಸಕ್ಕರೆ ಉತ್ಪಾದನೆಯು ಶೇ 44ರಷ್ಟು ಇಳಿಕೆಯಾಗಲಿದೆ ಎಂದು ಸಹಕಾರ ಸಕ್ಕರೆ ಕಾರ್ಖಾನೆಗಳ ರಾಷ್ಟ್ರೀಯ ಒಕ್ಕೂಟ (ಎನ್‌ಎಫ್‌ಸಿಎಸ್‌ಎಫ್‌ಎಲ್) ತಿಳಿಸಿದೆ.

ಕಳೆದ ವರ್ಷದ ಈ ಅವಧಿಯಲ್ಲಿ 12.70 ಲಕ್ಷ ಟನ್ ಸಕ್ಕರೆ ಉತ್ಪಾದನೆಯಾಗಿತ್ತು. ಈ ಬಾರಿ 7.10 ಲಕ್ಷ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.



ದೇಶದಲ್ಲಿ ಶುಕ್ರವಾರದ ವರೆಗೆ 144 ಕಾರ್ಖಾನೆಗಳು ಕಬ್ಬು ಅರೆಯುವಿಕೆ ಆರಂಭಿಸಿವೆ. ಕಳೆದ ಋತುವಿನಲ್ಲಿ ಇದೇ ಅವಧಿಯಲ್ಲಿ 264 ಕಾರ್ಖಾನೆಗಳಲ್ಲಿ ಕಬ್ಬು ಅರೆಯುವಿಕೆ ಆರಂಭಗೊಂಡಿತ್ತು ಎಂದು ಹೇಳಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಮಹಾರಾಷ್ಟ್ರದಲ್ಲಿ 103 ಕಾರ್ಖಾನೆಗಳಲ್ಲಿ ಕಬ್ಬು ಅರೆಯುವಿಕೆ ಆರಂಭಿಸಿದ್ದವು. ಈ ಬಾರಿ ಅಲ್ಲಿ ಇನ್ನೂ ಅರೆಯುವಿಕೆ ಪ್ರಕ್ರಿಯೆ ಚಾಲನೆ ಸಿಕ್ಕಿಲ್ಲ ಎಂದು ತಿಳಿಸಿದೆ.

ಈ ಬಾರಿ ಕಬ್ಬಿನ ರಿಕವರಿ ಪ್ರಮಾಣವು (ಕಬ್ಬಿನಲ್ಲಿರುವ ಸಕ್ಕರೆ ಅಂಶ) ಶೇ 7.82ರಷ್ಟು ಇರಲಿದೆ ಎಂದು ಹೇಳಿದೆ.

ಕಳೆದ ಮಾರುಕಟ್ಟೆ ಋತುವಿನಲ್ಲಿ 319 ಲಕ್ಷ ಟನ್‌ನಷ್ಟು ಸಕ್ಕರೆ ಉತ್ಪಾದನೆಯಾಗಿತ್ತು. ಈ ವರ್ಷ 280 ಲಕ್ಷ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಹರಳು, ಚಿನ್ನಾಭರಣ ರಫ್ತು ಏರಿಕೆ

ಮುಂಬೈ (ಪಿಟಿಐ): ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳಿಗೆ ಹೆಚ್ಚಿದ ಬೇಡಿಕೆಯಿಂದಾಗಿ ಅಕ್ಟೋಬರ್‌ನಲ್ಲಿ ದೇಶದ ಹರಳು ಮತ್ತು ಚಿನ್ನಾಭರಣಗಳ ರಫ್ತು ಪ್ರಮಾಣ ಶೇ 9ರಷ್ಟು ಏರಿಕೆಯಾಗಿದೆ. ಒಟ್ಟು ರಫ್ತು ಮೌಲ್ಯವು ₹25,194 ಕೋಟಿ ಆಗಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ರಫ್ತು ಮೌಲ್ಯ ₹22,857 ಕೋಟಿ ಆಗಿತ್ತು ಎಂದು ಹರಳು ಮತ್ತು ಚಿನ್ನಾಭರಣ ರಫ್ತು ಉತ್ತೇಜನಾ ಮಂಡಳಿ (ಜಿಜೆಇಪಿಸಿ) ಶುಕ್ರವಾರ ತಿಳಿಸಿದೆ.

ಕತ್ತರಿಸಿದ ಮತ್ತು ಪಾಲಿಶ್ ಮಾಡಿದ ವಜ್ರಗಳ ರಫ್ತು ಮೌಲ್ಯ ₹11,795 ಕೋಟಿ ಆಗಿದೆ. ಕಳೆದ ವರ್ಷದ ಇದೇ ತಿಂಗಳಲ್ಲಿ ₹10,495 ಕೋಟಿ ಆಗಿತ್ತು.

ಚಿನ್ನಾಭರಣಗಳ ರಫ್ತು ಶೇ 9ರಷ್ಟು ಏರಿಕೆಯಾಗಿದ್ದು, ₹9,449 ಕೋಟಿಯಷ್ಟಾಗಿದೆ. ಪ್ರಯೋಗಾಲಯದಲ್ಲಿ ತಯಾರಿಸಿದ ವಜ್ರಗಳ ರಫ್ತು ಮೌಲ್ಯ ₹1,160 ಕೋಟಿ ಆಗಿದೆ ಎಂದು ತಿಳಿಸಿದೆ.

ಹೆಸರುಕಾಳು ಖರೀದಿ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಹೆಸರುಕಾಳು ಖರೀದಿ ಅವಧಿಯನ್ನು ಡಿಸೆಂಬರ್ 18ರ ವರೆಗೆ ವಿಸ್ತರಿಸಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಈ ಮೊದಲು ಖರೀದಿ ಅವಧಿಯನ್ನು ನವೆಂಬರ್ 21ರ ವರೆಗೆ ನಿಗದಿಪಡಿಸಲಾಗಿತ್ತು. ರಾಜ್ಯ ಸರ್ಕಾರದ ಕೋರಿಕೆ ಮೇರೆಗೆ ಕೇಂದ್ರವು ಖರೀದಿಗೆ ಅನುಮತಿ ನೀಡಿದೆ. ಪ್ರತಿ ಕ್ವಿಂಟಲ್‌ಗೆ ₹8,682 ಬೆಂಬಲ ಬೆಲೆ ನಿಗದಿಪಡಿಸಲಾಗಿದೆ. ರಾಜ್ಯದಲ್ಲಿ ಇಲ್ಲಿಯವರೆಗೆ 20,450 ಟನ್ ಖರೀದಿಸಲಾಗಿದೆ ಎಂದು ತಿಳಿಸಿದ್ದಾರೆ.

ಬೆಳಗಾವಿ, ಬೀದರ್, ಧಾರವಾಡ, ಗದಗ, ಹಾವೇರಿ, ಕಲಬುರಗಿ, ಕೊಪ್ಪಳ ಮತ್ತು ಯಾದಗಿರಿ ಜಿಲ್ಲೆಯಲ್ಲಿ ಖರೀದಿ ಕೇಂದ್ರ ತೆರೆಯಲಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ನವೀಕರಿಸಬಹುದಾದ ಇಂಧನ ಗುರಿ ಸಾಧನೆಗೆ ಕಾರ್ಯಪಡೆ ರಚನೆ


ಪ್ರಲ್ಹಾದ ಜೋಶಿ

ನವದೆಹಲಿ (ಪಿಟಿಐ): ‘ಸರ್ಕಾರವು 2030ರ ವೇಳೆಗೆ 500 ಗಿಗಾವಾಟ್‌ನಷ್ಟು ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿ ಹೊಂದಿದೆ. ಈ ಕಾರ್ಯ ಸಾಧನೆಗಾಗಿ ಕೇಂದ್ರ ವಿದ್ಯುತ್ ಸಚಿವಾಲಯದ ಸಲಹೆ ಮೇರೆಗೆ ಕಾರ್ಯಪಡೆ ರಚಿಸಲು ನಿರ್ಧರಿಸಲಾಗಿದೆ’ ಎಂದು ಕೇಂದ್ರ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ನಿಗದಿತ ಅವಧಿಯೊಳಗೆ ಈ ಗುರಿ ಸಾಧಿಸಲು ಇಂಧನ ವಲಯದ ಪ್ರಮುಖರು ಮತ್ತು ಮಧ್ಯಸ್ಥಗಾರರು ಇದಕ್ಕೆ ಪೂರಕವಾದ ಕಾರ್ಯತಂತ್ರವನ್ನು ರೂಪಿಸಬೇಕಿದೆ ಎಂದು ಒತ್ತಾಯಿಸಿದ್ದಾರೆ.

ಈಗಾಗಲೇ, ಭಾರತವು ಪಳೆಯುಳಿಕೆಯಲ್ಲದ ಇಂಧನ ಮೂಲಗಳಿಂದ 212 ಗಿಗಾವಾಟ್‌ನಷ್ಟು ಇಂಧನ ಉತ್ಪಾದಿಸಿದೆ. ಮುಂದಿನ ಆರು ವರ್ಷದಲ್ಲಿ ನವೀಕರಿಸಬಹುದಾದ ಇಂಧನ ಉತ್ಪಾದನೆಯಲ್ಲಿ ನಿಗದಿತ ಗುರಿ ಸಾಧಿಸಲಾಗುವುದು ಎಂದು ಹೇಳಿದ್ದಾರೆ.

ನವೀಕರಿಸಬಹುದಾದ ಇಂಧನ ಹೂಡಿಕೆ ಸಮಾವೇಶದಲ್ಲಿ 540 ಗಿಗಾವಾಟ್ ಉತ್ಪಾದನೆಗೆ ₹32 ಲಕ್ಷ ಕೋಟಿ ಬಂಡವಾಳ ಹೂಡಿಕೆಗೆ ಸಂಬಂಧಿಸಿದಂತೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ. ಇಷ್ಟು ಮೊತ್ತವು ಈ ವಲಯದಲ್ಲಿ ಹೂಡಿಕೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	42000-50000
ಕಾರ್ಕಳ	
ಹೊಸತು	25000-33000
ಹಳತು	30000-50000
ಪುತ್ತೂರು	
ಹಳತು	33000-50000
ಶಿವಮೊಗ್ಗ	
ಬೆಟ್ಟೆ	41009-57299
ಗೊರಬಲು	17590-31098
ಹೊಸತು	47509-49689
ರಾಶಿ	34869-49939
ಸರಕು	61600-80609
ಸಿದ್ದಾಪುರ	
ಬಿಳಿಗೋಟು	23899-26809
ಚಾಲಿ	31809-35509
ಕೋಕ	19489-25619
ಕೆಂಪುಗೋಟು	20699-20699
ರಾಶಿ	41109-46699
ತಟ್ಟಿಬೆಟ್ಟೆ	27689-36469
ಶಿರಸಿ	
ಬೆಟ್ಟೆ	28369-39289
ಬಿಳಿಗೋಟು	22199-29909
ಚಾಲಿ	32508-36058
ರಾಶಿ	40909-44709
ಯಲ್ಲಾಪುರ	
ಬಿಳಿಗೋಟು	16099-28699
ಚಾಲಿ	30500-36009
ಕೋಕ	4899-17599
ಕೆಂಪುಗೋಟು	15099-24373
ರಾಶಿ	38100-57615
ತಟ್ಟಿಬೆಟ್ಟೆ	26699-35895

ನೈಸರ್ಗಿಕ ಅನಿಲ ಪೂರೈಕೆ ಕಡಿತ

ನವದೆಹಲಿ (ಪಿಟಿಐ): ಸಿಎನ್‌ಜಿ ಸಗಟುದಾರರಿಗೆ ಕೇಂದ್ರ ಸರ್ಕಾರವು ಒಂದು ತಿಂಗಳ ಅಂತರದಲ್ಲಿ ಎರಡನೇ ಬಾರಿಗೆ ದೇಶೀಯವಾಗಿ ಉತ್ಪಾದಿಸುವ ನೈಸರ್ಗಿಕ ಅನಿಲ ಪೂರೈಕೆಯನ್ನು ಕಡಿತಗೊಳಿಸಿದೆ. ಇದು ಕಂಪನಿಗಳ ಲಾಭ ಗಳಿಕೆಯ ಮೇಲೆ ಪರಿಣಾಮ ಬೀರಲಿದೆ ಎಂದು ಇಂದ್ರಪ್ರಸ್ಥ ಗ್ಯಾಸ್ ಕಂಪನಿ ತಿಳಿಸಿದೆ.

ಈ ಕಂಪನಿಯು ಸಿಎನ್‌ಜಿ ಆಗಿ ಪರಿವರ್ತಿಸಿ ವಾಹನಗಳು ಮತ್ತು ಕೊಳವೆ ಮೂಲಕ ಅಡುಗೆ ಮನೆಗಳಿಗೆ ಅನಿಲ (ಪಿಎನ್‌ಜಿ) ಪೂರೈಸುತ್ತದೆ.

ದೇಶದಲ್ಲಿ ವಾರ್ಷಿಕವಾಗಿ ಅನಿಲದ ಉತ್ಪಾದನೆಯು ಕಡಿಮೆಯಾಗುತ್ತಿದೆ. ಹಾಗಾಗಿ, ಸರ್ಕಾರವು ನವೆಂಬರ್ 16ರಂದು ದೇಶೀಯವಾಗಿ ಉತ್ಪಾದಿಸುವ ಸಾಂದ್ರಿಕೃತ ನೈಸರ್ಗಿಕ ಅನಿಲ (ಸಿಎನ್‌ಜಿ) ಪೂರೈಕೆಯನ್ನು ಶೇ 20ರಷ್ಟು ಕಡಿತಗೊಳಿಸಿದೆ. ಇದರಿಂದ ನಗರ ಪ್ರದೇಶದ ವ್ಯಾಪ್ತಿಯ ಸಿಎನ್‌ಜಿ ಸಗಟುದಾರರು ತೊಂದರೆಗೆ ಸಿಲುಕಿದ್ದಾರೆ.

ಮಾರುಕಟ್ಟೆಯಲ್ಲಿ ಎದುರಾಗಿರುವ ಕೊರತೆ ನೀಗಿಸಲು ಸಿಎನ್‌ಜಿ ಅನ್ನು ಆಮದು ಮಾಡಿಕೊಳ್ಳಬಹುದು. ಅಲ್ಲದೆ, ದ್ರವೀಕೃತ ನೈಸರ್ಗಿಕ ಅನಿಲವನ್ನು (ಎಲ್‌ಎನ್‌ಜಿ) ಖರೀದಿಬಹುದಾಗಿದೆ. ಇದರಿಂದ ಸಿಎನ್‌ಜಿ ದರವು ಪ್ರತಿ ಕೆ.ಜಿಗೆ ₹4ರಿಂದ ₹6 ಏರಿಕೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

ಮುಂಬೈ ಧಾರಣೆ
15-11-2024
ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1570)
ಒಂದು ವಾರದ ಡೆಲಿವರಿ	1555 (1565)
ಪಾಮ್ ವಾರದ ಡೆಲಿವರಿ	1378 (1358)
ಸೂರ್ಯಕಾಂತಿ ಎಣ್ಣೆ ಕಚ್ಚಾ	1350 (1350)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸರ್ಕಾರಿ ಶಾಲೆಯಲ್ಲಿ ‘ಪಿಂಕ್ ರೂಮ್’

ಒಂದನೇ ಪುಟದಿಂದ...



ವಿದ್ಯಾರ್ಥಿನಿಯರು ತಿಂಗಳ ಋತು ಸಮಯದಲ್ಲಿ ತರಗತಿ ತಪ್ಪಿಸಿಕೊಳ್ಳಬಾರದು. ಬದಲಾಗಿ ಈ ಕೊಠಡಿಯಲ್ಲಿ ವಿಶ್ರಾಂತಿ ಪಡೆದು ಮತ್ತೆ ತರಗತಿಗೆ ಹೋಗಬಹುದು

ಆಂಥೋಣಿ ಸಜೀತ್, ಐ.ಟಿ ಕಂಪನಿ ಉದ್ಯೋಗಿ, ಬೆಂಗಳೂರು

‘2010ರಲ್ಲಿ ನನ್ನ ಪುತ್ರಿ ಬೆಂಗಳೂರಿನ ಸೀಗೇಹಳ್ಳಿ ಬಳಿಯ ಖಾಸಗಿ ಶಾಲೆಯಲ್ಲಿ ಓದುತ್ತಿದ್ದಾಗ ಮುಟ್ಟಿನಿಂದ ಸಂಕಟ ಹಾಗೂ ಮುಜುಗರಕ್ಕೆ ಒಳಗಾಗಿದ್ದಳು. ಋತುಸ್ರಾವದ ಬಗ್ಗೆ ಗೊತ್ತಿಲ್ಲದ ಆಕೆಗೆ ಅದು ಮೊದಲ ಮುಟ್ಟು ಆಗಿತ್ತು. ಸುಮಾರು 22 ಕಿ.ಮೀ ದೂರದ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ನನಗೆ ಶಾಲೆಯಿಂದ ತುರ್ತು ಕರೆ ಬಂತು. ಶಾಲೆಗೆ ಓಡೋಡಿ ಬಂದು ಮಗಳ ಸಂಕಷ್ಟ ನೋಡಿದೆ. ರಕ್ತಸ್ರಾವದಿಂದ ಬಳಲಿದ್ದ ಆಕೆಯನ್ನು ಸಮಾಧಾನ ಪಡಿಸುತ್ತಾ ನನ್ನ ಜಾಕೆಟ್ ತೊಡಿಸಿದೆ. ಆದರೆ, ಶಾಲೆಯಲ್ಲಿ ಪ್ರತ್ಯೇಕ ಕೊಠಡಿಯಾಗಲಿ, ಸೌಲಭ್ಯವಾಗಲೇ ಇಲ್ಲದ ಕಾರಣ ಮಗಳು ಮತ್ತಷ್ಟು ಮುಜುಗರಕ್ಕೆ ಒಳಗಾಗಿದ್ದಳು’ ಎಂದು ಸಜೀತ್, ತಮ್ಮ ಮಗಳು ಶಾಲೆಯಲ್ಲಿದ್ದಾಗ ಮುಟ್ಟಿನ ಸಮಯದಲ್ಲಿ ಅನುಭವಿಸಿದ ಯಾತನೆ, ಮುಜುಗರ ನೆನಪಿಸಿಕೊಂಡರು.

ಈ ಪಿಂಕ್ ಕೊಠಡಿಯಿಂದ ವಿದ್ಯಾರ್ಥಿನಿಯರಿಗೆ ಬಹಳಷ್ಟು ಅನುಕೂಲವಾಗಿದೆ. ಈಗ ಅವರು ಯಾವುದೇ ಮುಜುಗರವಿಲ್ಲದೇ ತಮ್ಮ ಮುಟ್ಟಿನ ಸಂದರ್ಭವನ್ನು ಸುಸೂತ್ರವಾಗಿ ನಿಭಾಯಿಸಬಹುದು ಎನ್ನುತ್ತಾರೆ.

‘ದೆಹಲಿಯಲ್ಲಿ ಇಂಥ ಸೌಲಭ್ಯವಿರುವ ಪಿಂಕ್ ರೂಮ್ ಇವೆ. ಇದೇ ಮಾದರಿಯಲ್ಲಿ ಈ ಭಾಗದಲ್ಲೂ ಸೌಲಭ್ಯ ಕಲ್ಪಿಸಲಾಗುವುದು. ಗ್ರಾಮೀಣ ಶಾಲೆಗಳಿಗೆ ದೂರದಿಂದ ಬರುವ ಪ್ರತಿ ಬಾಲಕಿಗೂ ಇಂಥ ಸೌಲಭ್ಯ ಸಿಗಬೇಕು. ಮುಟ್ಟಿಗೆ ಒಳಗಾದ ಅವಧಿಯಲ್ಲಿ ಹೆಣ್ಣು ಮಕ್ಕಳು ಧೈರ್ಯ ಹಾಗೂ ಘನತೆಯಿಂದ ಬದುಕುವ ವಾತಾವರಣ ಸೃಷ್ಟಿಯಾಗಬೇಕು. ಇದಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು’ ಎಂದು ಸಜೀತ್ ಹೇಳುತ್ತಾರೆ.

ಈ ಹಿಂದೆ ಅವರು ವೇಮಗಲ್ ಕೈಗಾರಿಕಾ ಪ್ರದೇಶದಲ್ಲಿ ಉದ್ಯೋಗಿಯಾಗಿದ್ದರು. ಹೀಗಾಗಿ, ಕೋಲಾರ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು ಈ ಸೌಲಭ್ಯ ಕಲ್ಪಿಸುತ್ತಿದ್ದಾರೆ. ಚಿಕ್ಕಬಳ್ಳಾಪುರ ಜಿಲ್ಲೆಯ ಕೆಲ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್, ಡಿಜಿಟಲ್ ಕ್ಲಾಸ್ ಉಪಕರಣ ಕೂಡ ನೀಡಿದ್ದಾರೆ.

ಮತ್ತೊಂದು ಪಿಂಕ್ ರೂಮ್ ಇಂದು ಉದ್ಘಾಟನೆ

ಎಲ್ಲಾ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ವಿಶ್ರಾಂತಿ ಕೊಠಡಿ ಸೌಲಭ್ಯ ಅಗತ್ಯವಿದೆ ಎಂಬ ನಿಟ್ಟಿನಲ್ಲಿ ಆಂಥೋಣಿ ಸಜೀತ್, ಮತ್ತೊಂದು ಪಿಂಕ್ ರೂಮ್ ಸ್ಥಾಪಿಸಿದ್ದಾರೆ.

ಕೋಲಾರ ತಾಲ್ಲೂಕಿನ ಕ್ಯಾಲನೂರು ಸರ್ಕಾರಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಸಜೀತ್ ಅವರು ನಿರ್ಮಿಸಿರುವ ಪಿಂಕ್ ರೂಮ್ ಶನಿವಾರ (ನ.16) ಉದ್ಘಾಟನೆ ಆಗಲಿದೆ. ಜೊತೆಗೆ ಕಂಪ್ಯೂಟರ್ ಲ್ಯಾಬ್ ಕೂಡ ಉದ್ಘಾಟನೆ ಆಗಲಿದೆ. ₹4 ಲಕ್ಷ ವೆಚ್ಚದಲ್ಲಿ ಶಾಲೆಯ ಕೊಠಡಿಯೊಂದನ್ನು ನವೀಕರಿಸಿ ಸೌಲಭ್ಯ ಕಲ್ಪಿಸಿದ್ದಾರೆ. ಆಂಥೋಣಿ ಕೆಲಸ ಮಾಡುತ್ತಿರುವ ಕಂಪನಿಯು ಸಿಎಸ್‌ಆರ್ ನಿಧಿ ಮೂಲಕ ಸಹಕಾರ ನೀಡುತ್ತಿದೆ.

ಆಂಥೋಣಿ ಅವರು ಕೇರಳದ ಕಲ್ಲಿಕೋಟೆಯವರು. ಹಲವಾರು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲಸಿದ್ದರು. ‘ನೀಡುವ ಹೃದಯ ಫೌಂಡೇಷನ್’ ಮೂಲಕ ಸಮಾಜಸೇವೆಯಲ್ಲಿ ತೊಡಗಿದ್ದಾರೆ.

ಶ್ರೀಲಂಕಾ ಸಂಸತ್‌ನಲ್ಲಿ ಎನ್‌ಪಿಪಿಗೆ ಬಹುಮತ

ಕೊಲಂಬೊ (ಪಿಟಿಐ): ಶ್ರೀಲಂಕಾದ ಅಧ್ಯಕ್ಷ ಅನುರಾ ಕುಮಾರ ಡಿಸ್ಸಾನಾಯಕೆ ಅವರ ನೇತೃತ್ವದ ನ್ಯಾಷನಲ್ ಪೀಪಲ್ಸ್ ಪವರ್ ಪಕ್ಷವು ಸಂಸತ್‌ಗೆ ನಡೆದ ಚುನಾವಣೆಯಲ್ಲಿ ಬಹುಮತ ಗಳಿಸಿದೆ.

ಮಾಲಿಮಾವಾ (ದಿಕ್ಸೂಚಿ) ಚಿಹ್ನೆಯಡಿ ಸ್ಪರ್ಧಿಸಿದ್ದ ಎನ್‌ಪಿಪಿ, ಸಂಸತ್ತಿನ 225 ಸ್ಥಾನಗಳಲ್ಲಿ 159 ಸ್ಥಾನಗಳನ್ನು ಗೆದ್ದಿದೆ ಎಂದು ಚುನಾವಣಾ ಆಯೋಗದ ವೆಬ್‌ಸೈಟ್‌ನಲ್ಲಿನ ಫಲಿತಾಂಶ ತಿಳಿಸಿದೆ.

ಸಜಿತ್ ಪ್ರೇಮದಾಸ ನೇತೃತ್ವದ ಸಮಗಿ ಜನ ಬಾಲವೇಗಯ (ಎಸ್‌ಜೆಬಿ) ಪಕ್ಷವು 40 ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

ಶ್ರೀಲಂಕಾದ ಸಂಸತ್‌ಗೆ ಗುರುವಾರ ಮತದಾನ ನಡೆದಿತ್ತು. ಶುಕ್ರವಾರ ಫಲಿತಾಂಶ ಪ್ರಕಟಗೊಂಡಿದೆ. 2010ರ ನಂತರ ಅತಿ ಕಡಿಮೆ ಮತದಾನ ಈ ಬಾರಿ ದಾಖಲಾಗಿದೆ.

ತಮಿಳರ ಪ್ರಾಬಲ್ಯದ ಜಾಫ್ನಾದಲ್ಲೂ ಹೆಚ್ಚು ಮತ ಗಳಿಸುವ ಮೂಲಕ ಎನ್‌ಪಿಪಿ ಇತಿಹಾಸ ನಿರ್ಮಿಸಿದೆ. ಇಲ್ಲಿನ ಆರು ಸ್ಥಾನಗಳಲ್ಲಿ ಮೂರರಲ್ಲಿ ಜಯ ಗಳಿಸಿದೆ.

ವಾರಕ್ಕೆ 70 ತಾಸು ಕೆಲಸ: ನಿಲುವು ಬದಲಿಲ್ಲ– ನಾರಾಯಣಮೂರ್ತಿ

‘ಮೋದಿ 100 ಗಂಟೆ ಕೆಲಸ ಮಾಡುತ್ತಾರೆ’



ಮುಂಬೈ (ಪಿಟಿಐ): ‘ವಾರದಲ್ಲಿ 70 ತಾಸು ಕೆಲಸ ಮಾಡಬೇಕು ಎಂಬ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ’ ಎಂದು ಇನ್ಫೊಸಿಸ್‌ನ ಸಹ ಸಂಸ್ಥಾಪಕ ಎನ್.ಆರ್. ನಾರಾಯಣಮೂರ್ತಿ ಸಮರ್ಥಿಸಿಕೊಂಡಿದ್ದಾರೆ.

ಮುಂಬೈನಲ್ಲಿ ನಡೆದ ಸಿಎನ್‌ಬಿಸಿ ಜಾಗತಿಕ ನಾಯಕತ್ವ ಶೃಂಗಸಭೆಯಲ್ಲಿ ಮಾತನಾಡಿದ ಅವರು, ‘ಭಾರತದ ಅಭಿವೃದ್ಧಿಗೆ ತ್ಯಾಗ ಬೇಕಿದೆ; ವಿಶ್ರಾಂತಿ ಅಲ್ಲ. ದಯವಿಟ್ಟು ಕ್ಷಮಿಸಿ. ನನ್ನ ಉಸಿರು ಇರುವವರೆಗೂ ಈ ನನ್ನ ನಿಲುವನ್ನು ಬದಲಾಯಿಸಿಕೊಳ್ಳುವುದಿಲ್ಲ’ ಎಂದು ಹೇಳಿದರು.

‘ಅದು 1986ರ ಸಮಯ. ಆಗ ಭಾರತದಲ್ಲಿ ಐ.ಟಿ ಹಾಗೂ ಇತರೆ ವಲಯಗಳಲ್ಲಿ ವಾರದಲ್ಲಿ ಆರು ದಿನಗಳ ಬದಲು ಐದು ದಿನ ಕೆಲಸ ಮಾಡುವ ನೀತಿಯನ್ನು ಜಾರಿಗೊಳಿಸಲಾಯಿತು. ಇನ್ಫೊಸಿಸ್‌ನಲ್ಲಿ ಈ ನಿಯಮ ಜಾರಿಗೊಂಡ ವೇಳೆ ನನಗೆ ನಿರಾಶೆಯಾಯಿತು ಎಂದ ಅವರು, ನಾನು ಕಂಪನಿಯಿಂದ ನಿವೃತ್ತಿಯಾಗುವವರೆಗೂ ದಿನಕ್ಕೆ 14 ಗಂಟೆ ಕೆಲಸ ಮಾಡಿದ್ದೇನೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ವಾರದಲ್ಲಿ 100 ಗಂಟೆ ಕೆಲಸ ಮಾಡುತ್ತಾರೆ ಎಂಬ ಬಗ್ಗೆ ಗಮನ ಸೆಳೆದ ಅವರು, ‘ಮೋದಿ ಅವರು ಕಷ್ಟಪಟ್ಟು ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ನಾವು ಕಷ್ಟಪಟ್ಟು ಕೆಲಸ ಮಾಡುವ ಮೂಲಕ ಸುತ್ತಮುತ್ತ ಏನು ನಡೆಯುತ್ತಿದೆ ಎಂಬುದರ ಬಗ್ಗೆ ನಮ್ಮ ಮೆಚ್ಚುಗೆಯನ್ನು ಸೂಚಿಸಬೇಕಿದೆ’ ಎಂದರು.

‘ಕಠಿಣ ಪರಿಶ್ರಮಕ್ಕೆ ಪರ್ಯಾಯ ಎಂಬುದು ಇಲ್ಲ. ನೀವು ಹೆಚ್ಚು ಬುದ್ಧಿವಂತ ವ್ಯಕ್ತಿಯಾಗಿದ್ದರೂ ಶ್ರಮಪಟ್ಟು ಕೆಲಸ ಮಾಡಬೇಕಾಗುತ್ತದೆ. ಹಾಗಾಗಿ, ದೇಶದಲ್ಲಿ ನಾವು ಕಷ್ಟಪಟ್ಟು ಕೆಲಸ ಮಾಡಬೇಕಾಗಿದೆ. ಹಾಗಾಗಿ, ಕೆಲಸದ ಅವಧಿ ಕುರಿತ ನನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವುದಿಲ್ಲ’ ಎಂದು ಹೇಳಿದರು.

‘ನಾಗರಿಕ ಸೇವೆಗೆ ಬಿ–ಸ್ಕೂಲ್ ಅಭ್ಯರ್ಥಿಗಳ ಆಯ್ಕೆ ಮಾಡಿ’

ದೇಶದ ನಾಗರಿಕ ಸೇವೆಗಳಿಗೆ ಕೇಂದ್ರ ಲೋಕಸೇವಾ ಆಯೋಗದ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಬದಲು ಬ್ಯುಸಿನೆಸ್ ಸ್ಕೂಲ್‌ಗಳಿಂದ ಆಯ್ಕೆ ಮಾಡಬಹುದು. ಇದರಿಂದ ಸಾರ್ವಜನಿಕ ಸೇವೆಯು ಸುಧಾರಣೆಗೊಳ್ಳುತ್ತದೆ ಎಂದು ನಾರಾಯಣಮೂರ್ತಿ ಸಲಹೆ ನೀಡಿದರು.

ಪ್ರಸ್ತುತ ಯುಪಿಎಸ್‌ಇಯಿಂದ ವಿವಿಧ ಹಂತದಲ್ಲಿ ಕಠಿಣ ಪರೀಕ್ಷೆ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಬಿ–ಸ್ಕೂಲ್‌ನಿಂದ ಆಯ್ಕೆ ಮಾಡಿದವರಿಗೆ ಐಎಎಸ್ ಅಧಿಕಾರಿಗಳಿಗೆ ತರಬೇತಿ ನೀಡುವ ಮಸ್ಸೂರಿಯಲ್ಲಿಯೇ ತರಬೇತಿ ನೀಡಬಹುದು ಎಂದರು.

‘ಆಡಳಿತಾತ್ಮಕ ಮನಸ್ಥಿತಿಯು ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಬಳುವಳಿಯಾಗಿದೆ. ದೇಶವು ಆಡಳಿತಾತ್ಮಕ ಮನಸ್ಥಿತಿಯಿಂದ ನಿರ್ವಹಣೆ ಮಾದರಿಗೆ ಬದಲಾಗಬೇಕಿದೆ. ಮೋದಿ ಅವರು ತಮ್ಮ ಅಧಿಕಾರಾವಧಿಯಲ್ಲಿ ದೇಶದ ಆರ್ಥಿಕತೆ ಬೆಳವಣಿಗೆಗೆ ಉತ್ತಮ ಕೆಲಸ ಮಾಡಿದ್ದಾರೆ. ಅವರು ನನ್ನ ಈ ಸಲಹೆಯನ್ನು ಪರಿಗಣಿಸಬಹುದಾಗಿದೆ’ ಎಂದು ಹೇಳಿದರು.

ಉನ್ನತ ಹುದ್ದೆ: ಟ್ರಂಪ್ ನಿಧಾನ ನಡೆ


ಡೊನಾಲ್ಡ್ ಟ್ರಂಪ್

ವಾಷಿಂಗ್ಟನ್ (ಎಪಿ): ಅಮೆರಿಕದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ತಮ್ಮ ಎರಡನೇ ಅವಧಿಯ ಆಡಳಿತಕ್ಕಾಗಿ ಉನ್ನತ ಹುದ್ದೆಗಳಿಗೆ ಆಯ್ಕೆ ಮಾಡುತ್ತಿರುವ ಪ್ರಕ್ರಿಯೆಯು ನಿಧಾನಗತಿಯಲ್ಲಿ ನಡೆದಿದೆ.

ಮೊದಲ ಅವಧಿಯಲ್ಲಿ ತಮ್ಮ ತಂಡದೊಳಗಿನ ಆಂತರಿಕ ಬೇಗುದಿಯಿಂದ ಹಲವು ಬಾರಿ ಮುಜುಗರಕ್ಕೀಡಾಗಿದ್ದ ಟ್ರಂಪ್, ಈ ಬಾರಿ ಎಚ್ಚರಿಕೆಯ ಹೆಜ್ಜೆಯನ್ನಿಟ್ಟಿದ್ದು ವಿಭಿನ್ನ ತಂಡವೊಂದನ್ನು ರೂಪಿಸುತ್ತಿದ್ದಾರೆ.

ತಮ್ಮ ಪ್ರಭಾವ, ವ್ಯಕ್ತಿತ್ವಕ್ಕೆ ಎಲ್ಲಿಯೂ ಚ್ಯುತಿಯಾಗದಂತೆ ನೋಡಿಕೊಳ್ಳುವ ಜೊತೆಗೆ ವರ್ಚಸ್ಸನ್ನು ವೃದ್ಧಿಸುವಂತಹ ತಂಡ ಕಟ್ಟುವಲ್ಲಿ ಆಸಕ್ತರಾಗಿದ್ದು, ಫೆಡರಲ್ ಸರ್ಕಾರದ ವರ್ಚಸ್ಸು ಹೆಚ್ಚಿಸುವವರಿಗೆ ಮನ್ನಣೆ ನೀಡುತ್ತಿದ್ದಾರೆ.

ಕೆಲವೊಬ್ಬರ ಆಯ್ಕೆಯು ಈಗಾಗಲೇ ಕೆಲವು ರಿಪಬ್ಲಿಕನ್ನರ ಅಸಮಾಧಾನಕ್ಕೂ ಕಾರಣವಾಗಿದ್ದು, ಸೆನೆಟ್‌ನಲ್ಲಿ ತೀವ್ರ ಪ್ರತಿರೋಧ ಎದುರಿಸಬೇಕಾದ ಸ್ಥಿತಿಯೂ ನಿರ್ಮಾಣವಾಗಿದೆ.

ನೇಮಕಗೊಂಡ ಪ್ರಮುಖರು: ವಿದೇಶಾಂಗ ಕಾರ್ಯದರ್ಶಿ– ಮಾರ್ಕೊ ರುಬಿಯೊ, ಅಟಾರ್ನಿ ಜನರಲ್– ಮ್ಯಾಟ್ ಗೆಟ್ಜ್, ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ– ತುಳಸಿ ಗಬ್ಬಾರ್ಡ್, ರಕ್ಷಣಾ ಕಾರ್ಯದರ್ಶಿ– ಪೀಟ್ ಹೆಗ್ಸೆತ್, ಹೋಮ್‌ಲ್ಯಾಂಡ್ ಸೆಕ್ಯೂರಿಟಿ ಸೆಕ್ರೆಟರಿ– ಕ್ರಿಸ್ಟಿ ನೋಮ್.

ಸಿಐಎ ನಿರ್ದೇಶಕ– ಜಾನ್ ರಾಟ್‌ಕ್ಲಿಫ್, ಆರೋಗ್ಯ ಮತ್ತು ಮಾನವ ಸೇವೆಗಳ ಕಾರ್ಯದರ್ಶಿ– ರಾಬರ್ಟ್ ಎಫ್. ಕೆನಡಿ ಜೂನಿಯರ್, ಹಿರಿಯರ ವ್ಯವಹಾರಗಳ ಕಾರ್ಯದರ್ಶಿ– ಡಗ್ ಕಾಲಿನ್ಸ್, ಆಂತರಿಕ ಕಾರ್ಯದರ್ಶಿ– ಡಗ್ ಬರ್ಗಮ್, ಪರಿಸರ ಸಂರಕ್ಷಣಾ ಸಂಸ್ಥೆ ನಿರ್ವಾಹಕರು– ಲೀ ಜೆಲ್ದಿನ್.

ಶ್ವೇತಭವನ: ಸಿಬ್ಬಂದಿ ಮುಖ್ಯಸ್ಥೆ–ಸೂಸಿ ವೈಲ್ಸ್, ರಾಷ್ಟ್ರೀಯ ಭದ್ರತಾ ಸಲಹೆಗಾರ– ಮೈಕ್ ವಾಟ್ಜ್, ಗಡಿ ಭದ್ರತೆಯ ಮುಖ್ಯಸ್ಥ– ಟಾಮ್ ಹೋಮನ್, ನೀತಿಯ ಉಪ ಮುಖ್ಯಸ್ಥ– ಸ್ಟೀಫನ್ ಮಿಲ್ಲರ್.

ಸಿಬ್ಬಂದಿ ಉಪ ಮುಖ್ಯಸ್ಥರು: ಡಾನ್ ಸ್ಕಾವಿನೊ, ಜೇಮ್ಸ್ ಬ್ಲೇರ್, ಟೇಲರ್ ಬುಡೋವಿಚ್, ವೈಟ್ ಹೌಸ್ ಕೌನ್ಸಿಲ್– ವಿಲಿಯಂ ಮೆಕ್‌ಗ್ಲಿನೆ.

ರಾಯಭಾರಿಗಳು: ಮಧ್ಯಪ್ರಾಚ್ಯ– ಸ್ಟೀವನ್ ವಿಟ್ಕಾಫ್, ಇಸ್ರೇಲ್– ಮೈಕ್ ಹುಕಾಬಿ, ವಿಶ್ವಸಂಸ್ಥೆ– ಎಲಿಸ್ ಸ್ಟೆಫಾನಿಕ್.


ಉತ್ತರ ಪ್ರದೇಶ: ವಿಧಾನಸಭೆ, ವಿಧಾನಪರಿಷತ್ ಹುದ್ದೆಗಳಲ್ಲಿ ಗಣ್ಯರ ಸಂಬಂಧಿಕರೇ ಹೆಚ್ಚು– ದೂರು

‘ಕುಟುಂಬ ರಾಜಕಾರಣದ ಅಬ್ಬರ’

ಲಖನೌ(ಪಿಟಿಐ): ‘ಉತ್ತರ ಪ್ರದೇಶ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಹುದ್ದೆಗಳ ಪೈಕಿ ಐದನೇ ಒಂದರಷ್ಟು ಹುದ್ದೆಗಳಲ್ಲಿ ಗಣ್ಯರ ಸಂಬಂಧಿಗಳನ್ನೇ ಭರ್ತಿ ಮಾಡಿದ್ದಾರೆ’ ಎಂದು ಮಾಧ್ಯಮದಲ್ಲಿ ಪ್ರಕಟವಾದ ವರದಿ ಮುಂದಿಟ್ಟುಕೊಂಡು, ವಿರೋಧ ಪಕ್ಷಗಳು ಬಿಜೆಪಿ ವಿರುದ್ಧ ‘ಕುಟುಂಬ ರಾಜಕಾರಣ’ದ ಆರೋಪ ಮಾಡಿವೆ.

ತನ್ನ ರಾಜಕೀಯ ವಿರೋಧಿಗಳತ್ತ ಯಾವಾಗಲೂ ಬಿಜೆಪಿ ಬಳಸುತ್ತಿದ್ದ ‘ಕುಟುಂಬ ರಾಜಕಾರಣ’ ಎಂಬ ವಾಗ್ಬಾಣವನ್ನು ಈಗ ವಿಪಕ್ಷಗಳು ಕೇಸರಿ ಪಕ್ಷದತ್ತಲೇ ತಿರುಗಿಸಿವೆ.

ರಾಜ್ಯ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿರುವ ಹುದ್ದೆಗಳ ಪೈಕಿ, ಐದನೇ ಒಂದರಷ್ಟು ಹುದ್ದೆಗಳಲ್ಲಿ ಅಧಿಕಾರಿಗಳು ಹಾಗೂ ರಾಜಕಾರಣಿಗಳ ಸಂಬಂಧಿಕರನ್ನೇ ನೇಮಕ ಮಾಡಲಾಗಿದೆ ಎಂಬ ಬಗ್ಗೆ ದಿ ಇಂಡಿಯನ್ ಎಕ್ಸ್‌ಪ್ರೆಸ್ ದೈನಿಕ ಇತ್ತೀಚೆಗೆ ವರದಿ ಪ್ರಕಟಿಸಿತ್ತು.



ಪ್ರಾಂತೀಯ ನಾಗರಿಕ ಸೇವೆಗಳು ಮತ್ತು ತನಿಖಾಧಿಕಾರಿ-ಗಳು (ಆರ್‌ಒ) ಮತ್ತು ಸಹಾಯಕ ತನಿಖಾಧಿಕಾರಿಗಳ (ಎಆರ್‌ಒ) ಹುದ್ದೆಗಳ ಭರ್ತಿಗೆ ಪರೀಕ್ಷೆಗಳು ನಡೆದಿದ್ದವು. 186 ಹುದ್ದೆಗಳ ಪೈಕಿ 38 ಅಭ್ಯರ್ಥಿಗಳು ಅಧಿಕಾರಿಗಳು ಹಾಗೂ ರಾಜಕಾರಣಿಗಳೊಂದಿಗೆ ನಂಟು ಹೊಂದಿದ್ದಾರೆ ಎಂದು ಪತ್ರಿಕೆ ವರದಿ ಮಾಡಿದೆ.

ಈ ವರದಿಯನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಆಡಳಿತಾರೂಢ ಬಿಜೆಪಿ ವಿರುದ್ಧ ಹರಿಹಾಯ್ದಿವೆ. ಅಂದಾಜು 2.5 ಲಕ್ಷದಷ್ಟು ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. 2020–21ರಲ್ಲಿ ಎರಡು ಹಂತಗಳಲ್ಲಿ ನೇಮಕಾತಿ ಪರೀಕ್ಷೆಗಳು ನಡೆದಿದ್ದವು.

ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದ ಅಭ್ಯರ್ಥಿಗಳ ಪೈಕಿ ಉತ್ತರ ಪ್ರದೇಶ ವಿಧಾನಸಭೆ ಸ್ಪೀಕರ್ ಅವರ ಪಿಆರ್‌ಒ ಹಾಗೂ ಅವರ ಸಹೋದರ, ಮಾಜಿ ಸಚಿವರೊಬ್ಬರ ಸೋದರ ಸಂಬಂಧಿ, ವಿಧಾನಪರಿಷತ್ ಸಚಿವಾಲಯ ಉಸ್ತುವಾರಿ ಅಧಿಕಾರಿಯ ಪುತ್ರ, ವಿಧಾನಸಭೆ ಸಚಿವಾಲಯದ ಉಸ್ತುವಾರಿ ಅಧಿಕಾರಿಯ ನಾಲ್ವರು ಸಂಬಂಧಿಕರು, ಸಂಸದೀಯ ವ್ಯವಹಾರಗಳ ಇಲಾಖೆ ಅಧಿಕಾರಿಯೊಬ್ಬರ ಪುತ್ರ ಹಾಗೂ ಪುತ್ರಿ, ಇಬ್ಬರು ಮಾಜಿ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿ (ಒಎಸ್‌ಡಿ) ಪುತ್ರ ಸೇರಿದ್ದಾರೆ ಎಂದೂ ಪತ್ರಿಕೆ ವರದಿ ಮಾಡಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ವಿಧಾನಸಭೆ ಮಾಜಿ ಸ್ಪೀಕರ್ ಹೃದಯನಾರಾಯಣ ದೀಕ್ಷಿತ್, ‘ಈ ವಿಷಯವು ನ್ಯಾಯಾಲಯದಲ್ಲಿದೆ. ಹೀಗಾಗಿ, ಈ ಕುರಿತು ಪ್ರತಿಕ್ರಿಯೆ ನೀಡುವುದು ಸರಿಯಲ್ಲ’ ಎಂದು ಹೇಳಿದ್ದಾರೆ.

‘ಈ ಪ್ರಕರಣದ ತನಿಖೆ ನಡೆಯುತ್ತಿದೆ. ಆದರೆ, ಚುನಾವಣೆ ವೇಳೆ ಟಿಕೆಟ್ ಹಂಚುವಾಗ ಮತ್ತು ಸರ್ಕಾರಿ ಉದ್ಯೋಗಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ಬಿಜೆಪಿ ಕುಟುಂಬವಾದಕ್ಕೆ ಮಣೆ ಹಾಕುತ್ತದೆ ಎಂಬುದು ಕಂಡುಬರುತ್ತದೆ’ ಎಂದು ವಿಧಾನ ಪರಿಷತ್‌ನ ಸಮಾಜವಾದಿ ಪಕ್ಷದ ಸದಸ್ಯ ಅಶುತೋಷ್ ಸಿನ್ಹಾ ಹೇಳಿದ್ದಾರೆ.

> ಈ ವಿಷಯ ನ್ಯಾಯಾಲಯದಲ್ಲಿದೆ. ಪ್ರಕರಣ ಕುರಿತು ತನಿಖೆಯಾಗಬೇಕು ಹಾಗೂ ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆಯಾಗಬೇಕು
>
> **ಅಶೋಕ್ ಸಿಂಗ್,** ಕಾಂಗ್ರೆಸ್ ಮುಖಂಡ

> ಇದು ವಿಧಾನ ಸಭೆ ಮತ್ತು ಪರಿಷತ್ತಿಗೆ ಸಂಬಂಧಿಸಿದ ವಿಷಯವಾದ ಕಾರಣ ಪ್ರತಿಕ್ರಿಯೆ ನೀಡಲು ಸಾಧ್ಯವಿಲ್ಲ. ಪ್ರಕರಣ ಕುರಿತು ಮಾಹಿತಿ ಪಡೆದು ಪ್ರತಿಕ್ರಿಯೆ ನೀಡುವೆ
>
> **ಮಾತಾ ಪ್ರಸಾದ್ ಪಾಂಡೆ,** ವಿಧಾನಸಭೆ ವಿರೋಧ ಪಕ್ಷದ ನಾಯಕ

> ಇದು ರಾಜ್ಯದ ಜನರು, ಉದ್ಯೋಗಾಕಾಂಕ್ಷಿಗಳು ಹಾಗೂ ಇಡೀ ಸಮಾಜಕ್ಕೆ ಮಾಡಿರುವ ಅನ್ಯಾಯ. ಇಂತಹ ನಡೆಗಳಿಂದ ದೇಶಕ್ಕೆ ಪ್ರಯೋಜನವಾಗುವುದಿಲ್ಲ
>
> **ಶೇಖರ್ ದೀಕ್ಷಿತ್,** ರಾಷ್ಟ್ರೀಯ ಕಿಸಾನ್ ಮಂಚ್ ಅಧ್ಯಕ್ಷ

ಸಂತ್ರಸ್ತರ ಪುನರ್ವಸತಿ: ಕೇಂದ್ರದ ಪ್ರತಿಕ್ರಿಯೆ ಕೇಳಿದ ‘ಸುಪ್ರೀಂ’

ನವದೆಹಲಿ (ಪಿಟಿಐ): ಲೈಂಗಿಕ ಶೋಷಣೆ ಉದ್ದೇಶದ ಮಾನವ ಕಳ್ಳಸಾಗಣೆಯ ಸಂತ್ರಸ್ತರಿಗೆ ಸಮಗ್ರ ಪುನರ್ವಸತಿ ಕಲ್ಪಿ-ಸುವುದಕ್ಕೆ ಸಂಬಂಧಿಸಿದ ಕಾನೂನಿನ ಕೊರತೆ ಕಾಡುತ್ತಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಈ ವಿಚಾರವನ್ನು ಪರಿಗಣಿಸಿ ಪ್ರಮಾಣಪತ್ರ ಸಲ್ಲಿಸುವಂತೆ ನ್ಯಾಯಮೂರ್ತಿಗಳಾದ ಜೆ.ಬಿ.ಪರ್ದೀವಾಲಾ ಮತ್ತು ಪಂಕಜ್ ಮಿತ್ತಲ್ ಅವರನ್ನೊಳಗೊಂಡ ಪೀಠವು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಿದೆ.

ಲೈಂಗಿಕ ದೌರ್ಜನ್ಯಕ್ಕೆ ಒಳಗಾದವರಿಗೆ ಸಂಬಂಧಿಸಿದಂತೆ 2015ರ ತೀರ್ಪಿನ ಪಾಲನೆಯ ವಿಚಾರದಲ್ಲಿ ಸಲ್ಲಿಕೆ ಆಗಿರುವ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

‘ಮಾನವ ಕಳ್ಳಸಾಗಣೆ ಮತ್ತು ಲೈಂಗಿಕ ಶೋಷಣೆ ಉದ್ದೇಶದ ಕಳ್ಳಸಾಗಣೆಯ ಸಂತ್ರಸ್ತರು ಜೀವನದಲ್ಲಿ ಬಹಳ ತೊಂದರೆ ಅನುಭವಿಸುವರು. ಈ ಅಪರಾಧಗಳು ಅವರ ಜೀವಿಸುವ ಹಕ್ಕು, ಸ್ವಾತಂತ್ರ್ಯ ಮತ್ತು ವೈಯಕ್ತಿಕ ಸುರಕ್ಷತೆಯನ್ನು ಉಲ್ಲಂಘಿಸುತ್ತವೆ. ಸಮಾಜದ ಅಂಚಿನಲ್ಲಿರುವ ವರ್ಗಗಳು ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳು ಇಂತಹ ಅಪರಾಧಗಳಿಗೆ ಒಳಗಾಗುತ್ತಿದ್ದಾರೆ’ ಎಂದು ಹೇಳಿದೆ.

‘ಇಂತಹ ಅಪರಾಧಗಳ ಸಂತ್ರಸ್ತರು ತಮ್ಮನ್ನು ಕಳ್ಳಸಾಗಣೆ ಮಾಡುವವರಿಂದ ಹೆಚ್ಚಾಗಿ ದೌರ್ಜನ್ಯಕ್ಕೆ ಒಳಗಾಗುತ್ತಾರೆ. ಹಲವು ರೀತಿಯ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಸಹಿಸಿಕೊಳ್ಳ-ಬೇಕಾಗುತ್ತದೆ. ಲೈಂಗಿಕವಾಗಿ ಹರಡುವ ರೋಗಗಳಿಗೆ ಒಳಗಾಗುವ ಹೆಚ್ಚಿನ ಅಪಾಯವಿದೆ’ ಎಂದಿದೆ.

‘ಸಂತ್ರಸ್ತರ ಮಾನಸಿಕ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮಗಳು ಉಂಟಾಗುತ್ತವೆ. ಅವರು ಪೋಸ್ಟ್ ಟ್ರಾಮಾಟಿಕ್ ಸ್ಟ್ರೆಸ್ ಡಿಸಾರ್ಡರ್ (ಪಿಟಿಎಸ್‌ಡಿ) ಮತ್ತು ಖಿನ್ನತೆಗೆ ಒಳಗಾಗಬಹುದು. ಅವರಿಗೆ ವೈದ್ಯರು ಮತ್ತು ಮನೋವೈದ್ಯರ ನಿರಂತರ ಚಿಕಿತ್ಸೆಯ ಅಗತ್ಯವಿರುತ್ತದೆ’ ಎಂದು ಪೀಠ ಹೇಳಿದೆ.

‘ಹವಾಮಾನ ಬದಲಾವಣೆ: ಶೇ 80ರಷ್ಟು ಭಾರತೀಯರಿಗೆ ಪರಿಣಾಮ’

ಬಾಕು (ಪಿಟಿಐ): ಭಾರತದಲ್ಲಿ ಬಹುತೇಕ ಎಲ್ಲರೂ ಈಗ ಹವಾಮಾನ ಬದಲಾವಣೆಯ ಪರಿಣಾಮಕ್ಕೆ ಗುರಿಯಾಗುತ್ತಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ ಮಾಜಿ ಮುಖ್ಯ ವಿಜ್ಞಾನಿ ಡಾ. ಸೌಮ್ಯ ಸ್ವಾಮಿನಾಥನ್ ಅವರು ಹೇಳಿದ್ದಾರೆ.



ಸೌಮ್ಯ ಸ್ವಾಮಿನಾಥನ್

ಅಜರ್‌ಬೈಜಾನ್‌ನಲ್ಲಿ ಸಿಒಪಿ29 ಪರಿಸರ ಸಮಾವೇಶದ ವೇಳೆ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಸೌಮ್ಯ ಅವರು ಈ ಹೇಳಿಕೆ ನೀಡಿದ್ದಾರೆ.

‘ದೇಶದ ಆರ್ಥಿಕ ಸ್ಥಿರತೆ ಮತ್ತು ಜನರ ಆರೋಗ್ಯ ಸೇರಿದಂತೆ ಸೂಕ್ಷ್ಮ ವಿಷಯಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಪರಿಹರಿಸಲು ಅಂತರ ರಾಷ್ಟ್ರೀಯ ಸಹಯೋಗದ ತುರ್ತು ಅಗತ್ಯವಿದೆ’ ಎಂದೂ ಒತ್ತಿ ಹೇಳಿದ್ದಾರೆ.

ದೇಶದ ಶೇ 80ರಷ್ಟು ಜನರು ಈ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಅವರು ವಿವರಿಸಿದರು.

ದೆಹಲಿ: 160 ಹೆಚ್ಚುವರಿ ಬಸ್

ನವದೆಹಲಿ (ಪಿಟಿಐ): ದೆಹಲಿಯ ಗಾಳಿಯ ಗುಣಮಟ್ಟವು ತೀವ್ರ ಕಳಪೆಯಾಗಿರುವುದ-ರಿಂದ ನಗರದಲ್ಲಿ ಜಾರಿ ಮಾಡಲಾಗಿರುವ ‘ಜಿಆರ್‌ಎಪಿ –3’ (ಗ್ರೇಡೆಡ್ ರೆಸ್ಪಾನ್ಸ್ ಆ್ಯಕ್ಷನ್ ಪ್ಲ್ಯಾನ್-3) ನಿಯಮವು ಮೂರನೇ ದಿನವಾದ ಶುಕ್ರವಾರವೂ ಮುಂದುವರಿಯಿತು.

‘ಜಿಆರ್‌ಎಪಿ –3’ ನಿಯಮಗಳ ಅಡಿಯಲ್ಲಿ ಅನೇಕ ವಾಹನಗಳ ಸಂಚಾರಕ್ಕೆ ನಿರ್ಬಂಧ ಹೇರಿರುವುದರಿಂದ ಸರ್ಕಾರವು ನಾಗರಿಕರಿಗೆ ಅನುಕೂಲವಾಗುವಂತೆ ಕೆಲವು ಸೌಲಭ್ಯಗ-ಳನ್ನು ಕಲ್ಪಿಸಿರುವುದಾಗಿ ದೆಹಲಿಯ ಪರಿಸರ ಸಚಿವ ಗೋಪಾಲ ರಾಯ್ ತಿಳಿಸಿದ್ದಾರೆ.

‘ಸಾರ್ವಜನಿಕ ಸಾರಿಗೆ ಬಳಕೆಯನ್ನು ಹೆಚ್ಚಿಸಿ, ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆ ಮಾಡಲು ದೆಹಲಿಯ ಸಾರಿಗೆ ನಿಗಮದಿಂದ ಹೆಚ್ಚುವರಿ 106 ಕ್ಲಸ್ಟರ್ ಬಸ್ ಸೇವೆಯನ್ನು ಪ್ರಾರಂಭಿಸಲಾಗಿದೆ. ಅಲ್ಲದೇ ಮೆಟ್ರೊ ರೈಲುಗಳು 60 ಹೆಚ್ಚುವರಿ ಟ್ರಿಪ್‌ಗಳನ್ನು ಮಾಡಲಿವೆ’ ಎಂದು ಮಾಹಿತಿ ನೀಡಿದ್ದಾರೆ.

ನಗರವು ಸಂಪೂರ್ಣವಾಗಿ ಕಲುಷಿತ ಗಾಳಿಯಿಂದ ಆವೃತವಾಗಿದ್ದು, ಗೋಚರತೆಯ ಪ್ರಮಾಣವು ತೀವ್ರವಾಗಿ ಕುಸಿದಿದೆ. ಎಕ್ಯುಐ (ವಾಯು ಗುಣಮಟ್ಟ ಸೂಚ್ಯಂಕ) ಶುಕ್ರವಾರ ಮುಂಜಾನೆ 9 ಗಂಟೆಗೆ 411ರಷ್ಟು (400ರಿಂದ 500 ತೀವ್ರ ಕಳಪೆ) ದಾಖಲಾಗಿದೆ. ರಾತ್ರಿ ವೇಳೆಯಲ್ಲಿ ನಗರದ ತಾಪಮಾನವು 15.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ.

ಏನೆಲ್ಲ ನಿಷೇಧ, ಯಾವುದೆಲ್ಲ ಕ್ರಮ?

- ಜಿಆರ್‌ಎಪಿ –3 ಅಡಿಯಲ್ಲಿ ದೆಹಲಿಯಲ್ಲಿ ಅನಿವಾರ್ಯವಲ್ಲದ ಕಟ್ಟಡ ಧ್ವಂಸ ಹಾಗೂ ನಿರ್ಮಾಣ ಚಟುವಟಿಕೆಗಳು ಸ್ಥಗಿತ, ಗಣಿಗಾರಿಕೆ ಹಾಗೂ ಕ್ರಷರ್‌ಗಳ ಕಾರ್ಯಾಚರಣೆಗೆ ನಿರ್ಬಂಧ
- ಖಾಸಗಿ ಕಟ್ಟಡಗಳ ನಿರ್ಮಾಣ ಹಾಗೂ ಧ್ವಂಸ ಕಾರ್ಯಾಚರಣೆಗಳಿಗೆ ಸಂಪೂರ್ಣ ನಿಷೇಧ
- ಎಲೆಕ್ಟ್ರಿಕ್ ಬಸ್ ಮತ್ತು ಸಿಎನ್‌ಜಿ ವಾಹನ ಹಾಗೂ ಬಿಎಸ್ –6 ಡೀಸೆಲ್ ಬಸ್‌ಗಳನ್ನು ಹೊರತುಪಡಿಸಿ ಉಳಿದ ಎಲ್ಲ ಅಂತರರಾಜ್ಯ ವಾಹನಗಳಿಗೆ ದೆಹಲಿಗೆ ಪ್ರವೇಶವಿಲ್ಲ
- ಬಿಎಸ್–3 ಪೆಟ್ರೋಲ್ ಹಾಗೂ ಬಿಎಸ್ –4 ಡೀಸೆಲ್‌ನ ನಾಲ್ಕು ಚಕ್ರ ವಾಹನಗಳ ಸಂಚಾರಕ್ಕೂ ನಿರ್ಬಂಧ
- 1ರಿಂದ 5ನೇ ತರಗತಿವರೆಗೆ ಆನ್‌ಲೈನ್ ತರಗತಿ ನಡೆಸಲು ಸೂಚನೆ
- ಗಾಳಿಯ ಗುಣಮಟ್ಟ ಮತ್ತಷ್ಟು ಹದಗೆಟ್ಟರೆ ಕೃತಕ ಮಳೆ ಸುರಿಸುವ ಹಾಗೂ ಇತರ ತುರ್ತು ಕ್ರಮಗಳನ್ನು ಕೈಗೊಳ್ಳಲು ಸಿದ್ಧತೆ



ದೆಹಲಿಯ ವಿಕಾಸ ಮಾರ್ಗದಲ್ಲಿ ಕಲುಷಿತ ಗಾಳಿಯಿಂದ ಆವೃತವಾಗಿದ್ದ ಹೊಗೆಯ ನಡುವೆ ವಾಹನಗಳು ಸಂಚರಿಸಿದವು — ಪಿಟಿಐ ಚಿತ್ರ

ಜಾರ್ಖಂಡ್: ಜಾತಿ ಗಣತಿ ಭರವಸೆ ನೀಡಿದ ಕಾಂಗ್ರೆಸ್‌ಗೆ ರಾಜನಾಥ್ ಸಿಂಗ್ ಸವಾಲು

ಮೀಸಲಾತಿ ಹಂಚಿಕೆ ನೀಲನಕ್ಷೆಯೊಂದಿಗೆ ಬನ್ನಿ

ರಾಂಚಿ (ಪಿಟಿಐ): ಅಧಿಕಾರಕ್ಕೆ ಬಂದರೆ ‘ಜಾತಿ ಗಣತಿ’ ನಡೆಸುವ ಭರವಸೆ ನೀಡಿರುವ ಕಾಂಗ್ರೆಸ್ ಮತ್ತು ಅದರ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಿರುವ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್, ‘ರಾಜಕೀಯ ಲಾಭಕ್ಕಾಗಿ ಮತಗಳನ್ನು ಸೆಳೆಯಲು ಕಾಂಗ್ರೆಸ್‌ನವರು ಮಾಡುತ್ತಿರುವ ತಂತ್ರ ‘ಇದು’ ಎಂದು ಶುಕ್ರವಾರ ಆರೋಪಿಸಿದರು.

ಜಾರ್ಖಂಡ್‌ನ ಮಹಾಗಾಮಾದಲ್ಲಿ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಸಿಂಗ್, ದೇಶದಲ್ಲಿರುವ ಹಲವು ಜಾತಿಗಳು ಮತ್ತು ಉಪಜಾತಿಗಳಿಗೆ ಮೀಸಲಾತಿಯ ಲಾಭಗಳನ್ನು ಹಂಚುವುದಕ್ಕಾಗಿ ವ್ಯವಸ್ಥಿತವಾದ ಯೋಜನೆಯನ್ನು ರೂಪಿಸುವಂತೆಯೂ ಅವರು ಕಾಂಗ್ರೆಸ್‌ಗೆ ಸವಾಲು ಹಾಕಿದರು.

‘2011ರಲ್ಲಿ ಸಾಮಾಜಿಕ ಆರ್ಥಿಕ ಜಾತಿ ಗಣತಿ ನಡೆಸಲಾಗಿದೆ. 46 ಲಕ್ಷ ಜಾತಿಗಳು, ಉಪಜಾತಿಗಳು ಮತ್ತು ಗೋತ್ರಗಳಿರುವುದು ಅವರಿಂದ ತಿಳಿದುಬಂದಿದೆ. ಸಮಾಜ ಕಲ್ಯಾಣ ಸಚಿವಾಲಯದ ಪ್ರಕಾರ, ದೇಶದಲ್ಲಿ 1,200 ಪರಿಶಿಷ್ಟ ಜಾತಿಗಳಿವೆ, 750 ಪರಿಶಿಷ್ಟ ಪಂಗಡಗಳಿವೆ ಮತ್ತು 2,500ದಷ್ಟು ಇತರ ಹಿಂದುಳಿದ ವರ್ಗಗಳಿವೆ. ಇಷ್ಟೊಂದು ಗುಂಪುಗಳಿಗೆ ಕಾಂಗ್ರೆಸ್ ಯಾವ ರೀತಿ ಮೀಸಲಾತಿ ಕೋಟಾಗಳನ್ನು ಹಂಚಿಕೆ ಮಾಡುತ್ತದೆ’ ಎಂದು ಅವರು ಪ್ರಶ್ನಿಸಿದರು.



> **ದೇಶದಲ್ಲಿ ಎಷ್ಟು ಜಾತಿಗಳಿವೆ ಎಂಬುದನ್ನು ರಾಹುಲ್ ಗಾಂಧಿ ಹೇಳಬೇಕು. ರಾಜಕೀಯವು ಜನರ ಸೇವೆಗಾಗಿ ಇರುವುದೇ ವಿನಾ ಸರ್ಕಾರ ರಚಿಸುವುದಕ್ಕಾಗಿ ಮಾತ್ರ ಅಲ್ಲ**
>
> **ರಾಜನಾಥ್ ಸಿಂಗ್,** ರಕ್ಷಣಾ ಸಚಿವ

‘ಅಂತಹ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲು ಕಾಂಗ್ರೆಸ್ ಸ್ಪಷ್ಟವಾದ ನೀಲನಕ್ಷೆಯನ್ನು ಮುಂದಿಡಬೇಕು’ ಎಂದೂ ರಾಜನಾಥ್ ಸಿಂಗ್ ಆಗ್ರಹಿಸಿದರು.

ಕಾಂಗ್ರೆಸ್ ಅವಕಾಶವಾದಿ ರಾಜಕಾರಣದಲ್ಲಿ ತೊಡಗಿದೆ ಎಂದು ಆರೋಪಿಸಿದ ಅವರು, ‘ಬಿಹಾರದಲ್ಲಿ ಆರ್‌ಜೆಡಿ, ಜಮ್ಮು ಮತ್ತು ಕಾಶ್ಮೀರದಲ್ಲಿ ನ್ಯಾಷನಲ್ ಕಾನ್ಫರೆನ್ಸ್‌ನಂತಹ ಪ್ರಾದೇಶಿಕ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಆ ಪಕ್ಷಗಳನ್ನು ನಾಶ ಮಾಡಿದೆ. ಈಗ ತಮಿಳುನಾಡಿನಲ್ಲಿ ಡಿಎಂಕೆಯನ್ನು ಮುಗಿಸುವುದಕ್ಕೆ ಹೊರಟಿದೆ. ಅಧಿಕಾರಕ್ಕೆ ಏರಲು ಮೈತ್ರಿ ಪಕ್ಷಗಳನ್ನು ಬಳಸಿಕೊಳ್ಳುವ ಕಾಂಗ್ರೆಸ್, ಅಂತಿಮವಾಗಿ ತನ್ನ ಮಿತ್ರಪಕ್ಷಗಳಿಗೇ ಹಾನಿಮಾಡುತ್ತದೆ’ ಎಂದು ದೂರಿದರು.

ರಾಜ್ಯ ಸರ್ಕಾರ ಭ್ರಷ್ಟ: ಜಾರ್ಖಂಡ್‌ನ ಆಡಳಿತಾರೂಢ ಜೆಎಂಎಂ–ಕಾಂಗ್ರೆಸ್–ಆರ್‌ಜೆಡಿ ಮೈತ್ರಿ ಕೂಟವು ವ್ಯಾಪಕ ಭ್ರಷ್ಟಾಚಾರದಲ್ಲಿ ತೊಡಗಿದ್ದು, ಮರಣ ಪ್ರಮಾಣಪತ್ರ ನೀಡುವುದಕ್ಕೂ ಲಂಚ ಪಡೆಯುತ್ತಿದೆ ಎಂದು ರಾಜನಾಥ್ ಸಿಂಗ್ ಆರೋಪಿಸಿದರು. ‘ಬಿಜೆಪಿ ಯಾವತ್ತೂ ಭ್ರಷ್ಟಾಚಾರದಲ್ಲಿ ತೊಡಗಿಲ್ಲ. ಇದುವರೆಗೆ 13 ಮುಖ್ಯಮಂತ್ರಿಗಳು ಜಾರ್ಖಂಡ್‌ನಲ್ಲಿ ಆಡಳಿತ ನಡೆಸಿದ್ದು, ಈ ಪೈಕಿ ಬಿಜೆಪಿಯ ಮೂವರು ಮುಖ್ಯಮಂತ್ರಿಗಳು ಕೂಡ ಯಾವುದೇ ಭ್ರಷ್ಟಾಚಾರ ಆರೋಪ ಎದುರಿಸಿರಲಿಲ್ಲ ಅಥವಾ ಜೈಲಿಗೂ ಹೋಗಿರಲಿಲ್ಲ’ ಎಂದರು.

ಅಲ್ಪಸಂಖ್ಯಾತರಿಗೆ ಮೀಸಲಾತಿ– ಕಾಂಗ್ರೆಸ್ ಬಯಕೆ: ನಡ್ಡಾ

ಠಾಣೆ (ಮಹಾರಾಷ್ಟ್ರ) (ಪಿಟಿಐ): ‘ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಸಂವಿಧಾನದ ಬಗ್ಗೆ ಲವಲೇಶವೂ ಗೊತ್ತಿಲ್ಲ. ಡಾ.ಬಿ.ಆರ್.ಅಂಬೇಡ್ಕರ್ ಅವರು ಧರ್ಮದ ಆಧಾರದಲ್ಲಿ ಮೀಸಲಾತಿಯನ್ನು ನೀಡಿಲ್ಲ ಎಂಬುದನ್ನು ಅರಿಯದೇ ಅವರು ಹೋದ ಕಡೆ ಎಲ್ಲ ಸಂವಿಧಾನ ಪ್ರತಿಯನ್ನು ಪ್ರದರ್ಶಿಸುತ್ತಿದ್ದಾರೆ’ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಶುಕ್ರವಾರ ಆರೋಪಿಸಿದರು.

ಠಾಣೆಯಲ್ಲಿ ಚಿಂತಕರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಲ್ಲಿ ಎಸ್‌ಸಿ ಎಸ್‌ಟಿಗಳಿಗೆ ಇರುವ ಮೀಸಲಾತಿ ಸೌಲಭ್ಯವನ್ನು ಅಲ್ಪಸಂಖ್ಯಾತರಿಗೆ ನೀಡಲು ಕಾಂಗ್ರೆಸ್ ಬಯಸುತ್ತಿದೆ’ ಎಂದೂ ಅವರು ದೂರಿದರು.

‘ಧರ್ಮದ ಆಧಾರದಲ್ಲಿ ಮೀಸಲಾತಿ ನೀಡುವುದಕ್ಕೆ ಸಂವಿಧಾನ ಅವಕಾಶ ನೀಡುವುದಿಲ್ಲ ಎಂಬುದು ಗಾಂಧಿಯವರಿಗೆ ತಿಳಿದಿಲ್ಲ. ‘ತಮ್ಮ ಪ್ರೀತಿಯ ಅಂಗಡಿಯಲ್ಲಿ (ಮೊಹಬ್ಬತ್ ಕೀ ದುಕಾನ್) ಅವರು ದ್ವೇಷದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದಾರೆ’ ಎಂದು ನಡ್ಡಾ ಟೀಕಿಸಿದರು.

‘ನಾವು ಓಲೈಕೆ ಮತ್ತು ಮತ ಬ್ಯಾಂಕ್ ರಾಜಕಾರಣ-ವನ್ನು ನಾವು ತಡೆಯಬೇಕಿದೆ. ಪ್ರಧಾನಿ ಮೋದಿ ಅವರು ಯಾರೊಬ್ಬರಿಗೂ ತಾರತಮ್ಯ ಮಾಡಿಲ್ಲ’ ಎಂದು ನಡ್ಡಾ ಹೇಳಿದರು.

ಈ ಬಾರಿಯ ಲೋಕಸಭಾ ಚುನಾವಣಾ ಪ್ರಚಾರದ ಸಂದರ್ಭದಲ್ಲಿ ಮತ್ತು ಈಗ ನಡೆಯುತ್ತಿರುವ ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣಾ ಪ್ರಚಾರಗಳಲ್ಲಿ ರಾಹುಲ್ ಗಾಂಧಿ ಅವರು ಸಂವಿಧಾನದ ಪ್ರತಿಯನ್ನು ಪ್ರದರ್ಶಿಸುತ್ತಾ, ‘ಬಿಜೆಪಿಯು ಸಂವಿಧಾನವನ್ನು ಬದಲಾಯಿಸಲು ಮತ್ತು ಮೀಸಲಾತಿಯನ್ನು ತೆಗೆದು ಹಾಕಲು ಬಯಸಿದೆ’ ಎಂದು ಹೇಳುತ್ತಾ ಬಂದಿದ್ದಾರೆ.

₹98 ಸಾವಿರದ ಐಸಿಯು ಕಾಟ್‌ಗೆ ₹1.91 ಲಕ್ಷ

ಒಂದನೇ ಪುಟದಿಂದ...

ಆದರೆ ವಾಸ್ತವದಲ್ಲಿ ₹98,000ಕ್ಕೆ ಅಂತಹ ಕಾಟ್ ಮಾರುಕಟ್ಟೆಯಲ್ಲಿ ಲಭ್ಯವಿತ್ತು. ಆದರೂ ಸರ್ಕಾರ ಇದನ್ನು ಪರಿಶೀಲಿಸದೆ, ಒಂದು ಕಾಟ್‌ಗೆ ₹1.50 ಲಕ್ಷದವರೆಗೂ ಪಾವತಿಸಬಹುದು ಎಂದು ಹೇಳಿದೆ. ಆ ಗರಿಷ್ಠ ಮಿತಿಯನ್ನೂ ಉಲ್ಲಂಘಿಸಿ ನಿರ್ದೇಶನಾಲಯವು ಹೆಚ್ಚಿನ ದರಕ್ಕೆ ಕಾಟ್‌ಗಳನ್ನು ಖರೀದಿಸಿದೆ.

ಐಸಿಯು ಕಾಟ್‌ಗಳ ಖರೀದಿಗೆ ನಿರ್ದೇಶನಾಲಯವು 2020–21ರಲ್ಲಿ ಕೊಟೇಷನ್ ಆಹ್ವಾನಿಸಿತ್ತು. ಟ್ರಿಯಾನ್ಸ್ ವೆಂಟಿಲೇಟರ್ಸ್ ತಲಾ ಒಂದು ಐಸಿಯು ಕಾಟ್ ಅನ್ನು ₹98,000ಕ್ಕೆ, ಬಯೊಮೆಡಿಕ್ ಕಂಪನಿಯು ತಲಾ ₹1.03 ಲಕ್ಷಕ್ಕೆ ಮತ್ತು ನ್ಯೂಟೆಕ್ ಗ್ಲೋಬಲ್ ಒಂದು ಕಾಟ್ ಅನ್ನು ₹1.91 ಲಕ್ಷಕ್ಕೆ ಪೂರೈಸುವುದಾಗಿ ಕೊಟೇಷನ್ ಸಲ್ಲಿಸಿದ್ದವು.

ನಿರ್ದೇಶನಾಲಯವು ಯಾವುದೇ ಸೂಕ್ತ ಕಾರಣ ನೀಡದೆ ₹98,000 ಮತ್ತು ₹1.03 ಲಕ್ಷದ ಕೊಟೇಷನ್‌ಗಳನ್ನು ತಿರಸ್ಕರಿಸಿದೆ. ನ್ಯೂಟೆಕ್ ಗ್ಲೋಬಲ್‌ನ ₹1.91 ಲಕ್ಷದ ಕೊಟೇಷನ್ ಒಪ್ಪಿಕೊಂಡಿದೆ. ವಾಸ್ತವದಲ್ಲಿ, ಕಡಿಮೆ ಬೆಲೆಗೆ ಖರೀದಿಸುವ ಉದ್ದೇಶವೇ ಇಲ್ಲ. ಬದಲಿಗೆ ಮಾರುಕಟ್ಟೆ ದರವನ್ನು ತಿಳಿದುಕೊಳ್ಳಲು ಕೊಟೇಷನ್ ಆಹ್ವಾನಿ-ಸಲಾಗಿದೆ. ಕೊಟೇಷನ್‌ನಲ್ಲಿ ವ್ಯಕ್ತವಾದ ದರವನ್ನು ಬಳಸಿಕೊಂಡು, ಮೊದಲೇ ಗುರುತಿಸಲಾಗಿದ್ದ ಪೂರೈಕೆದಾರರ ಜತೆ ಚೌಕಾಸಿ ನಡೆಸಲಾಗಿದೆ.



ಮೂರು ಪ್ರತ್ಯೇಕ ಆದೇಶಗಳ ಮೂಲಕ 3,285 ಐಸಿಯು ಕಾಟ್‌ಗಳನ್ನು ಖರೀದಿಸಲಾಗಿದೆ. 150 ಕಾಟ್‌ಗಳನ್ನು ತಲಾ ₹1.95 ಲಕ್ಷಕ್ಕೆ ನ್ಯೂಟೆಕ್ ಗ್ಲೋಬಲ್‌ನಿಂದ, 990 ಕಾಟ್‌ಗಳನ್ನು ತಲಾ ₹1.39 ಲಕ್ಷಕ್ಕೆ ಸೇವ್ ಮೆಡಿಕ್‌ನಿಂದ ಮತ್ತು 2,145 ಕಾಟ್‌ಗಳನ್ನು ತಲಾ ₹1.91 ಲಕ್ಷಕ್ಕೆ ನ್ಯೂಟೆಕ್ ಗ್ಲೋಬಲ್‌ನಿಂದ ಖರೀದಿಸಲಾಗಿದೆ.

ಈ ಮೂರೂ ಖರೀದಿಯ ಒಟ್ಟು ಮೊತ್ತ ₹57.68 ಕೋಟಿಯಾಗುತ್ತದೆ. ಆದರೆ ಕೊಟೇಷನ್‌ನಲ್ಲಿ ₹98,000 ಎಂದು ನಮೂದಿಸಿದ್ದ ಕಂಪನಿಯಿಂದಲೇ ಅಷ್ಟೂ ಕಾಟ್‌ಗಳನ್ನು ಖರೀದಿಸಿದ್ದರೆ, ಒಟ್ಟು ವೆಚ್ಚ ₹32.19 ಕೋಟಿಯಾಗು-ತ್ತಿತ್ತು. ಆದರೆ ₹25.49 ಕೋಟಿಯಷ್ಟು ಹೆಚ್ಚು ಪಾವತಿಸಿ, ಅಷ್ಟೇ ಕಾಟ್‌ಗಳನ್ನು ಖರೀದಿಸಲಾಗಿದೆ.

ಐಸಿಯು ಕಾಟ್‌ಗಳ ಖರೀದಿಯಲ್ಲಿ ಅಪಾರ ಪ್ರಮಾಣದ ಅಕ್ರಮವಾಗಿದೆ. ಖಾಸಗಿ ಕಂಪನಿಗಳಿಗೆ ಅಕ್ರಮ ಲಾಭ ಮಾಡಿಕೊಡುವ ಮತ್ತು ಆ ಮೂಲಕ ತಾವೂ ಅಕ್ರಮವಾಗಿ ಗಳಿಸಿಕೊಳ್ಳುವ ಉದ್ದೇಶದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಧಿಕಾರಿಗಳು ಹೆಚ್ಚಿನ ದರದಲ್ಲಿ ಖರೀದಿ ಪ್ರಕ್ರಿಯೆ ನಡೆಸಿದ್ದಾರೆ. ಇದರಲ್ಲಿ ಯಾರಿಗೆಲ್ಲಾ ಲಾಭವಾಗಿದೆ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಸಬೇಕಿದೆ. ಈ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳು ಮತ್ತು ಇತರರ ವಿರುದ್ಧ ಅಪರಾಧ ಪ್ರಕರಣ ದಾಖಲಿಸಿ ಕ್ರಮ ತೆಗೆದುಕೊಳ್ಳಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ವಸೂಲಿಯಾಗದ ದಂಡ

ಒಂದನೇ ಪುಟದಿಂದ...

ನ್ಯೂಟೆಕ್ ಗ್ಲೋಬಲ್ ಮತ್ತು ಸೇವ್‌ಮೆಡಿಕ್ ಕಂಪನಿಗಳು ಒಂದು ತಿಂಗಳಿಗೆ ಕಡಿಮೆ ಇಲ್ಲದಂತೆ ವಿಳಂಬ ಮಾಡಿವೆ. ಕೆಲವು ಕಾಟ್‌ಗಳನ್ನು ವರ್ಷದ ನಂತರ ಪೂರೈಸಿವೆ. ಈ ಎಲ್ಲ ಪ್ರಕರಣಗಳಲ್ಲಿ ಎರಡೂ ಕಂಪನಿಗಳಿಗೆ ಒಟ್ಟು ₹3.86 ಕೋಟಿಯಷ್ಟು ದಂಡ ವಿಧಿಸಿ, ವಸೂಲಿ ಮಾಡಬೇಕಿತ್ತು. ಅಧಿಕಾರಿಗಳು ಅದನ್ನು ಕಡೆಗಣಿಸಿದ್ದಾರೆ. ಆದರೆ ಇಂಥದ್ದೇ ಕೆಲವು ಕಾಟ್‌ಗಳನ್ನು ಸಣ್ಣ ಪ್ರಮಾಣದಲ್ಲಿ ಪೂರೈಕೆ ಮಾಡಿದ್ದ ಕಂಪನಿಗಳಿಂದ ಅಧಿಕಾರಿಗಳು ದಂಡ ವಸೂಲಿ ಮಾಡಿದ್ದಾರೆ. ತನಿಖೆ ನಡೆಸಿ, ದಂಡ ವಸೂಲಿ ಮಾಡಬೇಕು ಎಂದು ವರದಿ ಸೂಚಿಸಿದೆ.

ಬಿಲ್‌ನಲ್ಲಿ ₹2.79 ಕೋಟಿ ವ್ಯತ್ಯಾಸ

ಐಸಿಯು ಕಾಟ್ ಮತ್ತು ಸೆಮಿ ಫ್ಲಾನ್ ಕಾಟ್‌ಗಳ ಪೂರೈಕೆ ಸಂಬಂಧ ನ್ಯೂಟೆಕ್ ಗ್ಲೋಬಲ್ ಕಂಪನಿಯು ವೈದ್ಯಕೀಯ ಶಿಕ್ಷಣ ನಿರ್ದೇಶನಾ-ಲಯಕ್ಕೆ ₹49.40 ಕೋಟಿಯ ಬಿಲ್ ಸಲ್ಲಿಸಿದೆ. ನಿರ್ದೇಶನಾಲಯವು ಸಹ ಅಷ್ಟೇ ಮೊತ್ತವನ್ನು ಪಾವತಿಸಿದೆ ಎಂಬ ವಿವರ ನ್ಯಾಯಮೂರ್ತಿ ಡಿಕುನ್ಹ ಆಯೋಗಕ್ಕೆ ಕಂಪನಿಯು ನೀಡಿರುವ ದಾಖಲೆಗಳಲ್ಲಿ ಇದೆ.

ಆದರೆ, ‘ನ್ಯೂಟೆಕ್ ಗ್ಲೋಬಲ್ ಕಂಪನಿಗೆ ₹52.19 ಕೋಟಿ ಬಿಲ್ ಪಾವತಿಸಲಾಗಿದೆ ಎಂದು ನಿರ್ದೇಶನಾಲಯವು ದಾಖಲೆ ಸಲ್ಲಿಸಿದೆ. ಈ ದಾಖಲೆಗಳ ಪ್ರಕಾರ ಬಿಲ್ ಸಲ್ಲಿಕೆಯಾಗದಿದ್ದರೂ, ₹2.79 ಕೋಟಿಯಷ್ಟು ಹೆಚ್ಚುವರಿ ಮೊತ್ತವನ್ನು ಕಂಪನಿಗೆ ಪಾವತಿಸಲಾಗಿದೆ. ಕಂಪನಿ ಮತ್ತು ನಿರ್ದೇಶನಾಲಯ ಸಲ್ಲಿಸಿರುವ ದಾಖಲೆಗಳಲ್ಲಿ ಈ ವ್ಯತ್ಯಾಸ ಏಕೆ ಬಂದಿದೆ ಹಾಗೂ ಅಷ್ಟು ದೊಡ್ಡ ಮೊತ್ತ ಯಾರಿಗೆ ಹೋಗಿದೆ ಎಂಬುದನ್ನು ಪತ್ತೆ ಮಾಡಲು ತನಿಖೆ ನಡೆಸಬೇಕಿದೆ’ ಎಂದು ಆಯೋಗ ಹೇಳಿದೆ.

ಪಕ್ಷೇತರ ಅಭ್ಯರ್ಥಿ ನ್ಯಾಯಾಂಗ ವಶಕ್ಕೆ

ಜೈಪುರ (ಪಿಟಿಐ): ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟ್ ಮೇಲೆ ಹಲ್ಲೆ ನಡೆಸಿದ ಆರೋಪದ ಕಾರಣ ಬಂಧನಕ್ಕೊಳಗಾಗಿದ್ದ ಪಕ್ಷೇತರ ಅಭ್ಯರ್ಥಿ ನರೇಶ್ ಮೀನಾ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಟೊಂಕ್ ಜಿಲ್ಲೆಯ ನಿವಾಯ್‌ನ ನ್ಯಾಯಾಲಯಕ್ಕೆ ಆರೋಪಿಯನ್ನು ಹಾಜರುಪಡಿಸಲು ಪೊಲೀಸರು ನಿರ್ಧರಿಸಿದ್ದರು. ಆದರೆ, ಅವರ ಬೆಂಬಲಿಗರು ನ್ಯಾಯಾಲಯದ ಮುಂದೆ ಸಾವಿರಾರು ಸಂಖ್ಯೆಯಲ್ಲಿ ಜಮಾಯಿಸಿದ್ದರು. ಜೈಪುರ– ಕೋಟಾ ನಡುವಿನ ಹೆದ್ದಾರಿಯನ್ನು ಸ್ಥಗಿತಗೊಳಿಸುವುದಾಗಿ ಬೆದರಿಕೆ ಒಡ್ಡಿದ್ದರು.

ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ತಕ್ಷಣವೇ ಯೋಜನೆ ಬದಲಾಯಿಸಿದ ಪೊಲೀಸರು, ಆರೋಪಿಯನ್ನು ವರ್ಚುವಲ್ ಆಗಿ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದರು.

ದೇವಲಿ ಉನಿಯಾರಾ ವಿಧಾನಸಭಾ ಕ್ಷೇತ್ರಕ್ಕೆ ಬುಧವಾರ ಮತದಾನ ನಿಗದಿಯಾಗಿತ್ತು.

ಸಮರ್‌ವಾತಾ ಗ್ರಾಮದಲ್ಲಿ ಮೂವರು ನಕಲಿ ಮತದಾನ ನಡೆಸುತ್ತಿದ್ದಾರೆ ಎಂದು ಅಭ್ಯರ್ಥಿ ನರೇಶ್ ಮೀನಾ ಸಬ್ ಡಿವಿಷನಲ್ ಮ್ಯಾಜಿಸ್ಟ್ರೇಟ್ ಅಮಿತ್ ಚೌಧರಿಗೆ ದೂರು ನೀಡಿದ್ದರು. ಆದರೂ ಮತದಾನ ತಡೆಯುವಲ್ಲಿ ಅಧಿಕಾರಿ ವಿಫಲವಾಗಿದ್ದಾರೆ ಎಂದು ಆರೋಪಿಸಿ ಅಧಿಕಾರಿಯ ಕೊರಳಪಟ್ಟಿ ಹಿಡಿದು, ಹಲ್ಲೆ ನಡೆಸಿದ್ದರು.

ಅಭ್ಯರ್ಥಿ ವಿರುದ್ಧ ಸಾರ್ವಜನಿಕರ ಕೆಲಸಗಳಿಗೆ ತೊಂದರೆ, ಆಸ್ತಿಪಾಸ್ತಿ ನಷ್ಟ ಸೇರಿದಂತೆ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿದೆ.

ಪರಿಸ್ಥಿತಿ ನಿಯಂತ್ರಣಕ್ಕೆ: ನರೇಶ್ ಮೀನಾ ಅವರನ್ನು ಬಂಧಿಸಿದ ಬಳಿಕ ಟೊಂಕ್‌ನಲ್ಲಿ ಹಿಂಸಾಚಾರ ಭುಗಿಲೆದ್ದಿತ್ತು. ಆದರೀಗ ಪರಿಸ್ಥಿತಿಯು ನಿಯಂತ್ರಣದಲ್ಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಹಲ್ಲೆ ಬಳಿಕ ಪಕ್ಷೇತರ ಅಭ್ಯರ್ಥಿ ನರೇಶ್ ಮೀನಾ ಅವರನ್ನು ಬಂಧಿಸಿದ್ದ ರಾಜಸ್ಥಾನ ಪೊಲೀಸರು —ಪಿಟಿಐ ಚಿತ್ರ

ಘಟನೆ ಬಳಿಕ ಬೆಂಬಲಿಗರು ಕೆಲವು ಪ್ರದೇಶಗಳಲ್ಲಿ ಗಲಾಟೆ ಮಾಡಿದರು. ಬುಧವಾರ ರಾತ್ರಿ 60 ದ್ವಿಚಕ್ರ ವಾಹನಗಳು ಹಾಗೂ 18 ನಾಲ್ಕು ಚಕ್ರ ವಾಹನಗಳಿಗೆ ಬೆಂಕಿ ಹಚ್ಚಲಾಗಿತ್ತು. ಘಟನೆ ಬಳಿಕ 60 ಜನರನ್ನು ವಶಕ್ಕೆ ಪಡೆಯಲಾಗಿದೆ. ಹಿಂಸಾಚಾರದಿಂದಾಗಿ ಟೊಂಕ್–ಸವಾಯಿ ಮಾಧೋಪುರ ಮಾರ್ಗದಲ್ಲಿರುವ ಅಲಿಘಡ ಪಟ್ಟಣವನ್ನು 10 ಗಂಟೆ ಬಂದ್ ಮಾಡಲಾಗಿತ್ತು.

ನರೇಶ್ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಮುನ್ನ ಟೊಂಕ್ ಹಾಗೂ ಸುತ್ತಲಿನ ಸ್ಥಳಗಳಲ್ಲಿ ಬಿಗಿ ಭದ್ರತೆ ಒದಗಿಸಲಾಗಿತ್ತು. ಜೈಪುರ– ಕೋಟಾ ಹೆದ್ದಾರಿಯಲ್ಲಿ ಹೋಟೆಲ್‌ಗಳು ಸೇರಿದಂತೆ ವಿವಿಧ ಸ್ಥಳಗಳಲ್ಲಿ ಅವರ ಬೆಂಬಲಿಗರು ಜಮಾಯಿಸಿದ್ದರು ಎಂದು ಅವರು ತಿಳಿಸಿದರು.

‘18 ತುಂಬದ ಪತ್ನಿ ಜೊತೆ ಅಸಮ್ಮತಿಯ ಲೈಂಗಿಕ ಕ್ರಿಯೆಯೂ ಅತ್ಯಾಚಾರ’

ಮುಂಬೈ (ಪಿಟಿಐ): 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪತ್ನಿಯೊಂದಿಗೆ ಅಸಮ್ಮತಿಯ ಲೈಂಗಿಕ ಕ್ರಿಯೆ ನಡೆಸುವುದೂ ಅತ್ಯಾಚಾರವಾಗು-ತ್ತದೆ ಎಂದು ಬಾಂಬೆ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಜೊತೆಗೆ, ಅಪ್ರಾಪ್ತ ವಯಸ್ಸಿನ ಪತ್ನಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸಿದ ಪ್ರಕರಣದಲ್ಲಿ ಕೆಳಹಂತದ ನ್ಯಾಯಾಲಯವು ವ್ಯಕ್ತಿಯೊಬ್ಬನಿಗೆ 10 ವರ್ಷಗಳ ಶಿಕ್ಷೆ ವಿಧಿಸಿ ಹೊರಡಿಸಿರುವ ಆದೇಶವನ್ನೂ ಅದು ಎತ್ತಿಹಿಡಿದಿದೆ.

18 ವರ್ಷಕ್ಕಿಂತಲೂ ಕಡಿಮೆ ವಯಸ್ಸಿನ ಪತ್ನಿಯ ಮೇಲೆ ಲೈಂಗಿಕವಾಗಿ ದೌರ್ಜನ್ಯ ನಡೆಸಿದ 24 ವರ್ಷದ ವ್ಯಕ್ತಿಗೆ ಸೆಷನ್ ನ್ಯಾಯಾಲಯವೊಂದು ಮಕ್ಕಳ ಮೇಲಿನ ಲೈಂಗಿಕ ಅಪರಾಧ ತಡೆ ಕಾಯ್ದೆ ಮತ್ತು ಐಪಿಸಿ ನಿಯಮಗಳ ಅಡಿಯಲ್ಲಿ 10 ವರ್ಷಗಳ ಜೈಲು ಶಿಕ್ಷೆ ವಿಧಿಸಿ 2021ರಲ್ಲಿ ಆದೇಶ ಹೊರಡಿಸಿತ್ತು.

ಅಪರಾಧಿಯು ಈ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದ. ಸಂತ್ರಸ್ತೆಯು ತನ್ನ ಪತ್ನಿಯಾಗಿರುವುದರಿಂದ ಆಕೆಯೊಂದಿಗಿನ ಲೈಂಗಿಕ ಸಂಬಂಧವು ಅತ್ಯಾಚಾರ ಆಗುವುದಿಲ್ಲ. ಆಕೆಯ ಒಪ್ಪಿಗೆಯೊಂದಿಗೆ ಲೈಂಗಿಕ ಕ್ರಿಯೆ ನಡೆಸಲಾಗಿದೆ ಎಂದು ವಾದಿಸಿದ್ದ.

ಆತನ ಅರ್ಜಿಯನ್ನು ವಜಾ ಮಾಡಿರುವ ಬಾಂಬೆ ಹೈಕೋರ್ಟ್‌ನ ನಾಗ್ಪುರ ಪೀಠದ ನ್ಯಾಯಮೂರ್ತಿ ಜಿ.ಎ.ಸನಪ್ ಅವರು, ಪತ್ನಿಯ ವಯಸ್ಸು 18 ವರ್ಷಕ್ಕಿಂತ ಕಡಿಮೆ ಇದ್ದಾಗ ಆಕೆಯ ಸಮ್ಮತಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸಲಾಗಿದೆ ಎಂಬ ವಾದವನ್ನು ಒಪ್ಪಲಾಗದು ಎಂದು ಅಭಿಪ್ರಾಯ ಪಟ್ಟಿದ್ದಾರೆ.

‘ಮದುವೆಯಾಗಿರಲಿ ಅಥವಾ ಆಗದೇ ಇರಲಿ; 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಬಾಲಕಿಯೊಂದಿಗೆ ಲೈಂಗಿಕ ಕ್ರಿಯೆ ನಡೆಸುವುದು ಅತ್ಯಾಚಾರ. ಒಪ್ಪಿಗೆ ಇಲ್ಲದೆಯೇ 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಪತ್ನಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆಯೂ ಅತ್ಯಾಚಾರವೇ’ ಎಂದು ನ್ಯಾಯಪೀಠ ಹೇಳಿದೆ.

ತಾನು ಒಬ್ಬ ಪುರುಷನೊಂದಿಗೆ ಸಂಬಂಧ ಹೊಂದಿದ್ದೆ. ಆದರೆ, ವಿರೋಧದ ನಡುವೆಯೂ ಆತ ತನ್ನ ಮೇಲೆ ಅತ್ಯಾಚಾರ ಎಸಗಿದ್ದು ಮಾತ್ರವಲ್ಲದೇ ಗರ್ಭ ಧರಿಸುವಂತೆ ಮಾಡಿದ್ದ ಎಂದು ಬಾಲಕಿಯು 2019ರಲ್ಲಿ ಪೊಲೀಸರಿಗೆ ದೂರು ನೀಡಿದ್ದಳು.

ಆ ಸಂದರ್ಭದಲ್ಲಿ ಇಬ್ಬರೂ ಜೊತೆಗೆ ವಾಸಿಸುತ್ತಿದ್ದರು ಮತ್ತು ಮದುವೆಯೂ ಆಗಿದ್ದರು. ಆದರೆ, ಗರ್ಭಪಾತ ಮಾಡಿಸುವಂತೆ ಆತ ಮಹಿಳೆ ಮೇಲೆ ಒತ್ತಡ ಹಾಕಿದ್ದ.

ಮದುವೆಯನ್ನು ಪ್ರಹಸನದಂತೆ ಮಾಡಿ, ವ್ಯಕ್ತಿಯು ತನ್ನ ಮೇಲೆ ನಿರಂತರವಾಗಿ ಅತ್ಯಾಚಾರ ಎಸಗುವುದರ ಜೊತೆಗೆ ದೈಹಿಕವಾಗಿಯೂ ಹಲ್ಲೆ ಮಾಡಿದ್ದಾನೆ ಎಂದೂ ಆಕೆ ಆರೋಪಿಸಿದ್ದಳು.

ಮಹಿಳೆ ಗಂಡು ಮಗುವಿಗೆ ಜನ್ಮ ನೀಡಿರುವುದು ಮತ್ತು ಡಿಎನ್‌ಎ ವರದಿ ಪ್ರಕಾರ, ಶಿಕ್ಷೆಗೆ ಗುರಿಯಾದ ವ್ಯಕ್ತಿ ಮತ್ತು ದೂರುದಾರ ಮಹಿಳೆಯು ಮಗುವಿನ ತಂದೆ ತಾಯಿ ಎಂಬುದು ದೃಢಪಟ್ಟಿರುವುದನ್ನೂ ನ್ಯಾಯಪೀಠ ತನ್ನ ತೀರ್ಪಿನಲ್ಲಿ ಉಲ್ಲೇಖಿಸಿದೆ.

ಮುಖ್ಯಾಂಶಗಳು

- 2021ರಲ್ಲಿ ಆದೇಶ ನೀಡಿದ್ದ ಸೆಷನ್ಸ್ ನ್ಯಾಯಾಲಯ
- 18 ತುಂಬದ ಪತ್ನಿಯ ಸಮ್ಮತಿ ಇತ್ತು ಎಂಬ ವಾದ ಒಪ್ಪಲಾಗದು: ಕೋರ್ಟ್
- ಬಾಲಕಿಯೊಂದಿಗೆ ನಡೆಸುವ ಲೈಂಗಿಕ ಕ್ರಿಯೆ ಅತ್ಯಾಚಾರ: ನ್ಯಾಯಪೀಠ



ಒಡಿಶಾ: 24 ಹಳ್ಳಿಗಳು ‘ಸುನಾಮಿ ಎದುರಿಸಲು ಸನ್ನದ್ಧ’

ಭುವನೇಶ್ವರ (ಪಿಟಿಐ): ಒಡಿಶಾದ ಕರಾವಳಿಯ 24 ಗ್ರಾಮಗಳನ್ನು ಯುನೆಸ್ಕೊದ ‘ಅಂತರ ಸರ್ಕಾರಿ ಸಾಗರ ವಿಜ್ಞಾನ ಆಯೋಗ’ವು (ಐಒಸಿ) ‘ಸುನಾಮಿ ಎದುರಿಸಲು ಸನ್ನದ್ಧ’ ಎಂದು ಗುರುತಿಸಿದೆ.

ಇಂಡೊನೇಷ್ಯಾದಲ್ಲಿ ಇದೇ 11ರಂದು ನಡೆದ ಎರಡನೇ ಜಾಗತಿಕ ಸುನಾಮಿ ವಿಚಾರಸಂಕಿರಣದಲ್ಲಿ ಈ ಮಾನ್ಯತೆಯನ್ನು ನೀಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬಾಲೇಶ್ವರ, ಭದ್ರಕ್, ಕೇಂದ್ರಪಾಡಾ, ಜಗತ್‌ಸಿಂಗ್‌ಪುರ, ಪುರಿ ಮತ್ತು ಗಂಜಾಮ್ ಜಿಲ್ಲೆಗಳ ವ್ಯಾಪ್ತಿಯಲ್ಲಿ ಈ ಗ್ರಾಮಗಳಿವೆ.

2020ರಲ್ಲಿ ಜಗತ್‌ಸಿಂಗ್‌ಪುರ ಜಿಲ್ಲೆಯ ನೋಲಿಯಾಸಾಹಿ ಮತ್ತು ಗಂಜಾಮ್ ಜಿಲ್ಲೆಯ ವೆಂಕಟರಾಯಪುರ ಗ್ರಾಮಕ್ಕೆ ನೀಡಲಾಗಿದ್ದ ‘ಸುನಾಮಿ ಎದುರಿಸಲು ಸನ್ನದ್ಧ’ ಸ್ಥಾನ–ಮಾನ ಪ್ರಮಾಣಪತ್ರವನ್ನು ನವೀಕರಿಸಲಾಗಿದೆ.

ಈ 24 ಗ್ರಾಮಗಳಲ್ಲಿ ಸ್ಥಳೀಯರಿಗೆ ತರಬೇತಿ, ಸಮುದಾಯ ಜಾಗೃತಿ ಕಾರ್ಯಕ್ರಮಗಳು, ಸುನಾಮಿ ನಿರ್ವಹಣಾ ಯೋಜನೆಗಳ ತಯಾರಿಕೆ, ಅಣಕು ಪ್ರದರ್ಶನ ಹಾಗೂ ಸ್ಥಳಾಂತರದ ಮಾರ್ಗಗಳನ್ನು ಗುರುತಿಸುವ ವಿವಿಧ ಚಟುವಟಿಕೆ ನಡೆಸಲಾಗಿದೆ. ಭಾರತೀಯ ರಾಷ್ಟ್ರೀಯ ಸಾಗರ ವಿಜ್ಞಾನ ಮಾಹಿತಿ ಸೇವೆಗಳ ಕೇಂದ್ರದ ವಿಜ್ಞಾನಿಗಳು ಈ ಹಳ್ಳಿಗಳಿಗೆ ಭೇಟಿ ನೀಡಿದ್ದರು.

ಆದಿವಾಸಿ ಗೌರವ ದಿನದಂದು ಪ್ರಧಾನಿ ಮೋದಿ ಅಭಿಪ್ರಾಯ

‘ಆದಿವಾಸಿಗಳ ಕೊಡುಗೆಗೆ ಮನ್ನಣೆ ಸಿಕ್ಕಿಲ್ಲ’

ಜಮುಯಿ (ಬಿಹಾರ) (ಪಿಟಿಐ): ಭಾರತದ ಸ್ವಾತಂತ್ರ್ಯ ಚಳವಳಿಯಲ್ಲಿ ಆದಿವಾಸಿಗಳ ಕೊಡುಗೆಯನ್ನು ಗುರುತಿಸುವಲ್ಲಿ ಕಾಂಗ್ರೆಸ್ ನೇತೃತ್ವದ ಹಿಂದಿನ ಸರ್ಕಾರಗಳು ವಿಫಲವಾಗಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಟೀಕಿಸಿದರು.

‘ಸ್ವಾತಂತ್ರ್ಯ ಚಳವಳಿಯ ಎಲ್ಲಾ ಶ್ರೇಯಸ್ಸನ್ನು ಕೇವಲ ಒಂದು ಪಕ್ಷ ಮತ್ತು ಒಂದು ಕುಟುಂಬಕ್ಕೆ ನೀಡುವ ಪ್ರಯತ್ನ ನಡೆದಿತ್ತು’ ಎಂದು ಅವರು, ಕಾಂಗ್ರೆಸ್ ಅಥವಾ ಯಾವುದೇ ವ್ಯಕ್ತಿಯನ್ನು ಉಲ್ಲೇಖಿಸದೆ ದೂರಿದರು.

ಭಗವಾನ್ ಬಿರ್ಸಾ ಮುಂಡಾ ಅವರ 150 ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಆದಿವಾಸಿ ಗೌರವ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ದೇಶಕ್ಕೆ ಕೇವಲ ಒಂದು ಕುಟುಂಬದಿಂದ ಸ್ವಾತಂತ್ರ್ಯ ಸಿಕ್ಕದ್ದು ಎಂಬುದಾಗಿದ್ದರೆ, ಮುಂಡಾ ಅವರು ‘ಉಲ್ ಗುಲಾನ್’ ಚಳುವಳಿಯನ್ನು ಏಕೆ ಪ್ರಾರಂಭಿಸಿದ್ದರು ಎಂದು ಮೋದಿ ಪ್ರಶ್ನಿಸಿದರು.

‘ಹಿಂದಿನ ಸರ್ಕಾರಗಳ ಅವಧಿಯಲ್ಲಿ ಭಾರತದ ಆದಿವಾಸಿ ಸಮುದಾಯಕ್ಕೆ ಮನ್ನಣೆ ಸಿಕ್ಕಿರಲಿಲ್ಲ. ಅಲ್ಲದೆ ಅವರಿಗೆ ನ್ಯಾಯವೂ ಸಿಗಲಿಲ್ಲ’ ಎಂದ ಪ್ರಧಾನಿ, ‘ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಆದಿವಾಸಿ ನಾಯಕರು ನಿರ್ಣಾಯಕ ಪಾತ್ರ ವಹಿಸಿದ್ದಾರೆ’ ಎಂದರು.



ಭಗವಾನ್ ಬಿರ್ಸಾ ಮುಂಡಾ ಅವರ ಪ್ರತಿಮೆಗೆ ಪ್ರಧಾನಿ ನರೇಂದ್ರ ಮೋದಿ ಗೌರವ ಸಲ್ಲಿಸಿದರು ಪಿಟಿಐ ಚಿತ್ರ

ಆದಿವಾಸಿಗಳು ಪ್ರಕೃತಿಯೊಂದಿಗಿನ ಆಳವಾದ ಸಂಬಂಧ ಹೊಂದಿದ್ದಾರೆ. ಅವರದ್ದು ಪರಿಸರಸ್ನೇಹಿ ಜೀವನಶೈಲಿ-ಯಾಗಿದೆ ಎಂದ ಅವರು, ಆದಿವಾಸಿಗಳ ಜೀವನಮಟ್ಟ ಸುಧಾರಿಸಲು ತಮ್ಮ ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳಲ್ಲಿ ಆದಿವಾಸಿಗಳ ಭಾಗವಹಿಸುವಿಕೆಯನ್ನು ಪ್ರಶಂಸಿಸಿದ ಮೋದಿ, ಕ್ರೀಡಾ ಕ್ಷೇತ್ರದಲ್ಲಿ ಅವರ ಪಾತ್ರ ಮಹತ್ವದಾಗಿದ್ದು, ಆದಿವಾಸಿ ಕ್ರೀಡಾಪಟುಗಳನ್ನು ಉತ್ತೇಜಿಸಲು ಸರ್ಕಾರ ಅಗತ್ಯ ಮೂಲಸೌಕರ್ಯವನ್ನು ಒದಗಿಸುವುದಾಗಿ ಭರವಸೆ ನೀಡಿದರು.

ಬಿರ್ಸಾ ಮುಂಡಾ ಪ್ರತಿಮೆ ಅನಾವರಣ

ನವದೆಹಲಿ (ಪಿಟಿಐ): ಆದಿವಾಸಿ ನಾಯಕ ಬಿರ್ಸಾ ಮುಂಡಾ ಅವರ 150ನೇ ಜನ್ಮದಿನದ ಅಂಗವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಶುಕ್ರವಾರ ಇಲ್ಲಿನ ವರ್ತುಲ ರಸ್ತೆಯಲ್ಲಿರುವ ಬಾನ್ಸೆರಾ ಪಾರ್ಕ್‌ನಲ್ಲಿ ಮುಂಡಾ ಅವರ ಪ್ರತಿಮೆಯನ್ನು ಶುಕ್ರವಾರ ಅನಾವರಣಗೊಳಿಸಿದರು. ಪ್ರತಿಮೆಯು ಸುಮಾರು 3,000 ಕೆ.ಜಿ ತೂಕದ್ದಾಗಿದೆ.

2025ರ ನವೆಂಬರ್ 15 ರವರೆಗೆ ಇಡೀ ವರ್ಷ ‘ಆದಿವಾಸಿ ಗೌರವ ದಿನ’ ಎಂದು ಆಚರಿಸಲಾಗುತ್ತದೆ ಎಂದು ಅವರು ಹೇಳಿದರು.

‘ಸುಳ್ಳು ಭರವಸೆ’

ನವದೆಹಲಿ (ಪಿಟಿಐ): ಆದಿವಾಸಿಗಳಿಗೆ ನ್ಯಾಯ ಒದಗಿಸುವ ಬದಲು ಕೇಂದ್ರ ಸರ್ಕಾರ ಅವರ ‘ಕತ್ತು ಹಿಸುಕಲು’ ಪ್ರಯತ್ನಿಸುತ್ತಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶುಕ್ರವಾರ ಆರೋಪಿಸಿದರು.

‘ಜಮುಯಿಯಲ್ಲಿ ಭಗವಾನ್ ಬಿರ್ಸಾ ಮುಂಡಾ ಅವರ 150ನೇ ಜನ್ಮದಿನವನ್ನು ಆಚರಿಸುವ ವೇಳೆ ಪ್ರಧಾನಿ ಅವರು, ಆದಿವಾಸಿಗಳಿಗೆ ಸುಳ್ಳು ಭರವಸೆ ನೀಡುತ್ತಿದ್ದಾರೆ. ಇದರಿಂದ ನಾವು ಮೂರ್ಖರಾ-ಗಬಾರದು. ಅವರ ಧರ್ತಿ ಆಬಾ ಜಂಜಾಟಿಯಾ ಗ್ರಾಮ್ ಉತ್ಕರ್ಷ್ ಅಭಿಯಾನವು (ಡಿಎಜೆಜಿಯುಎ) ಅರಣ್ಯ ಹಕ್ಕುಗಳ ಕಾಯಿದೆ (2006) ಮತ್ತು ಆದಿವಾಸಿ ಸ್ವ-ಆಡಳಿತದ ಸಂಪೂರ್ಣ ಅಪಹಾಸ್ಯವಲ್ಲದೆ ಬೇರೆನೂ ಅಲ್ಲ’ ಎಂದು ಅವರು ‘ಎಕ್ಸ್’ನಲ್ಲಿ ಟೀಕಿಸಿದ್ದಾರೆ.

ಸೂರ್ಯಕುಮಾರ್ ಯಾದವ್ ಬಳಗಕ್ಕೆ ಸರಣಿ ಜಯ; ಅರ್ಷದೀಪ್ ಸಿಂಗ್‌ಗೆ 3 ವಿಕೆಟ್

ಸಂಜು, ತಿಲಕ್ ಅಬ್ಬರಕ್ಕೆ ಒಲಿದ ಜಯ

ಜೋಹಾನೆಸ್‌ಬರ್ಗ್ (ಪಿಟಿಐ): ಸಿಡಿಲುಮರಿಗಳಂತೆ ಅಬ್ಬರಿಸಿದ ಸಂಜು ಸ್ಯಾಮ್ಸನ್ ಮತ್ತು ತಿಲಕ್ ವರ್ಮಾ ಅವರ ಬ್ಯಾಟಿಂಗ್‌ಗೆ ಆತಿಥೇಯ ದಕ್ಷಿಣ ಆಫ್ರಿಕಾದ ಆಟಗಾರರು ಬೆಚ್ಚಿಬಿದ್ದರು.

ಆತಿಥೇಯ ತಂಡವು 135 ರನ್‌ಗಳ ಭಾರಿ ಅಂತರದಿಂದ ಸೋತಿತು. ಭಾರತ ತಂಡವು 3–1ರಿಂದ ಸರಣಿ ಜಯಿಸಿತು.

ಶುಕ್ರವಾರ ರಾತ್ರಿ ವಾಂಡರರ್ಸ್ ಕ್ರೀಡಾಂಗಣದಲ್ಲಿ ಆರಂಭಿಕ ಬ್ಯಾಟರ್ ಸಂಜು ಸ್ಯಾಮ್ಸನ್ (ಅಜೇಯ 109; 56ಎ, 4X6, 6X9) ಮತ್ತು ಮೂರನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ವರ್ಮಾ (ಅಜೇಯ 120; 47ಎ, 4X9, 6X10) ಅವರು ತಮ್ಮಲ್ಲಿಯೇ ಪೈಪೋಟಿಗೆ ಬಿದ್ದವರಂತೆ ಬ್ಯಾಟ್ ಬೀಸಿದರು. ಇವರಿಬ್ಬರೂ ಮುರಿಯದ ಎರಡನೇ ವಿಕೆಟ್ ಜೊತೆಯಾಟದಲ್ಲಿ ಸೇರಿಸಿದ 210 ರನ್‌ಗಳಿಂದಾಗಿ ತಂಡವು 20 ಓವರ್‌ಗಳಲ್ಲಿ 1 ವಿಕೆಟ್‌ಗೆ 283 ರನ್‌ಗಳ ಮೊತ್ತ ಗಳಿಸಿತು.

ಅದಕ್ಕುತ್ತರವಾಗಿ ದಕ್ಷಿಣ ಆಫ್ರಿಕಾ ತಂಡವು 18.2 ಓವರ್‌ಗಳಲ್ಲಿ 148 ರನ್ ಗಳಿಸಿ ಸೋತಿತು. ಅರ್ಷದೀಪ್ ಸಿಂಗ್ (20ಕ್ಕೆ3) ಉತ್ತಮ ಬೌಲಿಂಗ್ ಮಾಡಿದರು.ಟಾಸ್ ಗೆದ್ದ ಭಾರತ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಸಂಜು ಮತ್ತು ಅಭಿಷೇಕ್ ಅವರು ಉತ್ತಮ ನೀಡಿದರು. ಪವರ್‌ಪ್ಲೇನಲ್ಲಿ 73 ರನ್‌ಗಳು ಹರಿದು ಬಂದವು. 6ನೇ ಓವರ್‌ನಲ್ಲಿ ಅಭಿಷೇಕ್ ಅವರು ಸಿಪಾಮ್ಲಾ ಬೌಲಿಂಗ್‌ನಲ್ಲಿ ಕ್ಲಾಸನ್‌ಗೆ ಕ್ಯಾಚಿತ್ತರು. ಇಲ್ಲಿಂದ ತಿಲಕ್ ಮತ್ತು ಸಂಜು ಅಬ್ಬರದ ಆಟ ರಂಗೇರಿತು.




ಭಾರತದ ತಿಲಕ್ ವರ್ಮಾ ಶತಕ ಸಂಭ್ರಮ (ಎಡಚಿತ್ರ). ಭಾರತದ ಸಂಜು ಸ್ಯಾಮ್ಸನ್ ಬ್ಯಾಟಿಂಗ್ ವೈಖರಿ

ಅಭಿಷೇಕ್ ಶರ್ಮಾ ಔಟಾದಾಗ ಸಂಜು 17 ಎಸೆತಗಳಲ್ಲಿ 28 ರನ್ ಗಳಿಸಿ ಆಡುತ್ತಿದ್ದರು. ಆಗ ಕ್ರೀಸ್‌ಗೆ ಬಂದ ವರ್ಮಾ ಬೌಲರ್‌ಗಳನ್ನು ದಂಡಿಸಿದರು. ಅವರ ಆಟವು ಸಂಜು ಬ್ಯಾಟಿಂಗ್‌ಗಿಂತ ವೇಗವಾಗಿತ್ತು. ಸಂಜು 93 ರನ್ ಗಳಿಸಿದಾಗ, ವರ್ಮಾ ಕೂಡ ಅಷ್ಟೇ ರನ್ ಸೇರಿಸಿದ್ದರು. ಸಂಜು ಶತಕ ಪೂರೈಸಿದ ಮೂರು ಎಸೆತಗಳ ನಂತರ ತಾವೂ ನೂರರ ಗಡಿ ಮುಟ್ಟಿ ಸಂಭ್ರಮಿಸಿದರು.

ಈ ಸರಣಿಯಲ್ಲಿ ಸಂಜುಗೆ ಇದು ಎರಡನೇ ಶತಕ. ಅವರು ಮೊದಲ ಪಂದ್ಯದಲ್ಲಿ ಶತಕ ಬಾರಿಸಿದ್ದರು. ತಿಲಕ್ ಅವರಿಗೆ ಸತತ ಎರಡನೇ ಮೂರಂಕಿ ಮೊತ್ತದ ಸಾಧನೆ ಇದಾಗಿದೆ. ಕಳೆದ ಪಂದ್ಯದಲ್ಲಿಯೂ ಅವರು ಅಬ್ಬರದ ಶತಕ ಬಾರಿಸಿದ್ದರು.

ತಿಲಕ್ ಅವರು 255ರ ಸ್ಟ್ರೈಕ್‌ರೇಟ್ ನಲ್ಲಿ ಬ್ಯಾಟ್ ಬೀಸಿದರು. ಸಂಜು ಶತಕದಂಚಿನಲ್ಲಿ ಒಂಚೂರು ವೇಗ ತಗ್ಗಿಸಿದರು. ಅದರಿಂದಾಗಿ 194ರ ಸ್ಟ್ರೈಕ್‌ರೇಟ್ ಅವರದ್ದಾಯಿತು. ಆತಿಥೇಯ ತಂಡದ ಮಾರ್ಕೊ ಯಾನ್ಸನ್ ಬಿಟ್ಟರೆ ಉಳಿದೆಲ್ಲ ಬೌಲರ್‌ಗಳೂ ಭಾರಿ ದುಬಾರಿಯಾದರು. ಒತ್ತಡಕ್ಕೊಳಗಾದ ಫೀಲ್ಡರ್‌ಗಳೂ ವರ್ಮಾ ಅವರ 3 ಕ್ಯಾಚ್‌ಗಳನ್ನು ಕೈಚೆಲ್ಲಿದರು.

ಗುರಿ ಬೆನ್ನಟ್ಟಿದ ಆತಿಥೇಯ ತಂಡದ ಬ್ಯಾಟರ್‌ಗಳು ಹೆಚ್ಚು ಪ್ರತಿರೋಧ ತೋರಲಿಲ್ಲ. ಟ್ರಿಸ್ಟನ್ ಸ್ಟಬ್ಸ್ (43 ರನ್) ಮತ್ತು ಡೇವಿಡ್ ಮಿಲ್ಲರ್ (36 ರನ್) ಒಂದಿಷ್ಟು ಹೊತ್ತು ಹೋರಾಟ ಮಾಡಿದರು. ಇದರಿಂದಾಗಿ ತಂಡವು ಇನ್ನೂ ಕಡಿಮೆ ಮೊತ್ತಕ್ಕೆ ಕುಸಿಯುವುದು ತಪ್ಪಿತು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 1 ವಿಕೆಟ್‌ಗೆ 283 (ಸಂಜು ಸ್ಯಾಮ್ಸನ್ ಔಟಾಗದೆ 109, ಅಭಿಷೇಕ್ ಶರ್ಮಾ 36, ತಿಲಕ್ ವರ್ಮಾ ಔಟಾಗದೆ 120, ಲುಥೊ ಸಿಪಾಮ್ಲಾ 58ಕ್ಕೆ1) ದಕ್ಷಿಣ ಆಫ್ರಿಕಾ: 18.2 ಓವರ್‌ಗಳಲ್ಲಿ 148 (ಟ್ರಿಸ್ಟನ್ ಸ್ಟಬ್ಸ್ 43, ಡೇವಿಡ್ ಮಿಲ್ಲರ್ 36, ಮಾರ್ಕೊ ಯಾನ್ಸನ್ 29, ಅರ್ಷದೀಪ್ ಸಿಂಗ್ 20ಕ್ಕೆ3, ವರುಣ ಚಕ್ರವರ್ತಿ 42ಕ್ಕೆ2, ಅಕ್ಷರ್ ಪಟೇಲ್ 6ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 135 ರನ್ ಜಯ. ಸರಣಿಯಲ್ಲಿ 3–1ರಿಂದ ಜಯ. ಪಂದ್ಯ ಹಾಗೂ ಸರಣಿ ಶ್ರೇಷ್ಠ: ತಿಲಕ್ ವರ್ಮಾ

ಭಾರತಕ್ಕೆ ಚೀನಾ ಸವಾಲು ಇಂದು

ಅಗ್ರಸ್ಥಾನ ಪಡೆಯುವ ಛಲದಲ್ಲಿ ಸಲೀಮಾ ಟೆಟೆ ಬಳಗ

ರಾಜಗೀರ್, ಬಿಹಾರ (ಪಿಟಿಐ): ಹಾಲಿ ಚಾಂಪಿಯನ್ ಭಾರತ ತಂಡವು ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯಲ್ಲಿ ಶನಿವಾರ ಚೀನಾ ಎದುರು ಸೆಣಸಲಿದೆ.

ಈ ಟೂರ್ನಿಯಲ್ಲಿ ಉಭಯ ತಂಡಗಳು ಇದುವರೆಗೂ ಅಜೇಯವಾಗುಳಿದಿವೆ. ತಲಾ 9 ಅಂಕ ಗಳಿಸಿವೆ. ಆದ್ದರಿಂದ ಈ ಪಂದ್ಯವು ತೀವ್ರ ಜಿದ್ದಾಜಿದ್ದಿನಿಂದ ನಡೆಯುವ ನಿರೀಕ್ಷೆ ಗರಿಗೆದರಿದೆ. ವಿಶ್ವ ರ್‍ಯಾಂಕಿಂಗ್‌ನಲ್ಲಿ 6ನೇ ಸ್ಥಾನದಲ್ಲಿರುವ ಚೀನಾ ತಂಡವು ಪಾಯಿಂಟ್ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದೆ. ಚೀನಾ ತಂಡವು 21 ಗೋಲು ಗಳಿಸಿದ್ದು, ಭಾರತದ ಖಾತೆಯಲ್ಲಿ 18 ಗೋಲುಗಳಿವೆ. ಆದ್ದರಿಂದ ಚೀನಾ ತಂಡವು ಅಗ್ರಸ್ಥಾನ ಪಡೆದಿದೆ. ರೌಂಡ್ ರಾಬಿನ್ ಲೀಗ್‌ನಲ್ಲಿ ಮೊದಲ ನಾಲ್ಕು ಸ್ಥಾನ ಪಡೆಯುವ ತಂಡಗಳು ಸೆಮಿಫೈನಲ್ ಪ್ರವೇಶಿಸಲಿವೆ. ಕಣದಲ್ಲಿ ಒಟ್ಟು ಆರು ತಂಡಗಳು ಇವೆ.

ಕಳೆದ ಫೆಬ್ರುವರಿಯಲ್ಲಿ ನಡೆದಿದ್ದ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯಲ್ಲಿ ಉಭಯ ತಂಡಗಳು ಎರಡು ಬಾರಿ ಮುಖಾಮುಖಿಯಾಗಿದ್ದವು. ಎರಡೂ ಸಲ ಚೀನಾ ಮೇಲುಗೈ ಸಾಧಿಸಿತ್ತು. ಈ ಟೂರ್ನಿಯಲ್ಲಿ ಎರಡೂ ತಂಡಗಳು ಇದುವರೆಗೂ ಆಡಿರುವ ಪಂದ್ಯಗಳಲ್ಲಿ ಗೋಲುಗಳ ಮಳೆ ಸುರಿಸಿವೆ.

ಮಹಿಳೆಯರ ಏಷ್ಯನ್ ಚಾಂಪಿಯನ್ಸ್ ಟ್ರೋಫಿ

ಇಂದಿನ ಪಂದ್ಯಗಳು

ಜಪಾನ್ – ಮಲೇಷ್ಯಾ	Vs	ಮಧ್ಯಾಹ್ನ 12.15
ದಕ್ಷಿಣ ಕೊರಿಯಾ – ಥಾಯ್ಲೆಂಡ್	Vs	ಮಧ್ಯಾಹ್ನ 2.30
ಭಾರತ – ಚೀನಾ	Vs	ಸಂಜೆ 4.45

ಲೈವ್: ಸೋನಿ ಸ್ಪೋರ್ಟ್ಸ್


ಕಳೆದ ಪಂದ್ಯದಲ್ಲಿ ಭಾರತ ತಂಡವು ಥಾಯ್ಲೆಂಡ್ ಎದುರು 13–0 ಗೋಲುಗಳಿಂದ ಗೆದ್ದಿತ್ತು. ಸಲೀಮಾ ಟೆಟೆ ನಾಯಕತ್ವದ ಭಾರತ ತಂಡವು ಥಾಯ್ಲೆಂಡ್ ವಿರುದ್ಧ ಎಂಟು ಫೀಲ್ಡ್ ಗೋಲುಗಳನ್ನು ಗಳಿಸಿತ್ತು. ಐದು ಪೆನಾಲ್ಟಿ ಕಾರ್ನರ್ ಮೂಲಕ ಬಂದಿದ್ದವು.

ಕರ್ನಾಟಕ ತಂಡದಲ್ಲಿ ಚೇತನ್, ಮನ್ವಂತ್‌ಗೆ ಸ್ಥಾನ

ಬೆಂಗಳೂರು: ವಿಕೆಟ್ ಕೀಪರ್ ಎಲ್. ಆರ್. ಚೇತನ್ ಮತ್ತು ಬೌಲರ್ ಎಲ್. ಮನ್ವಂತಕುಮಾರ್ ಅವರು ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಕರ್ನಾಟಕ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಯು ಶುಕ್ರವಾರ 15 ಆಟಗಾರರಿರುವ ತಂಡವನ್ನು ಪ್ರಕಟಿಸಿದೆ. ಮಯಂಕ್ ಅಗರವಾಲ್ ನಾಯಕತ್ವ ವಹಿಸಲಿದ್ದಾರೆ. ದಕ್ಷಿಣ ಆಫ್ರಿಕಾದಲ್ಲಿ ಆಡುತ್ತಿರುವ ಭಾರತ ತಂಡದಲ್ಲಿರುವ ವೈಶಾಖ ವಿಜಯಕುಮಾರ್ ಅವರೂ ಈ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಭಾರತ ಎ ತಂಡದಲ್ಲಿರುವ ಬ್ಯಾಟರ್ ದೇವದತ್ತ ಪಡಿಕ್ಕಲ್ ಕೂಡ ಸ್ಥಾನ ಗಿಟ್ಟಿಸಿದ್ದಾರೆ.

ಇದೇ 23ರಿಂದ ಡಿಸೆಂಬರ್ 5ರವರೆಗೆ ಟೂರ್ನಿಯು ಇಂದೋರ್‌ನಲ್ಲಿ ನಡೆಯಲಿದೆ. ಕರ್ನಾಟಕವು ಆಡಲಿರುವ ಬಿ ಗುಂಪಿನಲ್ಲಿ ಉತ್ತರಾಖಂಡ, ತ್ರಿಪುರ, ಸೌರಾಷ್ಟ್ರ, ಸಿಕ್ಕಿಂ, ತಮಿಳುನಾಡು, ಬರೋಡಾ ಮತ್ತು ಗುಜರಾತ್ ತಂಡಗಳು ಇವೆ.



ಚೇತನ್

ಕರ್ನಾಟಕ ತಂಡ: ಮಯಂಕ್ ಅಗರವಾಲ್ (ನಾಯಕ), ಮನೀಷ್ ಪಾಂಡೆ (ಉಪನಾಯಕ), ದೇವದತ್ತ ಪಡಿಕ್ಕಲ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ಆರ್. ಸ್ಮರಣ್, ಕೆ.ಎಲ್.ಶ್ರೀಜಿತ್ (ವಿಕೆಟ್ ಕೀಪರ್), ವೈಶಾಖ ವಿಜಯಕುಮಾರ್, ಮ್ಯಾಕ್ನಿಲ್ ನರೊನ್ಹಾ, ವಾಸುಕಿ ಕೌಶಿಕ್, ಮನೋಜ್ ಭಾಂಡಗೆ, ವಿದ್ಯಾಧರ್ ಪಾಟೀಲ, ಎಲ್.ಆರ್.ಚೇತನ್ (ವಿಕೆಟ್ ಕೀಪರ್), ಶುಭಾಂಗ್ ಹೆಗಡೆ, ಎಲ್ ಮನ್ವಂತ್ ಕುಮಾರ್.

ಉತ್ತರಪ್ರದೇಶ ದಿಟ್ಟ ತಿರುಗೇಟು; ಕರ್ನಾಟಕದ ಶ್ರೇಯಸ್, ಮೊಹಸಿನ್‌ಗೆ ತಲಾ 2 ವಿಕೆಟ್

ಮಾಧವ್–ಆರ್ಯನ್ ದ್ವಿಶತಕದ ಜೊತೆಯಾಟ

ಲಖನೌ: ಮಾಧವ್ ಕೌಶಿಕ್ ಮತ್ತು ಆರ್ಯನ್ ಜುಯಾಲ್ ಅವರು ಶತಕ ದಾಖಲಿಸುವ ಮೂಲಕ ಇಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನ ಪಂದ್ಯದಲ್ಲಿ ಕರ್ನಾಟಕ ತಂಡಕ್ಕೆ ದಿಟ್ಟ ತಿರುಗೇಟು ನೀಡಿದರು.

ಏಕನಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕೇವಲ 89 ರನ್ ಗಳಿಸಿ ಕುಸಿದಿದ್ದ ಉತ್ತರ ಪ್ರದೇಶ ತಂಡವು ಮಾಧವ್ (134; 274ಎ) ಮತ್ತು ನಾಯಕ ಆರ್ಯನ್ (109; 257ಎ) ಅವರ ಆಟದ ಬಲದಿಂದ ಎರಡನೇ ಇನಿಂಗ್ಸ್‌ನಲ್ಲಿ 139 ರನ್‌ಗಳ ಮುನ್ನಡೆ ಸಾಧಿಸಿದೆ.

ಶುಕ್ರವಾರ ದಿನದಾಟದ ಅಂತ್ಯಕ್ಕೆ ಉತ್ತರ ಪ್ರದೇಶ ತಂಡವು 110 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 325 ರನ್ ಗಳಿಸಿದೆ. ಆದಿತ್ಯ ಶರ್ಮಾ (ಬ್ಯಾಟಿಂಗ್ 24) ಮತ್ತು ಕೃತಜ್ಞಾ ಸಿಂಗ್ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ. ಪಂದ್ಯದ ಕೊನೆಯ ಹಾಗೂ ನಾಲ್ಕನೇ ದಿನವಾದ ಶನಿವಾರ ಕರ್ನಾಟಕಕ್ಕೆ ಕಠಿಣ ಗುರಿಯೊಡ್ಡುವ ಛಲದಲ್ಲಿದೆ.

ಮೊದಲ ಇನಿಂಗ್ಸ್‌ನಲ್ಲಿ 275 ರನ್ ಗಳಿಸಿದ್ದ ಕರ್ನಾಟಕ ತಂಡವು 186 ರನ್‌ಗಳ ಉತ್ತಮ ಮುನ್ನಡೆ ಗಳಿಸಿತ್ತು. ಎರಡನೇ ದಿನವಾದ ಗುರುವಾರ ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ್ದ ತಂಡವು 26 ಓವರ್‌ಗಳಲ್ಲಿ 1ವಿಕೆಟ್‌ಗೆ 78 ರನ್ ಗಳಿಸಿತ್ತು. ಶುಕ್ರವಾರವೇ 'ಇನಿಂಗ್ಸ್–ಜಯ'ದ ಕನಸು ಕಂಡಿದ್ದ ಕರ್ನಾಟಕಕ್ಕೆ ಕೌಶಿಕ್ ಮತ್ತು ಆರ್ಯನ್ ನಿರಾಶೆ ಮೂಡಿಸಿದರು. ದಿನದ ಬಹುತೇಕ ಸಮಯ ಕ್ರೀಸ್‌ನಲ್ಲಿದ್ದ ಈ ಜೋಡಿಯು ಎರಡನೇ ವಿಕೆಟ್‌ಗೆ 246 ರನ್ ಸೇರಿಸಿದರು.

ಮೊದಲ ಇನಿಂಗ್ಸ್‌ನಲ್ಲಿ ಐದು ವಿಕೆಟ್ ಗಳಿಸಿದ್ದ ಮಧ್ಯಮವೇಗಿ ವಿ. ಕೌಶಿಕ್ ಹಾಗೂ ವಿದ್ಯಾಧರ್ ಪಾಟೀಲ ಅವರ ಪ್ರಯತ್ನಕ್ಕೆ ಫಲ ದಕ್ಕಲಿಲ್ಲ. ಇಡೀ ದಿನ ಬೌಲರ್‌ಗಳೂ ಮತ್ತು ಫೀಲ್ಡರ್‌ಗಳನ್ನು ಉತ್ತರಪ್ರದೇಶ ಜೋಡಿಯು ಸತಾಯಿಸಿತು. ತಾಳ್ಮೆಯುತ ಬ್ಯಾಟಿಂಗ್‌ನಿಂದಾಗಿ ಆತಿಥೇಯ ತಂಡವು ಈಗ ಉತ್ತಮ ಸ್ಥಿತಿ ತಲುಪಿದೆ. ಇನಿಂಗ್ಸ್‌ನ 85ನೇ ಓವರ್‌ನಲ್ಲಿ ಮಾಧವ್ ಕೌಶಿಕ್ ವಿಕೆಟ್ ಗಳಿಸಿದ ಸ್ಪಿನ್ನರ್ ಮೊಹಸಿನ್ ಖಾನ್ ಜೊತೆಯಾಟ ಮುರಿದರು. ಮಾಧವ್ ಕ್ಯಾಚ್ ಪಡೆದ ಮನೀಷ್ ಪಾಂಡೆ ನಿಟ್ಟುಸಿರುಬಿಟ್ಟರು.



ಕರ್ನಾಟಕದ ಶ್ರೇಯಸ್ ಗೋಪಾಲ್



ಆರ್ಯನ್ ಜುಯಾಲ್


ನಂತರದ ಓವರ್‌ನಲ್ಲಿಯೇ ಶ್ರೇಯಸ್ ಗೋಪಾಲ್ ಅವರು ರಿತುರಾಜ್ ಸಿಂಗ್ ವಿಕೆಟ್ ಕಬಳಿಸಿದರು. ಎಂಟು ಓವರ್‌ಗಳ ನಂತರ ಮತ್ತೊಮ್ಮೆ ಶ್ರೇಯಸ್ ಮೋಡಿ ಮಾಡಿದರು. ಅವರ ಓವರ್‌ನಲ್ಲಿ ಆರ್ಯನ್ ಜುಯಾಲ್ ಕ್ಯಾಚ್ ಪಡೆದ ನಿಕಿನ್ ಜೋಸ್ ಸಂಭ್ರಮಿಸಿದರು ಕ್ರೀಸ್‌ಗೆ ಬಂದ ಸಮೀರ್ ರಿಜ್ವಿ (30; 61ಎ) ಅವರು ಕಾಲೂರಲು ಮೊಹಸಿನ್ ಬಿಡಲಿಲ್ಲ.

ಮಯಂಕ್ ಅಗರವಾಲ್ ನಾಯಕತ್ವದ ಕರ್ನಾಟಕ ತಂಡವು ತನ್ನ ನಾಕೌಟ್ ಕನಸು ಜೀವಂತವಾಗುಳಿಯಬೇಕಾದರೆ ಇಲ್ಲಿ ಗೆಲುವು ಅಗತ್ಯವಾಗಿದೆ. ಆದ್ದರಿಂದ ಶನಿವಾರ ಬೆಳಿಗ್ಗೆ ಬೇಗನೆ ಉತ್ತರ ಪ್ರದೇಶದ ಐದು ವಿಕೆಟ್‌ಗಳನ್ನು ಕಬಳಿಸಿ, ಸಾಧಾರಣ ಗುರಿಯನ್ನು ಮುಟ್ಟಬೇಕು. ಇಲ್ಲವೇ ಡ್ರಾ ಮಾಡಿಕೊಂಡರೆ ಕನಿಷ್ಠ 3 ಅಂಕಗಳು ಸಿಗುತ್ತವೆ. ಸೋತರೆ ಮಾತ್ರ ಕರ್ನಾಟಕವು ನಾಕೌಟ್ ಹಾದಿಯಿಂದ ಹೊರಹೋಗುವ ಸಾಧ್ಯತೆ ಹೆಚ್ಚಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಉತ್ತರಪ್ರದೇಶ 89. ಕರ್ನಾಟಕ: 275: ಎರಡನೇ ಇನಿಂಗ್ಸ್: ಉತ್ತರಪ್ರದೇಶ: 110 ಓವರ್‌ಗಳಲ್ಲಿ 5ಕ್ಕೆ325 (ಮಾಧವ ಕೌಶಿಕ್ 134, ಆರ್ಯನ್ ಜುಯಾಲ್ 109, ಸಮೀರ್ ರಿಜ್ವಿ 30, ಆದಿತ್ಯ ಬ್ಯಾಟಿಂಗ್ 24; ಮೊಹಸಿನ್ ಖಾನ್ 69ಕ್ಕೆ 2, ಶ್ರೇಯಸ್ ಗೋಪಾಲ್ 83ಕ್ಕೆ 2

(ಮಾಹಿತಿ: ಬಿಸಿಸಿಐ.ಟಿವಿ)

ಅನ್ಷುಲ್ 10 ವಿಕೆಟ್ ದಾಖಲೆ



ಲಾಹ್ಲಿ, ಹರಿಯಾಣ: ಹರಿಯಾಣದ ಯುವ ಬೌಲರ್ ಅನ್ಷುಲ್ ಕಾಂಬೋಜ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಒಂದೇ ಇನಿಂಗ್ಸ್‌ನಲ್ಲಿ 10 ವಿಕೆಟ್ ಗಳಿಸಿದರು.

ಟೂರ್ನಿಯ ಇತಿಹಾಸದಲ್ಲಿ ಈ ಸಾಧನೆ ಮಾಡಿದ 3ನೇ ಬೌಲರ್ ಅವರಾಗಿದ್ದಾರೆ. ಬಂಗಾಳದ ಪ್ರೇಮಾಂಗ್ಸು ಚಟರ್ಜಿ ಮತ್ತು ರಾಜಸ್ಥಾನದ ಪ್ರದೀಪ್ ಸುಂದರಮ್ ಅವರು ಕೂಡ ಈ ಹಿಂದೆ 10 ವಿಕೆಟ್ ಸಾಧನೆ ಮಾಡಿದ್ದರು ಎಂದು 'ಕ್ರಿಕ್‌ಇನ್ಫೋ ಡಾಟ್ ಕಾಮ್' ವರದಿ ಮಾಡಿದೆ.

ಸಿ ಗುಂಪಿನ ಈ ಪಂದ್ಯದಲ್ಲಿ ಅನ್ಷುಲ್ (30.1–9–49–10) ಬೌಲಿಂಗ್ ಮುಂದೆ ಕೇರಳ ತಂಡವು 116.1 ಓವರ್‌ಗಳಲ್ಲಿ 291 ರನ್‌ಗಳಿಗೆ ಕುಸಿಯಿತು. ಆದರೆ ಇದಕ್ಕುತ್ತರವಾಗಿ ಬ್ಯಾಟಿಂಗ್ ಆರಂಭಿಸಿದ ಹರಿಯಾಣ ತಂಡದ ಬ್ಯಾಟರ್‌ಗಳೂ ವೈಫಲ್ಯ ಅನುಭವಿಸಿದರು. ಶುಕ್ರವಾರ ದಿನದಾಟದ ಅಂತ್ಯಕ್ಕೆ 61 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 139 ರನ್ ಗಳಿಸಿತು. ಇನಿಂಗ್ಸ್ ಮೊತ್ತ ಚುಕ್ತಾ ಮಾಡಲು ಇನ್ನೂ 152 ರನ್‌ಗಳ ಅಗತ್ಯವಿದೆ. ಪಂದ್ಯದ ಎರಡನೇ ದಿನವಾದ ಗುರುವಾರ ಅನ್ಷುಲ್ ಅವರು ಎರಡು ವಿಕೆಟ್ ಗಳಿಸಿದ್ದರು. ಮೂರನೇ ದಿನದಾಟದಲ್ಲಿ ಉಳಿದ ಎಂಟೂ ವಿಕೆಟ್‌ಗಳನ್ನೂ ತಮ್ಮ ಬುಟ್ಟಿಗೆ ಹಾಕಿಕೊಂಡರು. ಅವರ ದಾಳಿಯ ನಡುವೆಯೂ ಕೇರಳದ ಕುನ್ನುಮಾಳ್, ಸಚಿನ್ ಬೇಬಿ, ಅಕ್ಷಯ್ ಚಂದ್ರನ್ ಮತ್ತು ಅಜರುದ್ದೀನ್ ಅವರು ತಲಾ ಒಂದು ಅರ್ಧಶತಕ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಕೇರಳ: 116.1 ಓವರ್‌ಗಳಲ್ಲಿ 291 (ಅಜರುದ್ದೀನ್ 53, ಶೌನ್ ರೋಜರ್ 42, ಅನ್ಷುಲ್ ಕಾಂಭೋಜ್ 49ಕ್ಕೆ10) ಹರಿಯಾಣ: 61 ಓವರ್‌ಗಳಲ್ಲಿ 7ಕ್ಕೆ139 (ಲಕ್ಷ್ಯಣ್ಯ ದಲಾಲ್ 21, ಯುವರಾಜ್ 20, ಅಂಕಿತ ಕುಮಾರ್ 27, ನಿಶಾಂತ್ ಸಿಂಧು ಬ್ಯಾಟಿಂಗ್ 29, ನಿಧೀಶ್ 37ಕ್ಕೆ3)

(ಮೊಹಾಲಿ): ಬಿಹಾರ: 135 ಮತ್ತು 28.4 ಓವರ್‌ಗಳಲ್ಲಿ 98 (ಬಿಪಿನ್ ಸೌರಭ್ 33, ಗುರನೂರ್ ಬ್ರಾರ್ 14ಕ್ಕೆ5) ಪಂಜಾಬ್: 84.1 ಓವರ್‌ಗಳಲ್ಲಿ 300 (ಜಸ್ಕರಣವೀರ್ ಪಾಲ್ 65, ಸಲೀಲ್ ಅರೋರಾ 64, ಗುರನೂರ್ ಬ್ರಾರ್ 34, ಸಕೀಬ್ ಹುಸೇನ್ 114ಕ್ಕೆ4) : ಪಂಜಾಬ್ ತಂಡಕ್ಕೆ ಇನಿಂಗ್ಸ್ ಮತ್ತು 67 ರನ್ ಜಯ.

ಸಂಕ್ಷಿಪ್ತ ಸುದ್ದಿ

ಟೆಸ್ಟ್ ಕ್ರಿಕೆಟ್‌ಗೆ ಸೌಥಿ ವಿದಾಯ



ವೆಲ್ಲಿಂಗ್ಟನ್ (ಎಪಿ): ನ್ಯೂಜಿಲೆಂಡ್‌ನ ಅನುಭವಿ ವೇಗದ ಬೌಲರ್ ಟಿಮ್ ಸೌಥಿ ಅವರು ತವರಿನಲ್ಲಿ ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಸರಣಿಯ ಬಳಿಕ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ನೀಡುವುದಾಗಿ ಘೋಷಿಸಿದ್ದಾರೆ.

ಡಿಸೆಂಬರ್ 14ರಿಂದ ಹ್ಯಾಮಿಲ್ಟನ್‌ನಲ್ಲಿ ನಡೆಯುವ ಮೂರನೇ ಪಂದ್ಯ ಸೌಥಿ ಪಾಲಿಗೆ ಕೊನೆಯ ಟೆಸ್ಟ್ ಆಗಿರಲಿದೆ. 2008ರಲ್ಲಿ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲೇ ಅವರು ಟೆಸ್ಟ್‌ಗೆ ಪದಾರ್ಪಣೆ ಮಾಡಿದ್ದರು. ಚೊಚ್ಚಲ ಪಂದ್ಯದಲ್ಲಿ ಐದು ವಿಕೆಟ್ ಪಡೆಯುವ ಜೊತೆಗೆ ಅಜೇಯ 77 ರನ್ ಗಳಿಸಿ ಮಿಂಚಿದ್ದರು.

35 ವರ್ಷ ವಯಸ್ಸಿನ ಸೌಥಿ ಅವರು ಟೆಸ್ಟ್ ಕ್ರಿಕೆಟ್‌ನಲ್ಲಿ ನ್ಯೂಜಿಲೆಂಡ್ ಪರ ಅತಿ ಹೆಚ್ಚು ವಿಕೆಟ್ ಗಳಿಸಿದ ಎರಡನೇ ಬೌಲರ್ ಆಗಿದ್ದಾರೆ. ಈವರೆಗೆ 104 ಟೆಸ್ಟ್ ಪಂದ್ಯಗಳಲ್ಲಿ 385 ವಿಕೆಟ್‌ಗಳನ್ನು ಗಳಿಸಿದ್ದಾರೆ. ಕ್ರಿಕೆಟ್ ದಿಗ್ಗಜ ರಿಚರ್ಡ್ ಹ್ಯಾಡ್ಲಿ (431) ಕಿವೀಸ್ ಪರ ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆ ಹೊಂದಿದ್ದಾರೆ. ಟೆಸ್ಟ್‌ನಲ್ಲಿ 300ಕ್ಕೂ ಅಧಿಕ, ಏಕದಿನದಲ್ಲಿ 200ಕ್ಕೂ ಅಧಿಕ ಮತ್ತು ಟಿ20 ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ 100ಕ್ಕೂ ಅಧಿಕ ವಿಕೆಟ್ ಗಳಿಸಿದ ಏಕಮಾತ್ರ ಬೌಲರ್ ಅವರಾಗಿದ್ದಾರೆ.

ಕೆ.ಎಲ್. ರಾಹುಲ್‌ಗೆ ಗಾಯ

ಪರ್ತ್ (ಪಿಟಿಐ): ಭಾರತ ತಂಡದ ಬ್ಯಾಟರ್ ಕೆ.ಎಲ್. ರಾಹುಲ್ ಅವರು ಶುಕ್ರವಾರ ಇಲ್ಲಿ ಅಭ್ಯಾಸ ಪಂದ್ಯ ಆಡುವಾಗ ಚೆಂಡು ಬಡಿದು ಗಾಯಗೊಂಡರು.

ಆಸ್ಟ್ರೇಲಿಯಾ ಎದುರಿನ ಟೆಸ್ಟ್ ಸರಣಿಗಾಗಿ ನಡೆಯುತ್ತಿರುವ ಸಿದ್ಧತೆಯ ಅಂಗವಾಗಿ ಏರ್ಪಡಿಸಲಾಗಿದ್ದ ಇಂಟ್ರಾಸ್ಕ್ವಾಡ್ ಅಭ್ಯಾಸ ಪಂದ್ಯದಲ್ಲಿ ಅವರು ಬ್ಯಾಟಿಂಗ್ ಮಾಡುವಾಗ ಚೆಂಡು ಬಲ ಮೊಣಕೈಗೆ ಬಡಿಯಿತು. ಇದರಿಂದಾಗಿ ನೋವು ಅನುಭವಿಸಿದ ಅವರು ಫಿಸಿಯೊ ಜೊತೆಗೆ ಮೈದಾನ ತೊರೆದರು.

ಇದಕ್ಕೂ ಮುನ್ನ ಅವರು 29 ರನ್ ಗಳಿಸಿದ್ದರು. ತಂಡದ ಬೌಲರ್ ಪ್ರಸಿದ್ಧಕೃಷ್ಣ ಅವರ ಎಸೆತದಲ್ಲಿ ಅವರಿಗೆ ಪೆಟ್ಟಾಯಿತು.

ಬಾಲಕಿಯರ ತಂಡಕ್ಕೆ ನೇಸರ ನಾಯಕಿ



ಬೆಂಗಳೂರು: ಮೈಸೂರಿನ ನೇಸರ ಸಪ್ತಗಿರೀಶ್ ಅವರು ಕರ್ನಾಟಕದ 15 ವರ್ಷದೊಳಗಿನವರ ಬಾಲಕಿಯರ ಕ್ರಿಕೆಟ್ ತಂಡದ ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ಇದೇ 21ರಿಂದ ಡೆಹ್ರಾಡೂನ್‌ನಲ್ಲಿ ನಡೆಯಲಿರುವ ಬಿಸಿಸಿಐ 15 ವರ್ಷದೊಳಗಿನವರ ವಯೋಮಿತಿಯ ಏಕದಿನ ಟ್ರೋಫಿ ಟೂರ್ನಿಯಲ್ಲಿ ಈ ತಂಡವು ಆಡಲಿದೆ. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು (ಕೆಎಸ್‌ಸಿಎ) ಪ್ರಕಟಿಸಿರುವ ತಂಡ ಇಂತಿದೆ:

ನೇಸರ ಸಪ್ತಗಿರೀಶ್ (ನಾಯಕಿ), ಕಾಶ್ವಿ ಕಂಡಿಕುಪ್ಪ (ಉಪನಾಯಕಿ, ವಿಕೆಟ್‌ಕೀಪರ್), ಲಿಯಾಂಕ ಶೆಟ್ಟಿ, ಎಂ. ಸ್ತುತಿ (ವಿಕೆಟ್‌ಕೀಪರ್), ಅನ್ವಿಹಾ ನರೇಂದ್ರ ಮೈಸೂರು, ಸಿ. ಪ್ರತೀಕ್ಷಾ, ಓ.ವೈ. ರೋಹಿಣಿ ದೇಚಮ್ಮ, ತನಿಶಾ ಅಕಿಲೇಶ್, ಆರ್. ತನುಶ್ರೀ, ಕರೀಶ್ಮಾ ಗೌಡ ಯು.ಜೆ, ಎಂ. ಮಾರಿಯಾ ಫ್ರಾನ್ಸಿಕಾ, ಎಂ. ತನುಶ್ರೀ, ಎಸ್. ದೀಕ್ಷಾ, ಶೆಲಿನಾ ಲಕ್ಷ್ಮೀದಾಸ್, ಕೆ. ಹರ್ಷಿತಾ. ಕೋಚ್: ರಾಖಿ ಗಂಗಲ್, ರಕ್ಷಿತಾ ಕೃಷ್ಣಪ್ಪ, ಮ್ಯಾನೇಜರ್: ಸಬಾ ಸಿದ್ದಿಕ್, ಫಿಸಿಯೊ: ಕೆ.ಪಿ. ಪದ್ಮವಾಣಿ, ಕಂಡೀಷನಿಂಗ್: ಸೌಮ್ಯ ಗೌಡ.

ಚೆಸ್: ಕಾರ್ಲಸನ್ ಚಾಂಪಿಯನ್

ಕೋಲ್ಕತ್ತ (ಪಿಟಿಐ): ವಿಶ್ವದ ಅಗ್ರಮಾನ್ಯ ಚೆಸ್ ಆಟಗಾರ, ನಾರ್ವೆಯ ಮ್ಯಾಗ್ನಸ್ ಕಾರ್ಲಸನ್ ಅವರು ಟಾಟಾ ಸ್ಟೀಲ್ ಚೆಸ್ ಇಂಡಿಯಾ ರ್‍ಯಾಪಿಡ್ ಟೂರ್ನಿಯ ಓಪನ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಭಾರತದ ಆರ್. ಪ್ರಜ್ಞಾನಂದ ಅವರು ರನ್ನರ್ ಅಪ್ ಆದರು.

ಪ್ರೊ ಕಬಡ್ಡಿ: ಪೈರೇಟ್ಸ್‌ಗೆ ಜಯ

ನೊಯ್ಡಾ (ಪಿಟಿಐ): ದೇವಾಂಕ್ ದಲಾಲ್ ಮತ್ತು ಅಯಾನ್ ಲೋಚಬ್ ಅವರ ರೇಡಿಂಗ್ ಬಲದಿಂದ ಪಟ್ನಾ ಪೈರೇಟ್ಸ್ ಶುಕ್ರವಾರ ಪ್ರೊ ಕಬಡ್ಡಿ ಲೀಗ್‌ನ ಪಂದ್ಯದಲ್ಲಿ 52–31ರಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಮಣಿಸಿತು.

ಮತ್ತೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ 32–24ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಮಿನಿ ಒಲಿಂಪಿಕ್ಸ್ ಕ್ರೀಡಾಕೂಟ: ಅದಿತಿ, ನೈಶಾಗೆ ಚಿನ್ನ ಡಬಲ್

ಸಮರ್ಥ್‌ಗೆ ಸ್ವರ್ಣ ಟ್ರಿಪಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸಮರ್ಥ್ ಗೌಡ ಅವರು ಇಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್ ಕ್ರೀಡಾಕೂಟದ ಈಜು ಸ್ಪರ್ಧೆಯಲ್ಲಿ ಚಿನ್ನ ಟ್ರಿಪಲ್ ಸಾಧನೆ ಮಾಡಿದರು.

ಕರ್ನಾಟಕ ಒಲಿಂಪಿಕ್ ಸಂಸ್ಥೆ (ಕೆಒಎ) ಆಶ್ರಯದಲ್ಲಿ ನಡೆಯುತ್ತಿರುವ ಕೂಟದ ಈಜು ಸ್ಪರ್ಧೆಯಲ್ಲಿ ಸಮರ್ಥ್ ಗೌಡ ಅವರು 100 ಮೀ ಬ್ಯಾಕ್‌ಸ್ಟ್ರೋಕ್, 200 ಮೀ. ಬ್ಯಾಕ್‌ಸ್ಟ್ರೋಕ್ ಹಾಗೂ 100 ಮೀ ಬಟರ್‌ಫ್ಲೈ ವಿಭಾಗಗಳಲ್ಲಿ ಪ್ರಥಮ ಸ್ಥಾನ ಗಳಿಸಿದರು.

ಬಾಲಕಿಯರ ವಿಭಾಗದಲ್ಲಿ ಅದಿತಿ ರೆಲೆಕರ್ ಮತ್ತು ನೈಶಾ ಅವರು ತಲಾ ಎರಡು ಚಿನ್ನ ಗಳಿಸಿದರು.



ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಮಿನಿ ಒಲಿಂಪಿಕ್ಸ್‌ನಲ್ಲಿ ಆರ್ಚರಿ ಸ್ಪರ್ಧೆಯ ದೃಶ್ಯ —ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಫಲಿತಾಂಶಗಳು: ಬಾಲಕರು: ಈಜು:100 ಮೀ. ಫ್ರೀಸ್ಟೈಲ್: ರಿಷಿತ್ ರಂಗನ್ –1, ಅರ್ಣವ್ ರಾವ್–2, ಅಗಸ್ತ್ಯ ಮಂಜುನಾಥ್–3; 400ಮೀ. ಫ್ರೀಸ್ಟೈಲ್: ಶರಣ್. ಎಸ್.–1, ರಿಷಿತ್ ರಂಗನ್–2, ಅಕ್ಷಜ್ –3; 1500 ಮೀ. ಫ್ರೀಸ್ಟೈಲ್: ಅಕ್ಷಜ್ ಪಿ –1, ಕನಿಷ್ಕ್–2, ಆರವ್ ಜೆ –3; 50 ಮೀ. ಬ್ರೆಸ್ಟ್‌ಸ್ಟ್ರೋಕ್: ಯಶ್ ಎಚ್.ಪಾಲ್ –1, ಶ್ರೇಯ ಕೆ. ದೇವಯ್ಯ–2, ವೈ. ರೆಯಾನ್ಶ್ ಕಾಂತಿ–3 ; 100 ಮೀ. ಬ್ಯಾಕ್ ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್ –1, ಅದ್ವೈತ್ ವಿ.ಎಂ.–2, ವಿಹಾನ್ –3; 200 ಮೀ. ಬ್ಯಾಕ್‌ಸ್ಟ್ರೋಕ್: ಸಮರ್ಥ್ ಗೌಡ ಬಿ.ಎಸ್–1, ಅದ್ವೈತ್ ವಿ.ಎಂ. –2, ಚಿರಂತನ್–3 ; 100 ಮೀ. ಬಟರ್‌ಫ್ಲೈ: ಸಮರ್ಥ್ ಗೌಡ ಬಿ.ಎಸ್–1, ಶರಣ್ ಎಸ್. –2, ಜೆಡನ್–3; 200 ಮೀ. ವೈಯಕ್ತಿಕ ಮೆಡ್ಲೆ: ಶರಣ್ ಎಸ್. –1, ಆಡ್ರಿಯನ್ –2, ದ್ರುಪದ ರಾಮಕೃಷ್ಣ–3.

ಆರ್ಚರಿ: 30 ಮೀ.: ದಕ್ಷ ಎಸ್.ಪಿ–1 , ಆರ್ಯವ್ ತೇಜಸ್ ಎ.–2, ಬಲಭೀಮ್ –3.

ಸೈಕ್ಲಿಂಗ್: 10 ಕಿ.ಮೀ.: ನಿಖಿಲರಾದಯ್ ತೆರಿನಗದ್ದಿ –1, ಸಂಗಮೇಶ್ ತೋಳಮಟ್ಟಿ –2, ಗಣೇಶ್ ದಾಸನ್ನವರ್–3

ವೇಟ್‌ಲಿಫ್ಟಿಂಗ್:42ಕೆ.ಜಿ: ವಿ.ವಿಕ್ರಮ್‌ಶಿಂಧೆ–1, ಸಂಕೇತ್ –2, ಶ್ರವಣ್ ವಿನಯ್ –3.

ಕುಸ್ತಿ: ಫ್ರೀಸ್ಟೈಲ್ 48 ಕೆ.ಜಿ.: ಮೋಹನ್ ರಾಜ್–1, ಶಂಕರ್‌ಗೌಡ –2, ಮೋಹನ್ ಎಚ್. ಹಡಪದ, ನವೀನ್ ಎ.ಎಸ್–3; ಫ್ರೀಸ್ಟೈಲ್: 52 ಕೆಜಿ: ಮುತ್ತು ಬಿ ಅಡಿನ –1, ಚೇತನ್ ಗುತ್ತಲ–2, ಪ್ರಥಮೇಶ್ –3; 57 ಕೆ.ಜಿ : ರಫೀಕ್ ಮೌಲಾಸಾಬ್ ಶೇಕ್–1, ಯುವರಾಜ್. ಎಚ್–2, ಕುಶಾಲ್ ಆರ್., ಲಕ್ಷ್ಮಣ್ ಫಕಿರಪ್ಪ–3; 62 ಕೆ.ಜಿ: ಶ್ರೀಶೈಲ್ ಕಾರೆಭಿ–1, ಸಿದ್ದು ಕೆ. –2, ತಿಮ್ಮೇಶ್ –3; 75 ಕೆ.ಜಿ: ಕೃಷ್ಣ ಕೆ –1, ಸುಂಕಪ್ಪ ಎಂ. ಬೆಳ್ಳಿ– 2, ಶಿವಾನಂದ್ ಎಂ–3; ಗ್ರಿಕೊ ರೋಮನ್ 48 ಕೆ.ಜಿ: ಮುತ್ತು ರಾಜ್ ಎಂ. –1, ಸುಶೀಲ್ ಕುಮಾರ್ –2, ಪ್ರವೀಣ್, ಸಂಜಯ್ ಗೌಡ –3; 52 ಕೆ.ಜಿ: ವೆಂಕಟೇಶ್ ಚಂದ್ರ –1, ಸಂಜು ಸಿ.ಎನ್.–2, ಪ್ರವೀಣ್,ಮೊಹ್ಮದ್ ಜುನೆದ್ –3; 62 ಕೆ.ಜಿ: ಅರ್ಷದ್ ನಾಯಕ್ –1, ಚಿನ್ಮಯ್ ಗೌಡ–2, ಅಜಯ್ ಕಿತ್ತೂರ್, ಲಿಖಿತ್–3. 57 ಕೆ.ಜಿ: ಕಾರ್ತಿಕ್ ಎಂ. – 1, ಧ್ರುವ ಕೆ.–2, ಮಾರುತಿ ಎಸ್., ಆಕಾಶ್ ಆರ್–3;

ವುಶು: 56 ಕೆ.ಜಿ ಕೆಳಗಿನ ವಿಭಾಗ: ಮಂಜುನಾಥ್ ಯರಗೊಪ್ಪ –1, ಸಾಯಿನಾಥ್ ಅಂಕಲಗಿ –2, ವಿಶಾಲ್ ಅಶೋಕ್–3, 60ಕೆ.ಜಿ ಒಳಗಿನವರು: ದೀಪೇಶ್ –1, ಸಿದ್ದೇಶ್–2, ವಾಮನಾ, ಸಚಿನ್ –3; 45 ಕೆ.ಜಿ ಒಳಗಿನವರು: ಕುಮಾರ ಗೌಡ ಚೂರಿ –1, ಸಮರ್ಥ್ ಜಾಧವ್–2, ವಿನಾಯಕ, ಸರವೇಶ –3; 42 ಕೆ.ಜಿ. ಒಳಗಿನವರ : ಅಹ್ಮದ್ ಶರೀಫ್–1, ಸಾತ್ವಿಕ್–2, ಕ್ಷಿತೀಜ್, ಪ್ರದೀಪ್–3.

39 ಕೆ.ಜಿ. ಒಳಗಿನವರು : ಕೆ. ರಾಜು–1, ಪ್ರಜ್ವಲ್–2, ರಾಮಕೃಷ್ಣ, ಹೇಮಂತ್ –3 ; 52 ಕೆ.ಜಿ ಒಳಗಿನವರು: ಜನಿತ್ ದೀಪಕ್–1, ಸಮರ್ಥ್–2, ಕುಶಾಲ್, ಪವನ್ –3.

48 ಕೆ.ಜಿ.ಒಳಗಿನವರ: ಕಾರ್ತಿಕ್ –1, ಪ್ರಜ್ವಲ–2, ಮೊಹ್ಮದ್ ರೆಹಾನ್, ಅಮಿತ್ –3.

ಬಾಲಕಿಯರು: ಆರ್ಚರಿ: 30 ಮೀ: ಸ್ಪಂದನಾ ಆರ್ –1, ಐಶ್ವರ್ಯ–2, ಅನ್ನಪೂರ್ಣ –3. **ಸೈಕ್ಲಿಂಗ್:** 10 ಕಿ.ಮೀ.: ನಂದಿನಿ ಮುತ್ತಪ್ಪ–1, ಅಲ್ಫಿಯಾ –2, ಪ್ರಿಯಾಂಕಾ ಪಾಟೀಲ –3

ಈಜು: 100 ಮೀ ಫ್ರೀಸ್ಟೈಲ್: ತೀಸಿಯಾ ಸೊನಾರ್–1, ನೈಶಾ–2, ತ್ರೀಷಾ ಸಿಂಧು ಎಸ್. –3 ; 400ಮೀ. ಫ್ರೀಸ್ಟೈಲ್ ಅದಿತಿ ವಿನಾಯಕ್–1, ಸುಮಾನಿ ವೆನ್ನಿಗಾಲಾ –2, ಸುಮೇಧಾ –3, 1500 ಮೀ. ಫ್ರೀಸ್ಟೈಲ್ ಅದಿತಿ ವಿನಾಯಕ್ –1, ಪ್ರತೀಕ್ಷಾ ಎನ್.ಗೌಡ–2, ಸುಮಾನ್ವಿ ಚೆನ್ನಿಗಾಲಾ–3, 50 ಮೀ. ಬ್ರೆಸ್ಟ್‌ಸ್ಟ್ರೋಕ್ : ಕಿಯರಾ ಎಚ್. –1, ಗಗನಾ ಸಿ.ಎಂ. –2, ಮೃದುಲಾ ಪಿ. –3, ; 100ಮೀ.ಬ್ರೆಸ್ಟ್‌ಸ್ಟ್ರೋಕ್, ಗಗನಾ ಸಿ.ಎಂ. –1, ಕಿಯರಾ–2, ಸಿರಿ ಪ್ರೀತಮ್ –3, 100 ಮೀ. ಬ್ಯಾಕ್ ಸ್ಟ್ರೋಕ್: ನೈಶಾ –1, ಸುಮೇಧಾ –2, ಶ್ರಾವಣಿ ಜೆ. –3 ; 200 ಮೀ. ಬ್ಯಾಕ್ ಸ್ಟ್ರೋಕ್, ನೈಶಾ –1, ಶ್ರಾವಣಿ–2, ಸುಮೇಧಾ –3 ; 100 ಮೀ. ಬಟರ್‌ಫ್ಲೈ, ತ್ರಿಶಾ ಸಿಂಧು ಎಸ್. –1, ಆಧ್ಯಾ ಭಾರದ್ವಾಜ್ –2, ಸಾನ್ವಿ ಪ್ರವೀಣ್ ಪಾಟೀಲ–3. 200 ಮೀ. ವೈಯಕ್ತಿಕ ಮೆಡ್ಲೆ : ಅದಿತಿ ವಿನಾಯಕ್ –1, ಇದಿಕಾ ಭಟ್ –2 ಸಾನಿಕಾ ವೇಣುಪ್ರಕಾಶ್ –3. ವೇಟ್‌ಲಿಫ್ಟಿಂಗ್; 35 ಕೆ.ಜಿ.; ಸಾನಿಕಾ ಎಸ್–1, ಸ್ತಾರಾ ಜೊನ್ನಾ –2, ಅನ್ವಿತಾ –3; 40 ಕೆ.ಜಿ: ಪೂರ್ವಿ –1, ಅಕ್ಷರಾ –2, ವಂದ್ಯಾ –3. 45ಕೆ.ಜಿ. ನಿಶಾ –1, ಸಾನಿಕಾ–2, ವತ್ಸಲಾ –3. **ಕುಸ್ತಿ, ಫ್ರೀಸ್ಟೈಲ್** 50ಕೆ.ಜಿ.: ಸೌಂದರ್ಯ ವಾಲೆಕರ್ –1, ಸ್ನೇಹಾ ಬಿನ್ನಾಳ –2, ಸಿಂಚನಾ ಎನ್ –3; ಫ್ರೀಸ್ಟೈಲ್ 54 ಕೆಜಿ, ನಂದಿನಿ–1, ಅದಿತಿ ಕೋರೆ –2, ವೈಷ್ಣವಿ, ಶೆರಿನಾ ಡೆನ್ನಿಸ್–3; 58ಕೆ.ಜಿ, ಪೃಥ್ವಿ ಪಿ. –1, ಸಿಧಿ ಪ್ರಶಾಂತ್ –2, ನಂದಿತಾ, ಬಿಂದುಶ್ರೀ –3; 62 ಕೆಜಿ– ಸವಿತಾ–1, ವೆಲೆನಿಸಿಯಾ –2, ಶ್ರಾವಣಿ–3; 68 ಕೆಜಿ, ಜಾನ್ವಿ ಬಿ–1, ಮಾರ್ಷಲಿನ್ –2, ಕಲ್ಯಾಣಿ –3. **ವುಶು,** ಸಾನಶೋ, 45 ಕೆಜಿ ಕೆಳಗಿನವರು: ವರ್ಷಾ ಬೋಪಣ್ಣ –1, ಶ್ರೀ ವರ್ಧಿನಿ –2, ಕವಿತಾ, ಹಬಿಕಾ –3, 48ಕೆ.ಜಿ. ಸೀತಾ ಶೆರ್ಪಾ–1, ಕಾವೇರಿ ಬಸವರಾಜ್ –2, ತೇಜಸ್ವಿನಿ –3 ; 52ಕೆ.ಜಿ ಕೆಳಗಿನವರು, ಸೌಮ್ಯ ಶೆಟ್ಟಿ–1, ಸಾನ್ವಿ ಶೆಟ್ಟಿ2, ಅನ್ವಿತಾ ನಾಗೇಂದ್ರ ನಾಯಕ್ –3; 56 ಕೆ.ಜಿ ಕೆಳಗಿನವರು, ಅನುಶ್ರೀ ಗೌಡರ–1, ಅನು ವಾಡಿ–2, ಪ್ರಿಯದರ್ಶಿನಿ, ಪ್ರೀತಿ–3. 39.ಕೆ.ಜಿ. ಒಳಗಿನವರು, ಯಶಿಕಾ ಕಿರಣಕುಮಾರ್–1, ನಿಖಿತಾ ಶೀಗಿಹಳ್ಳಿ–2, ನಾಜ್ಮಿನ್, ಕುಸುಮಾಂಜಲಿ–3; 42ಕೆಜಿ ಒಳಗಿನವರು, ಆರ್. ಪೂರ್ವಿ–1, ವಿಜಯಲಕ್ಷ್ಮೀ–2, ಭೂಮಿಕಾ, ಭಾಗ್ಯಶ್ರೀ –3.

ಐಪಿಎಲ್ ಬಿಡ್: ಕಣದಲ್ಲಿ 574 ಮಂದಿ

ನವದೆಹಲಿ (ಪಿಟಿಐ): ಐಪಿಎಲ್ ಮೆಗಾ ಹರಾಜು ಪ್ರಕ್ರಿಯೆ ಇದೇ 24 ಮತ್ತು ನವೆಂಬರ್ 25 ರಂದು ಸೌದಿ ಅರೇಬಿಯಾದ ಜೆಡ್ಡಾ ನಗರದಲ್ಲಿ ನಡೆಯಲಿದ್ದು, ಒಟ್ಟು 574 ಆಟಗಾರರ ಅಂತಿಮ ಪಟ್ಟಿಯನ್ನು ಸಿದ್ಧಗೊಳಿಸಲಾಗಿದೆ.

₹2 ಕೋಟಿ ಮೂಲಬೆಲೆಯೊಂದಿಗೆ ಭಾರತದ ತಂಡದ ಬ್ಯಾಟರ್ ರಿಷಭ್ ಪಂತ್, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ ಮತ್ತು ಅರ್ಷದೀಪ್ ಸಿಂಗ್ ಹರಾಜು ಪಟ್ಟಿಯಲ್ಲಿರುವ ಪ್ರಮುಖ ಆಟಗಾರರು. 19 ವರ್ಷದೊಳಗಿನವರ ಭಾರತ ತಂಡವನ್ನು ಪ್ರತಿನಿಧಿಸಿದ ಬಿಹಾರದ ಹದಿಮೂರು ವರ್ಷದ ವಯಸ್ಸಿನ ವೈಭವ್ ಸೂರ್ಯವಂಶಿ ₹ 30 ಲಕ್ಷ ಮೂಲಬೆಲೆಯಲ್ಲಿ ಹರಾಜಿನಲ್ಲಿರುವ ಅತ್ಯಂತ ಕಿರಿಯ ಆಟಗಾರನಾಗಿದ್ದಾರೆ.

1574 ಆಟಗಾರರಿದ್ದ ಪಟ್ಟಿಯನ್ನು ಬಿಸಿಸಿಐ ಶುಕ್ರವಾರ 574ಕ್ಕೆ ಇಳಿಸಿ, 1000 ಮಂದಿಯನ್ನು ಕೈಬಿಟ್ಟಿದೆ. ಅಂತಿಮ ಪಟ್ಟಿಯಲ್ಲಿರುವ ಆಟಗಾರರ ಪೈಕಿ 366 ಮಂದಿ ಭಾರತೀಯರಾದರೆ, 208 ಮಂದಿ ವಿದೇಶಿಯರು. ಕ್ಯಾಪ್ಡ್ ಆಟಗಾರರಲ್ಲಿ ಭಾರತದ 48 ಮತ್ತು 193 ವಿದೇಶಿ ಆಟಗಾರರಿದ್ದಾರೆ.

₹2 ಕೋಟಿ ಮೂಲ ಬೆಲೆಯಲ್ಲಿ 81, ₹1.5 ಕೋಟಿ ಮೂಲಬೆಲೆಯಲ್ಲಿ 27, ₹1.25 ಕೋಟಿ ಮೂಲಬೆಲೆಯಲ್ಲಿ 18 ಮತ್ತು ₹1 ಕೋಟಿ ಮೂಲಬೆಲೆಯಲ್ಲಿ 23 ಮಂದಿ ಇದ್ದಾರೆ.